ಉಪನ್ಯಾಸ
ಗ್ರಂಥಮಾಲೆ

೧೯೬

ಆಚಣ್ಣ ಕವಿಯ

ವರ್ಧಮಾನ ಪುರಾಣ

ಬಿ. ಬಿ. ಮಹೀಶವಾಡಿ, ಎಂ.ಎ.,ಬಿ.ಎಡ್.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ನವಂಬರ, ೧೯೭೪

ಉಪನ್ಯಾಸ ಗ್ರಂಥಮಾಲೆ

೧೯೮

ಆಚಣ್ಣ ಕವಿಯ

ವರ್ಧಮಾನ ಪುರಾಣ

ಬಿ. ಬಿ. ಮಹೀಶವಾಡಿ, ಎಂ.ಎ;ಬಿ.ಎಡ್.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ನವಂಬರ, ೧೯೭೪

ಪ್ರಕಾಶಕರು:
ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ನವಂಬರ, ೧೯೭೪
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು:
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ-೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನ ಪ್ರಸಾರದ ಯೋಜನೆಯಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವ ದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೯೮ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೫-೧೨-೭೪

ಆರ್. ಸಿ. ಹಿರೇಮಠ
ಕುಲಪತಿ

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದ ವತಿಯಿಂದ ಏರ್ಪಡಿಸಲಾಗಿದ್ದ ಉತ್ತರ ಕನ್ನಡ ಜಿಲ್ಲೆಯ ಬೀಳಗಿ ಉಪನ್ಯಾಸ ಶಿಬಿರದಲ್ಲಿ ತಾ. ೨೩-೬-೧೯೭೪ ರಂದು 'ಆಚಣ್ಣ ಕವಿಯ ವರ್ಧಮಾನ ಪುರಾಣ' ಎಂಬ ವಿಷಯದ ಮೇಲೆ ಉಪನ್ಯಾಸ ಮಾಡುವ ಒಂದು ಸುಯೋಗವು ನನಗೆ ಪ್ರಾಪ್ತವಾಗಿತ್ತು. ಆ ಉಪನ್ಯಾಸವನ್ನು ಕರ್ನಾಟಕ ವಿಶ್ವವಿದ್ಯಾಲಯವು ಚಿಕ್ಕ ಪುಸ್ತಕ ರೂಪದಿಂದ ಪ್ರಕಟಿಸುವ ನಿರ್ಧಾರ ಕೈಕೊಂಡ ಮೇಲೆ ನಾನು ಆ ವಿಷಯವನ್ನೇ ವಿಸ್ತರಿಸಿ ಈ ಪುಟ್ಟ ಪುಸ್ತಕವನ್ನು ಬರೆದಿದ್ದೇನೆ.

ವರ್ಧಮಾನ ಪುರಾಣದಲ್ಲಿ ಬರುವ ಮಹಾವೀರ ವರ್ಧಮಾನ ತೀರ್ಥಂಕರನ ಚರಿತ್ರೆಯೇ ನಮಗೆ ಬೇಕಾಗಿದ್ದ ಮುಖ್ಯ ವಿಷಯವಾಗಿದ್ದುದರಿಂದ ಅದನ್ನು ಮಾತ್ರ ವಿವರವಾಗಿ ಕೊಡಲು ಈ ಪುಸ್ತಕದಲ್ಲಿ ಪ್ರಯತ್ನಿಸಿದ್ದೇನೆ. ಉಳಿದ ವಿಷಯವೆಲ್ಲವೂ ತೀರ್ಥಂಕರನ ಭವಾವಳಿಗೆ ಸಂಬಂಧಿಸಿದ ವಿಷಯವಾಗಿದ್ದು ಕಾವ್ಯದ ಬಹುಭಾಗವನ್ನು ವ್ಯಾಪಿಸಿದೆ. ಇಲ್ಲಿ ಆ ವಿಷಯವನ್ನು ಹೆಚ್ಚಾಗಿ ಹೇಳಲು ಹೋಗಿಲ್ಲ. ಕಾವ್ಯದ ಸಮಗ್ರ ಕಲ್ಪನೆ ಬರುವುದಕ್ಕಾಗಿ ಕೇವಲ ವರ್ಧಮಾನ ಪುರಾಣದ ಹದಿನಾರು ಆಶ್ವಾಸಗಳಲ್ಲಿ ಬರುವ ವಿಷಯದ ರೂಪರೇಷೆಯನ್ನು ಕೊಟ್ಟು, ಅನುಕ್ರಮವಾಗಿ ವರ್ಧಮಾನನ ೩೨ ಭವಗಳ ಪಟ್ಟಿಯನ್ನು 'ಭವಾವಳಿ'ಯಲ್ಲಿ ಉಲ್ಲೇಖಿಸಿ ಮುಂದುವರಿದು ಮುಖ್ಯ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದೇನೆ. ವರ್ಧಮಾನನ

ಜೀವನಕ್ಕೆ ಸಂಬಂಧಿಸಿದ ಕೆಲವು ಮಹತ್ವದ ಘಟನೆಗಳನ್ನು ಆಯ್ದುಕೊಂಡು, ಕವಿಯ ಭಾಷೆಯನ್ನು ಅಲ್ಲಲ್ಲಿ ಬಳಸಿಕೊಂಡು ಸಹೃದಯರ ರಸಾಸ್ವಾದನೆಗೆ ಅನುಕೂಲವಾಗುವಂತೆ ಕಥೆಗಳಂತಿರುವ ಚಿಕ್ಕ ಅಧ್ಯಾಯಗಳನ್ನು ರಚಿಸಿದ್ದೇನೆ. ಕೊನೆಗೆ ಕವಿಕಾವ್ಯವಿವೇಚನೆ ಮಾಡಿದ್ದೇನೆ.

ಉಪಲಬ್ಧ ವಿಷಯಗಳ ಆಧಾರದಿಂದ ಆಚಣ್ಣಕವಿಯ ಪರಿಚಯವನ್ನೂ ಅವನಿಗೆ ಆಶ್ರಯ ನೀಡಿದ ರೇಚಣ ಮಂತ್ರಿಯ ಪರಿಚಯವನ್ನೂ, ಪುಸ್ತಕದ ಪ್ರಾರಂಭದಲ್ಲಿ ಕೊಟ್ಟಿದ್ದೇನೆ. ಗ್ರಂಥಋಣವನ್ನು ಕೊನೆಯಲ್ಲಿ ಉಲ್ಲೇಖಿಸಿದ್ದೇನೆ. ಆಯಾ ಗ್ರಂಥಕರ್ತರಿಗೂ, ಸಂಪಾದಕರಿಗೂ ಋಣಿಯಾಗಿದ್ದೇನೆ. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದ ನಿರ್ದೇಶಕರಾದ ಗೆ. ಸಿ. ಎಸ್. ಕಣವಿ ಅವರ ಆತ್ಮೀಯ ಅಕ್ಕರೆಯಿಂದಲೇ ಕೃತಿ ಮೈದಾಳಿ ನಿಂತಿದೆ. ಅವರಿಗೆ ನಾನು ಚಿರಋಣಿ. ಉಪನ್ಯಾಸದ ಕಾಲಕ್ಕೆ ನನ್ನ ಜೊತೆಗಿದ್ದ ಸಹಾಯಕನಿರ್ದೇಶಕರಾದ ಗೆ.ಎಲ್.ಎಂ.ಗುಡ್ಡೀನ ಅವರಿಗೂ, ಬೀಳಗಿಯ ಸಹೃದಯ ಶ್ರೋತೃವೃಂದಕ್ಕೂ ನನ್ನ ಕೃತಜ್ಞತೆಗಳು. ೨೫೦೦ನೆಯ ವೀರ ನಿರ್ವಾಣ ಮಹೋತ್ಸವದ ಈ ಸಂದರ್ಭದಲ್ಲಿ ಈ ಕೃತಿ ಬೆಳಗಲೆಂದು ಹಾರೈಸುವೆ.

ಕನ್ನಡ ಅಧ್ಯಯನ ಪೀಠ,
ಜೈನ ಶಾಖೆ
ಕ.ವಿ.ವಿ. ಧಾರವಾಡ
೨೯-೧೧-೧೯೭೪

ಭುಜೇಂದ್ರ ಮಹೀಶವಾಡಿ

ಪರಿವಿಡಿ

೧. ಆಚಣ್ಣ ಕವಿ

ಆಚಣ್ಣಕವಿ ತನ್ನ ವರ್ಧಮಾನ ಪುರಾಣದಲ್ಲಿ ತನ್ನ ಹೆಸರನ್ನು ಆಚಣ್ಣನೆಂದೂ, ಆಚಿರಾಜನೆಂದೂ ಹೇಳಿಕೊಂಡಿದ್ದಾನೆ. ತಾಯಿ ಮಲ್ಲಾಂಬಿಕೆ; ತಂದೆ ಕೇಶಿರಾಜ ಅಥವಾ ಕೇಶವರಾಜ. ಗೋತ್ರ ಭಾರದ್ವಾಜ. 'ವಾಣೀವಲ್ಲಭ' ಬಿರುದು.

ಭಾರದ್ವಾಜ ಪವಿತ್ರಗೋತ್ರತಿಳಕಂ ಶ್ರೀ ಕೇಶಿ
ರಾಜಾತ್ಮಜಂ|
ಸಾರೋದಾರ ಪವಿತ್ರತಾದಿ ಗುಣಭೃನ್ಮಲ್ಲಾಂಬಿಕಾ
ನಂದನಂ||
ತಾರೇಶೋಜ್ವಳಕೀರ್ತಿ ಜೈನರುಚಿ ವಾಣೀವಲ್ಲಭಂ
ನಿರ್ಮಳಾ|
ಚಾರಂ ನಿರ್ಮಿಸಿ ಪೇಳ್ದವೆತ್ತನೊಲವಿಂದಾಚಣ್ಣನೀ
ಧಾತ್ರಿಯೊಳ್||

೧–೨೪

ಜೈನ ಧರ್ಮದಲ್ಲಿ ಬಹಳ ಪ್ರೀತಿಯುಳ್ಳವನಾಗಿಯೂ, ಪರಿಶುದ್ಧ ಆಚಾರ ಉಳ್ಳವನಾಗಿಯೂ, ಬಹಳ ಕೀರ್ತಿವಂತನಾಗಿ ಕವಿ ಬಾಳಿದಂತೆ ತೋರುತ್ತದೆ. ಕವಿ ಸೌಜನ್ಯಶೀಲ

ನಾಗಿದ್ದು, ವರ್ಧಮಾನ ಪುರಾಣದಲ್ಲಿ ಏನಾದರೂ ತಪ್ಪುಗಳಿದ್ದರೆ ವಿದ್ವಾಂಸರು ತಿದ್ದಬೇಕೆಂದು ಬೇಡಿಕೊಳ್ಳುತ್ತಾನೆ.

ಶ್ರೀವಸುಧೈಕಬಾಂಧವನ ಬಂಧುರಭಕ್ತಿಗೆ ಮೆಚ್ಚಿ
ಕೇಶಿರಾ|
ಜಾವನಿದೇವನಾ ವಿಬುಧಚಾಮುಸಮುಸಿ ತಸಂದು
ಪೇಳುತುಂ||
ದೈವನಿಯೋಗದಿಂದೆ ಗಡ ನಿಂದುದನೀವರವೀರ
ಕಾವ್ಯಮಂ|
ಭಾವಿಸಿಯಾಚಿರಾಜವಿಭು ಪೂರಿಸಿದಂ ಜಿನಭಕ್ತಿ
ಸೂಕ್ತಿಯಿಂ||

೧೬–೯೦

'ವಸುಧೈಕ ಬಾಂಧವ'ನೆಂಬ ಬಿರುದುಳ್ಳ ರೇಚಣ ಮಂತ್ರಿಯ ಜಿನಭಕ್ತಿಗೆ ಮೆಚ್ಚಿ ಕೇಶಿರಾಜನು ಚಾಮುನೆಂಬ ವಿಬುಧನೊಂದಿಗೆ ವರ್ಧಮಾನ ಪುರಾಣವನ್ನು ಬರೆಯಲು ಪ್ರಾರಂಭಿಸಿದನೆಂದೂ, ದೈವನಿಯೋಗದಿಂದ ಕೆಲಸವು ಮುಂದುವರಿಯದೆ ನಿಂತುಬಿಟ್ಟಿತೆಂದೂ, ತಾನು (ಆಚಿರಾಜವಿಭು) ಜಿನಭಕ್ತಿಯಿಂದ ಆ ಕಾವ್ಯವನ್ನು ಪೂರ್ತಿಯಾಗಿ ಬರೆದು ಮುಗಿಸಿದನೆಂದೂ ಕವಿಯು ಸ್ಪಷ್ಟಪಡಿಸಿದ್ದಾನೆ.

ಕವಿಯ ತಂದೆಯಾದ ಕೇಶಿರಾಜನೇ ವರ್ಧಮಾನ ಪುರಾಣವನ್ನು ಬರೆಯಲು ಪ್ರಾರಂಭಿಸಿದವನು. ಅವನಿಗೆ ತಿಕ್ಕಣ-ಚಾವಣರು ಸಹಾಯಕರು. ಆದರೆ ಆ ಕೆಲಸ ನಿಂತುಹೋದ್ದ

ಿಂದ ರೇಚಣ ಚಮೂಪತಿಯೂ, ಮತ್ತು 'ಅಕ್ಕರ ಜಾಣರು ಆಗ್ರಹಿಸೆ' ಆಚಣ್ಣನು ಅದನ್ನು ಬರೆದು ಮುಗಿಸಬೇಕಾಯಿತು. ಇದಿಷ್ಟು ವಿಷಯ ಕವಿಯಿಂದ ತಿಳಿಯುವುದಲ್ಲದೆ, ಶಾಸನಗಳೂ ಈ ವಿಷಯದಲ್ಲಿ ರೇಚಣ ಮತ್ತು ಕೇಶಿರಾಜ-ತಿಕ್ಕಣ- ಚಾವಣರ ಬಗೆಗೆ ಆಧಾರಗಳನ್ನು ನೀಡುತ್ತವೆ.

ಪ್ರಾರಂಭದ ೧-೨೩ನೆಯ ಪದ್ಯದಲ್ಲಿ ಆಚಣ್ಣನು 'ರೇಚಣಚಮೂಪತಿಯರ್ಥಿಸೆ ಕೇಶಿರಾಜನಾ ತಿಕ್ಕಣ-ಚಾವ ಣರ್ ಬೆರಸಿರ್ದುದನ್ ಎಯ್ದೆ ಪೇೞ್ದ' ಎಂದು ಹೇಳಿ, 'ಕೇಶಿರಾಜಾವಸಿ ದೇವನಾ ವಿಬುಧ ಚಾಮುಸಮನ್ವಿತನಂದು ಪೇೞುತುಂ ದೈವಸಿಯೋಗದಿಂದೆ ಗಡ ನಿಂದುದನ್' ಎಂದು ೧೬-೯೦ ನೆಯ ಪದ್ಯದಲ್ಲಿ ಕೊನೆಗೆ ಹೇಳಿರುವುದರಿಂದ, ಕೇಶಿ ರಾಜ-ತಿಕ್ಕಣ-ಚಾವಣರಲ್ಲಿ ತಿಕ್ಕಣನ ಹೆಸರು ಕೊನೆಯಲ್ಲಿ ಬಿಡಲಾಗಿದೆ. ಬಹುಶಃ ಈ ಮೂವರಲ್ಲಿ ಅವನು ಬೇಗ ತೀರಿ ಕೊಂಡಿರಬಹುದು. ದೈವಸಿಯೋಗದಿಂದ ಕೆಲಸ ನಿಂತುಹೋಗಿರ ಬೇಕಾದರೆ, ಬಹುಶಃ ಅವರು ಮರಣ ಹೊಂದಿರಬೇಕು.

ಶಿಕಾರಿಪುರ ೧೧೯ ಮತ್ತು ೧೨೩ನೆಯ ಶಾಸನಗಳ (E.C.Vol. VII) ಪ್ರಕಾರ ತಿಕ್ಕರಸ(ತಿಕ್ಕಣ)ನು ಕೇಶಿ ರಾಜನ ಸಚಿವಾಗ್ರಗಣಿಯಾಗಿದ್ದನೆಂದೂ, ಚಾಮುಡ್ಯ (ಚಾಮ)ನು ಮಂತ್ರಿಯಾಗಿದ್ದನೆಂದೂ ತಿಳಿಯುವುದರಿಂದ, ಕೇಶಿರಾಜ-ತಿಕ್ಕಣ-ಚಾವಣರು ಪರಸ್ಪರರಲ್ಲಿ ಆತ್ಮೀಯಭಾವ

ಉಳ್ಳವರೂ, ಬಂಧು ಬಳಗದ ಸಂಬಂಧ ಉಳ್ಳವರೂ, ಜೈನ ಧರ್ಮದಲ್ಲಿ ಶ್ರದ್ಧೆಯುಳ್ಳವರೂ ಇದ್ದಿರಬೇಕೆಂದು ತಿಳಿಯುತ್ತದೆ.

ಶಿಕಾರಿಪುರ ೧೯೯ನೆಯ ಶಾಸನದ (E.C.Vol.VII) ಪ್ರಕಾರ ಕಳಚೂರ್ಯ ಆಹವಮಲ್ಲನಲ್ಲಿ (೧೧೮೦-೧೧೮೩) ಐದು ಮಂದಿ ಸಮರ್ಥರಾದ ಮಂತ್ರಿಗಳು ಇದ್ದರೆಂದು ತಿಳಿಯುತ್ತದೆ: ಲಕ್ಷ್ಮಣದಂಡೇಶ, ಚಂದುಗಿದೇವ, ರೇಚಣದಂಡನಾಥ, ಸೋವಣ ಚಮೂಪತಿ, ಮತ್ತು ಕಾವಣ ದಂಡನಾಯಕ. ಇವರಲ್ಲದೆ, ಕೇಶಿಮಯ್ಯ ದಂಡನಾಯಕನು ಒಬ್ಬ ಮುಖ್ಯ ಸೇನಾಧಿಕಾರಿಯಾಗಿದ್ದನು. ಅವನನ್ನು ಅರಸನು ಕರೆಯಿಸಿ. ಅವನು ಮಾಡಿದ ಸೇವೆಯನ್ನು ಮೆಚ್ಚಿ. ಅವನಿಗೆ ಬನವಸೆ ನಾಡನ್ನು ಉಂಬಳಿ ಹಾಕಿಕೊಟ್ಟನಂತೆ:

'ಶ್ರೀಮತ್ ಕೇಶಿಮಯ್ಯ ದಂಡನಾಯಕನಂ ಕರದು ದಕ್ಷಿಣ ದಿಗ್ಭಾಗದ ಭಂಡಾರವಾಡ ದೇಶಮಂ ಬಪ್ಪನನೆ ದುಷ್ಟ ನಿಗ್ರಹ ಶಿಷ್ಟಪ್ರತಿಪಾಳನಂ ಮಾಳ್ಪುದೆಂದು ಬನವಸೆನಾಡುಂ ಕುಡಲ್ ಮಹಾಪ್ರಸಾದಮೆಂದು ಕಯ್ಕೊಂಡ ಮಹಾಮಾತ್ಯನ ಮಹದ್ಗುಣಗಳೆಂತೆಂದಡೆ'-

'ಮನುಚಯ ಸೇವ್ಯವೃತ್ತಿ ನಿಜವೃತ್ತಿ ಪುರಾತನ
ರಾಜನೀತಿ ತಾಂ!
ತನಗಳವಟ್ಟ ನೀತಿಯೆ ಪರಾರ್ಥಮೆ ತಂನ
ಭುಜಾರ್ಜಿತಾರ್ಥಮಾ||

ರ್ದನ ಮಹಿಮೋನ್ನತಿತ್ವನೆ ನಿಜೋನ್ನತಿಯಾಶ್ರಿತ
ತುಷ್ಟಿ ತನ್ನದೆಂ|
ದೆನಿಪ ನೆಗಳ್ತೆಯಿಂದೆ ಸಲೆ ಜೀವಿಸೆ ಕೇಶವದಂಡ
ನಾಯಕಂ||

'ಮಲೆವವರಿಲ್ಲ ಗಂಡೆಸೆವರಿಲ್ಲಿದಿರಿಪ್ಪವರಿಲ್ಲ ತೇಜಮೆಂ|
ದುಲಿವವರಿಲ್ಲ ಟೆಂಟಣಿಸರಿಲ್ಲುಜಿದಿರ್ಪವರಿಲ್ಲ
ಕಾಯ್ದು ಬಂ||
ದಲೆವವರಿಲ್ಲ ತನ್ನ ಬಿರುದಲ್ಲಿದೆ ಕಬ್ಬದ ಗೀತದಲ್ಲಿ
ಮೂ|
ರ್ತಲೆಯುವರಿಲ್ಲ ಕೃಷ್ಣವಿಭು ಕೇಶವದೇವ
ಚಮೂಪರಾಜ್ಯದೊಳ್||'

ಕೇಶಿಮಯ್ಯ ದಂಡನಾಯಕನು ಕೇಶವದೇವ- ಪಂಪಾಂಬಿಕೆಯರ ಮೊಮ್ಮಗನೆಂದೂ, ಹೊಳಲಮರಸ-ದುರ್ಗಾಂಬಿಕೆಯರ ಮಗನೆಂದೂ, ಭಾರದ್ವಾಜ ಗೋತ್ರದವನೆಂದೂ, ಲಕ್ಷ್ಮೀದೇವಿಯ ವಲ್ಲಭನೆಂದೂ, ವಿಬುಧಜನಮಿತ್ರನೆಂದೂ ಹೇಳಲಾಗಿದೆ. ನರಸಿಂಗನಾಯಕ, ತಿಕ್ಕರಾಜ. ಬಾಚಯ್ಯ. ಸೋವಿದೇವ, ಚಾಮಯ್ಯ, ಬೀಚಿರಾಜ, ಮತ್ತು ದಾಸಿರಾಜ ಮುಂತಾದವರು ಕೇಶಿಮಯ್ಯನ ಸಚಿವರಾಗಿದ್ದರೆಂದು ತಿಳಿಯುತ್ತದೆ.

ಶಾಸನದಲ್ಲಿ ಉಲ್ಲೇಖಿಸಿದ ಕೇಶಿಮಯ್ಯ-ತಿಕ್ಕರಾಜ-ಚಾಮಯ್ಯರು ವರ್ಧಮಾನ ಪುರಾಣದಲ್ಲಿ ಹೇಳಿದ ಕೇಶಿರಾಜ-

ತ್ರಿಕ್ಕಣ-ಚಾವಣರು ಒಂದೇ ಎಂಬುದು ಸಹಜವಾಗಿ ಗಮನಕ್ಕೆ ಒರುತ್ತದೆ.

ಶಾಸನಗಳ ಪ್ರಕಾರ ಕೇಶಿರಾಜ ಅಥವಾ ಕೇಶಿಮಯ್ಯನಿಗೆ ಲಕ್ಷ್ಮೀದೇವಿ(ಲಚ್ಮಾದೇವಿ) ಮತ್ತು ಸಿರಿದೇವಿ ಎಂಬ ಇಬ್ಬರು ಹೆಂಡರಿದ್ದರೆಂದು ತಿಳಿಯುತ್ತದೆ. ಕವಿಯ ತಂದೆ ಕೇಶಿರಾಜನೆಂದು (ಕೇಶಿಮಯ್ಯನೆಂದು) ಒಪ್ಪುವುದಾದರೆ ಲಕ್ಷ್ಮೀದೇವಿ ಸಿರಿದೇವಿಯರಲ್ಲಿ ಒಬ್ಬಳು ಅವನ ತಾಯಿಯಾಗಿರಬೇಕು. ಕವಿಯು ತನ್ನ ತಾಯಿಯ ಹೆಸರು ಮಲ್ಲಾಂಬಿಕೆ ಎಂದಿದ್ದಾನೆ. ಅದು ಲಕ್ಷ್ಮೀದೇವಿ-ಸಿರಿದೇವಿಯರಲ್ಲಿ ಯಾರದೇ ಒಬ್ಬಳ ಪರ್ಯಾಯನಾಮವಾಗಿರಬಹುದೋ? ಇಲ್ಲವೆ ಕೇಶಿರಾಜನಿಗೆ ಮಲ್ಲಾಂಬಿಕೆ ಎಂಬ ಮೂರನೆಯ ಹೆಂಡತಿಯೊಬ್ಬಳು ಇದ್ದಿರಬಹುದೋ?- ತಿಳಿಯದು.

ವರ್ಧಮಾನ ಪುರಾಣದ ಆಶ್ವಾಸಾಂತ ಗದ್ಯಗಳಲ್ಲಿ ಶ್ರೀನಂದಿಯೋಗೀಂದ್ರನು ಆಚಣ್ಣನ ಗುರು ಎಂಬುದಾಗಿ ತಿಳಿಯುತ್ತದೆ. ೧೬-೯೩ನೇ ಪದ್ಯದಲ್ಲಿ 'ಪುರಿಕರನಗರಾಧೀಶ ಶಂಕಾಗ್ರಜ'ನೆಂದಿರುವುದರಿಂದ ಆಚಣ್ಣಕವಿಗೆ ಶಂಖನೆಂಬ ತಮ್ಮನಿದ್ದನೆಂದೂ, ಅವನು ಪುಲಿಗೆರೆ (ಲಕ್ಷ್ಮೇಶ್ವರ)ಯ ಅರಸನಾಗಿದ್ದನೆಂದೂ ತಿಳಿಯುತ್ತದೆ. 'ಧಾತ್ರೀದೇವಂ ಸದಾಚಿರಾಜಂ' ಎಂದಿರುವುದರಿಂದ ಹಿಂದಕ್ಕೆ ಆಚಿರಾಜನೂ ಎಲ್ಲಿಯೋ ಅರಸನಾಗಿದ್ದಿರಬೇಕೆಂದು ತೋರುತ್ತದೆ. ತಂದೆಯಾದ ಕೇಶಿರಾಜನ

ಬನವಾಸೆಯ ನಾಡಿನ ಆಧಿಪತ್ಯ ಮಗನಾದ ಆಚಿರಾಜನ ಕೈಗೆ ಬಂದು ಕಳೆದುಹೋಗಿರಬಹುದೇ? ಅಥವಾ, ಶಂಕನು ಪುಲಿಗೆರೆಯ ಅರಸನಾಗಿರುವುದಕ್ಕಿಂತ ಮೊದಲು ಆಚಿರಾಜನ ಕೈಗೆ ಪುಲಿಗೆರೆಯ ಒಡೆತನ ಬಂದು ಕೂಡಲೆ ಕಳೆದುಹೋಗಿರಬಹುದೆ? ಅಥವಾ ವೈರಾಗ್ಯದಿಂದ ಆಚಣ್ಣನು ಅರಸೊತ್ತಿಗೆಯನ್ನು ತೊರೆದಿರಬಹುದೆ?- ಸ್ಪಷ್ಟವಾಗಿ ತಿಳಿಯದು.

ಆರ್. ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಯ ಪ್ರಥಮ ಸಂಪುಟದಲ್ಲಿ ಆಚಣ್ಣಕವಿಯ ಪರಿಚಯ ಮಾಡಿಕೊಡುತ್ತ ಈ ಕೆಳಗಿನ ಪದ್ಯವನ್ನು ಉಲ್ಲೇಖಿಸಿದ್ದಾರೆ:

ಜಿನಸಮಯ ಸಮುದ್ಧರಣಂ|
ಜಿನಮತಸಿದ್ಧಾಂತ ವಾರ್ಧಿವರ್ಧನ ಚಂದ್ರಂ||
ಜಿನರಂತೆ ಭವ್ಯ ಸೇವ್ಯಂ|
ಜಿನ ಮುನಿಯಾಚಣ್ಣನಮಳಗುಣಗಣನಿಳಯಂ||

ಆಚಣ್ಣಕವಿ ಜಿನಮುನಿಯಾಗಿದ್ದನೆಂದೂ, ಜಿನರಂತೆ ಪೂಜ್ಯನಾಗಿದ್ದನೆಂದೂ, ಜೈನಧರ್ಮದ ಉದ್ಧಾರಕನಾಗಿದ್ದನೆಂದೂ, ಜೈನ ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದನೆಂದೂ ಸ್ಪಷ್ಟವಾಗಿ ತಿಳಿಯುತ್ತದೆ.

ರಾಜವಂಶಜನಾಗಿ, ರಾಜಪುತ್ರನಾಗಿ, ರಾಜನಾಗಿ ಕೊನೆಗೆ ಜಿನಮುನಿಯಾಗಿ ಬಾಳಿದ ಆಚಣ್ಣನು ಜೀವನದ ಸಕಲ ಸ್ವಾರಸ್ಯವನ್ನು ಕಂಡುಂಡ ಮಹಾ ಅನುಭವಿಯಾಗಿ

ದ್ದಾನೆ. ವಾಣೀವಲ್ಲಭನಾಗಿ ಶ್ರೀಪದಾಶೀತಿ, ವರ್ಧಮಾನ ಪುರಾಣ ಮುಂತಾದ ಗ್ರಂಥಗಳನ್ನು ಬರೆದು, ಕೊನೆಗೆ 'ಜನರಂತೆ ಭವ್ಯಸೇವ್ಯಂ' ಎನಿಸಿಕೊಂಡು ಪರಿಪೂರ್ಣವಾದ ಸಾರ್ಥಕ್ಯವಾದ ಬಾಳನ್ನು ಹೊಂದಿ ಗೆದ್ದು ಹೋಗಿದ್ದಾನೆ.

ಶ್ರೀವಿಜಯ, ಗಜಾಂಕುಶ, ಗುಣವರ್ಮ, ನಾಗವರ್ಮ, ಅಸಗ, ಹಂಪದೇವ, ಹೊನ್ನಿಗ, ರನ್ನಿಗ, ಅಗ್ಗಳ, ಬೊಪ್ಪ ಮುಂತಾದ ಪೂರ್ವದ ಜೈನ ಕವಿಗಳನ್ನು ಆಚಣ್ಣನು ತನ್ನ ವರ್ಧಮಾನ ಪುರಾಣದಲ್ಲಿ ಸ್ತುತಿಸಿದ್ದಾನೆ. ಅವರಲ್ಲಿ ಅಗ್ಗಳ (೧೧೮೯) ಬೊಪ್ಪಣ ಪಂಡಿತ (ಸು. ೧೧೮೦) ಅವರು ಕವಿಯ ಹಿರಿಯ ಸಮಕಾಲೀನರಾಗಿರಬಹುದೆಂದು ತೋರುತ್ತದೆ. ೧೨೦೫ ರಲ್ಲಿದ್ದ ಪಾರ್ಶ್ವ ಪಂಡಿತನು ಆಚಣ್ಣನನ್ನು ಸ್ತುತಿಸಿದ ಪ್ರಥಮ ಕವಿಯಾಗಿದ್ದಾನೆ. ೧೧೮೯ ರಿಂದ ೧೨೦೫ ರವರೆಗಿನ ಕಾಲದಲ್ಲಿ ಸು. ೧೧೯೫ ರಲ್ಲಿ ಆಚಣ್ಣನು ಇದ್ದನೆಂದು ಕವಿಚರಿತೆಕಾರರು ನಿರ್ಣಯಿಸಿದ್ದಾರೆ. ಈಚೆಗೆ ಆಚಣ್ಣನ ವರ್ಧಮಾನ ಪುರಾಣದ ಇನ್ನೊಂದು ಹಸ್ತಪ್ರತಿ ದೊರೆತಿದೆ. ಅದರ ಆಧಾರದಿಂದ ಆಚಣ್ಣಕವಿಯ ಕಾಲ ೧೧೯೦ ಎಂದು ತಿಳಿದಿದೆ.

೨. ಆಶ್ರಯದಾತ ರೇಚಣ ಮಂತ್ರಿ

ಕಳಚೂರ್ಯ ಆಹವಮಲ್ಲನ (೧೧೮೦–೧೧೮೩) ಐವರು ಮಂತ್ರಿಗಳಾದ ಲಕ್ಷ್ಮಣ. ಚಂದಣ, ರೇಚಣ, ಸೋವಣ. ಕಾವಣರಲ್ಲಿ ರೇಚಣನು ಆಚಣ್ಣಕವಿಗೆ ಆಶ್ರಯದಾತ. ಕವಿ ತನ್ನ ವರ್ಧಮಾನ ಪುರಾಣದಲ್ಲಿ ರೇಚಣನನ್ನು ರೇಚಿಮಯ್ಯ, ರೇಚರಸ, ರೇಚಣಾಚಮೂಪತಿ, ರೇಚಣವಿಭು ಎಂದು ಕರೆದು ಕೊಂಡಾಡಿದ್ದಾನೆ. 'ವಸುಧೈಕಬಾಂಧವ' ಎಂಬ ರೇಚಣನ ಬಿರುದನ್ನು ಪ್ರತಿ ಆಶ್ವಾಸದ ಕೊನೆಯಲ್ಲಿ ಶ್ಲೇಷೆಯಿಂದ ಬಳಸಿ ಕೊಂಡು ಗುಣಗಾನ ಮಾಡಿದ್ದಾನೆ. ಜೈನ ಕವಿಗಳ ಸಂಪ್ರದಾಯದಂತೆ ಕಥಾನಾಯಕನನ್ನು ಆಶ್ರಯದಾತನಿಗೆ ಹೋಲಿಸಿ ಹೇಳುವ ಕಾರ್ಯವನ್ನು ಆಚಣ್ಣಕವಿಯೂ ಮಾಡಿದಂತೆ ತೋರುತ್ತದೆ. ರೇಚಣನನ್ನು ವರ್ಧಮಾನನ (ಮಹಾವೀರನ) ಪೂರ್ವ ಭವಗಳಲ್ಲಿ ಕೆಲವು ವ್ಯಕ್ತಿಗಳೊಂದಿಗೆ ಹೋಲಿಸಿದಂತೆಯೂ ಕೆಲವೊಮ್ಮೆ ಮಹಾವೀರನ ಜೊತೆಗೆ ಹೋಲಿಸಿದಂತೆಯೂ ಭಾವನೆಯುಂಟಾಗುತ್ತದೆ. ಕೆಲವೊಮ್ಮೆ ನೇರವಾಗಿ ಕವಿಯು ರೇಚಣನನ್ನು ವರ್ಣಿಸುತ್ತಾನೆ. ಅಂಥ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕಾಣಬಹುದು:

೧) ಶ್ರೀ ಕರಣಾಗ್ರಗಣ್ಯನಭಿಮಾನಿ ಜಿನೇಂದ್ರ
ಮತಾಬ್ಜಭಾನು ಪು|
ಣ್ಯಾಕರನರ್ಥಿಕಲ್ಪತರು ಭೋಗಪುರಂದರನಂಗ
ಜೋಪಮಂ||
ಭೀಕರವೈರಿವಾರಣವಿದಾರಣಕೇಸರಿ ಸತ್ಯಕಾಢ್ಯನ|
ಸ್ತೋಕಯಶೋರ್ಥಿ ರೇಚವಿಭು ರಂಜಿಸಿದಂ
ವಸುಧೈಕಬಾಂಧವಂ||
೧-೨೨

೨) ಎಜಗಿಸಿ ತನ್ನ ಚಾರುಚರಣಾಂಬುರುಹದ್ವಿತ
ಯಕ್ಕೆ ಮಿಕ್ಕ ನಾ|
ಡೆಱೆಯರನೆಲ್ಲರಂ ವಿಬುಧವಂದಿಜನಂಗಳ
ವಾಂಛಿತಾರ್ಥಮಂ||
ಕಱೆದು ಶರನ್ನಿಶಾಕರ ಕರೋತ್ಕರದಂತೆ ಕರಂ
ತೊಳಪ್ಪ ತ|
ನ್ನಱಿಕೆಯ ಕೀರ್ತಿಯಿಂ ಬೆಳಗಿದಂ ಜಗಮಂ
ವಸುಧೈಕಬಾಂಧವಂ||
೧-೧೦೬

ತಾನು ರಚಿಸುವ ಕಾವ್ಯ ಸಾಮಾನ್ಯವಾದುದಲ್ಲ ಎಂದು ಆಚಣ್ಣನಿಗೆ ಅಭಿಮಾನ. ಅದು 'ವಸುಧೈಕಬಾಂಧವನ ಬಂಧುರ ಭಾಗ್ಯನ ದಂಡನಾಥ ರೇಚರಸನ ಮಾನಸಪ್ರಿಯಮೆನಿಪ್ಪ ಜಗತ್ಸ್ತುತ ವರ್ಧಮಾನಚರಿತಂ.'

'ವೀರಗುಣಂಗಳಿಂ ಸಮುನ್ನತಿವಡೆದು ಆವಗಂ, ಬಳಿಕೆ ಪಾವನ ಜೈನ ತಪಃ ಪ್ರಭಾವಸಂಗತನೆನೆ ಸಂದಂ. ಏನಧಿಕನೋ ರಸೆಯೊಳ್ ವಸುಧೈಕ ಬಾಂಧವಂ!' ತಾರುಣ್ಯದಲ್ಲಿ, ಮಧ್ಯ ವಯಸ್ಸಿನಲ್ಲಿ ಪರಾಕ್ರಮದ ಜೀವನವನ್ನು ನಡೆಯಿಸಿ, ಇಳಿ ವಯಸ್ಸಿನಲ್ಲಿ ಜಿನಮುನಿಗಳ ಸೇವೆ, ಜಿನಾಲಯಗಳ ನಿರ್ಮಾಣ, ಕಾವ್ಯ ರಚನೆಗೆ ಪ್ರೋತ್ಸಾಹ ಮುಂತಾದ ಕಾರ್ಯಗಳಲ್ಲಿ ರೇಚಣನು ಆಸಕ್ತಿವಹಿಸಿದಂತೆ ತೋರುತ್ತವೆ.

ಕಳಚೂರ್ಯ ಆಹವಮಲ್ಲನಲ್ಲಿ (೧೧೮೦-೧೧೮೩) ಮಂತ್ರಿಯಾಗಿದ್ದ ರೇಚಣನು ಮೊದಲು ಪ್ರಸಿದ್ಧಿಗೆ ಬಂದನು. ಆವನ ವರ್ಚಸ್ಸು ಕಡಿಮೆಯಾದ ಮೇಲೆ ಅಥವಾ ಆವನ ಆಳಿಕೆ ಮುಗಿದ ನಂತರ ಕವಿಗೆ ರಾಜಾಶ್ರಯ ತಪ್ಪಿರಬಹುದು ಆಗ ಸೌಂದತ್ತಿಯ ರಟ್ಟರಲ್ಲಿ ರೇಚಣ ಮತ್ತು ಬ್ರಹ್ಮದಂಡರು ಸೇನಾ ಪತಿಗಳಾಗಿ ತಮ್ಮ ಪರಾಕ್ರಮವನ್ನು ಮೆರೆದಂತೆ ತೋರುತ್ತದೆ. ಅಣ್ಣಾರಾವ ಚೌಗುಲೆಯವರು, ಸೌಂದತ್ತಿಯ ರಟ್ಟರ ಆಶ್ರಯ ದಲ್ಲಿ ರೇಚಣನು ಇದ್ದಾಗ ಆಚಣ್ಣ ಕವಿಯಿಂದ ವರ್ಧಮಾನ ಪುರಾಣ ಬರೆಯಿಸಿದನೆಂದು ಅಭಿಪ್ರಾಯಪಡುತ್ತಾರೆ. ಆದರೆ, ರೇಚಣನು ಮುಂದೆ ಹೊಯ್ಸಳ ವೀರಬಲ್ಲಾಳನನ್ನು (೧೧೭೩-೧೨೨೦) ಆಶ್ರಯಿಸಿ, ಮಂತ್ರಿಯಾಗಿ ಮಹಾವರ್ಚಸ್ಸು ಹೊಂದಿದ ಬಗೆಗೆ ಅನೇಕ ಶಾಸನಗಳ ಆಧಾರಗಳುಂಟು. ಆ ಸಮಯದಲ್ಲಿಯೇ ೧೧೯೦-೧೨೨೨ ರ ಮಧ್ಯದಲ್ಲಿ ವರ್ಧಮಾನ ಪುರಾಣ ರಚಿಸಲ್ಪಟ್ಟಿರಬೇಕೆಂದು ಎಂ. ಮರಿಯಪ್ಪಭಟ್ಟರು ಅಭಿಪ್ರಾಯ ತಳೆದಿದ್ದಾರೆ.

ಕ್ರಿ.ಶ. ೧೨೨೦ ರಲ್ಲಿ ರೇಚರಸನು ಅರಸಿಕೆರೆಯಲ್ಲಿ ಸಹಸ್ರ ಕೂಟ ಜಿನಾಲಯವನ್ನು ಕಟ್ಟಿಸಿದ ಬಗೆಗೆ ಶಾಸನದ ಆಧಾರ (E. C. IV–77) ಉಂಟು. ಅಲ್ಲದೆ, ಶ್ರವಣಬೆಳುಗೊಳದ ಸಮೀಪದಲ್ಲಿರುವ ಜಿನನಾಥಪುರದಲ್ಲಿ ರೇಚರಸನು ಶಾಂತಿನಾಥ ತೀರ್ಥಂಕರ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಗೆಗೂ (M.G.II Part II) ಐತಿಹಾಸಿಕ ಆಧಾರವಿದೆ.

ಅರಸಿಕೆರೆಯ ೬ನೆಯ ಶಾಸನ ರೇಚಣ ಮಂತ್ರಿಯನ್ನು ಹೀಗೆ ವರ್ಣಿಸಿದೆ.

ಕುಲಮಂ ಪೇಟಿಪ್ಪೊಡೆ ವಾಜಿವಂಶತಿಲಕಂ ಸನ್ಮಂತ್ರ
ಮಂತ್ರಿತ್ವದೊಳ್|
ಪಲರುಂ ಜೀಯೆನೆ ದೇವಮಂತ್ರಿಯೊಲವಂ
ಸಲ್ಲೀಲೆಯಿಂ ತೋರುವಂ||
ಚಲದಿಂದಾಂತರನಿಕ್ಕಿ ಮೆಟ್ಟಿ ಪಡೆವಂ ಸತ್ಕೀರ್ತಿಯಂ
ಧಾತ್ರಿಯೊಳ್|
ನಲವಿಂ ರೇಚಣ ಮಂತ್ರಿಯಾರ್ಗಮಧಿಕಂ
ಸಾಹಿತ್ಯವಿದ್ಯಾಧರಂ||

ಶಿಕಾರಿಪುರದ ಒಂದು ಶಾಸನದಲ್ಲಿ ರೇಚಣನ ವರ್ಣನೆ ಹೀಗಿದೆ:

(i) ಕವಿತತಿ ಬಲ್ಮೆಗೆ ಓಲಗಿಸೆ, ಕಾಮಿನಿಯರ್
ಸೊಬಗಿಂಗೆ ಸೋಲೆ,

ಪೇಕ್ಷ್ಯವರ್ಗಳ್ ಉದಾರವೃತ್ತಿಗೆ ಒಲವಿಂ
ಸರಶಾಸನಮಾಗೆ, ರಾಜ್ಯಂ
ಪ್ರೌಢಕ್ಕೆವಡೆಯೆ, ರೇಚಿರಾಜನೆಸೆದಂ ಜಸದಿಂ
ವಸುಧೈಕಬಾಂಧವಂ

(ii) ಜಿನನಂ ತನ್ನ ಮನಂ, ಮನಃ ಪ್ರಕೃತಿಯುಂ ಸದ್ವಿದ್ಯೆ,
ಆ ಸದ್ವಿದ್ಯೆಯುಂ
ತನು, ಅಂತಾತನುವಂ ವಿಳಾಸಂ, ಅದಂ
ಉದ್ಯಲ್ಲಕ್ಷ್ಮಿ, ಆ ಲಕ್ಷ್ಮಿಯುಂ
ವಿನುತ ಔದಾರ್ಯಂ, ಅದಂ ಜಗಂ, ಜಗಮುಂ
ಇಂಬಿಂ ಕೀರ್ತಿಯಾಲಿಂ
ಗಿಸಲ್ ಜನವಂದ್ಯಂ ವಿಭುರೇಚಿರಾಜಂ ಎಸೆದಂ
ಚಾರಿತ್ರರತ್ನಾಕರಂ.

ಶಾಸನಗಳಲ್ಲಿ ರೇಚಣನ ವರ್ಣನೆ ಬಂದುದು ಆಚಣ್ಣನ ಕಾವ್ಯದಲ್ಲಿ ಬಂದ ವರ್ಣನೆಗೆ ಹೊಂದಿಕೆಯಾಗುತ್ತದೆ. ರೇಚಣ ಚಮೂಪನ ಚೇತನ ಕಲ್ಯಾಣ–ಸೌಂದತ್ತಿ–ವೇಣುಗ್ರಾಮ (ಬೆಳಗಾವಿ) ಹಳೇಬೀಡು (ದ್ವಾರಸಮುದ್ರ) ಗಳಲ್ಲಿ ಸುತ್ತಾಡಿ ಕೀರ್ತಿಧ್ವಜವನ್ನು ಹಾರಾಡಿಸಿದೆ. ಶಿಲಾಲೇಖನಗಳಲ್ಲಿ ಜಿನ ಮಂದಿರಗಳಲ್ಲಿ ಜೀವಂತವಾಗಿದೆ; ವರ್ಧಮಾನ ಪುರಾಣದಲ್ಲಿ ಇನ್ನೂ ಉಸಿರಾಡುತ್ತಿದೆ.

೩. ವರ್ಧಮಾನ ಪುರಾಣದ ರೂಪರೇಷೆ

ಪ್ರಥಮಾಶ್ವಾಸಂ

ಕವಿ ಆಚಣ್ಣ ಪಂಚಪರಮೇಷ್ಠಿಗಳನ್ನು ಸ್ತುತಿಸಿ, ಸರಸ್ವತಿ-ಯಕ್ಷಿಣಿ-ಯಕ್ಷ-ಗೌತಮರನ್ನು ಸ್ತುತಿಸಿ, ಭೂತಬಲಿ-ಪುಷ್ಪದಂತ-ಗೃಧ್ರಪಿಂಚ-ಸಮಂತಭದ್ರ-ಪೂಜ್ಯಪಾದ-ಅಕಳಂಕ ಮುಂತಾದವರನ್ನು ವರ್ಣಿಸಿ, ಪೂರ್ವ ಕವಿಗಳಾದ ಶ್ರೀವಿಜಯ-ಗಜಾಂಕುಶ-ಗುಣವರ್ಮ-ನಾಗವರ್ಮ-ಹಂಪದೇವ-ಹೊನ್ನಿಗ-ರನ್ನಿಗ-ಅಗ್ಗಳ-ಬೊಪ್ಪ ಮುಂತಾದವರನ್ನು ಪ್ರಶಂಸೆ ಮಾಡುತ್ತಾನೆ.

ಆಚಣ್ಣನು ತನ್ನ ಆಶ್ರಯದಾತನಾದ ರೇಚಣವಿಭುವನ್ನೂ, ತನ್ನ ತಂದೆಯಾದ ಕೇಶಿರಾಜನನ್ನೂ ಮತ್ತು ತಂದೆಯ ಮಿತ್ರರಾದ ತಿಕ್ಕಣ-ಚಾವಣರನ್ನೂ, ತನ್ನನ್ನೂ ಸಹೃದಯರಿಗೆ ಪರಿಚಯ ಮಾಡಿಕೊಟ್ಟು ಕಾವ್ಯಕಾರಣವನ್ನು ತಿಳಿಸುತ್ತಾನೆ.

ಆಮೇಲೆ ಲೋಕಾಕಾರ ಕಥನವನ್ನು ಪ್ರಾರಂಭಿಸಿ, ಲವಣ ಸಮುದ್ರ, ಜಂಬೂದ್ವೀಪ, ಮಂದಾರಪರ್ವತ ಮುಂತಾದವು

ಗಳನ್ನು ವರ್ಣಿಸುತ್ತಾನೆ. ದೇಶವರ್ಣನೆ-ಪುರವರ್ಣನೆಗಳನ್ನು ವಿವರವಾಗಿ ಮಾಡಿ, ವಿಶ್ವನಂದಿಯ ಕಥೆ (ಮಹಾವೀರನ ೧೮ ನೆಯ ಜನ್ಮದ ಕಥೆ)ಯನ್ನು ಪ್ರಾರಂಭಿಸುತ್ತಾನೆ.

ದ್ವಿತೀಯಾಶ್ವಾಸಂ:

ವಿಶ್ವನಂದಿಯು ತನ್ನ ತಂದೆಯಾದ ವಿಶ್ವಭೂತಿಯ ಸನ್ಯಾಸದ ನಂತರ ಕಕ್ಕನಾದ ವಿಶಾಖಭೂತಿಗೆ ರಾಜಸೂತ್ರವನ್ನು ನಡೆಯಿಸಲು ಬಿಟ್ಟುಕೊಟ್ಟು ನಂದನವನದಲ್ಲಿ ವಾಸಿಸ ತೊಡಗುತ್ತಾನೆ. ಯುದ್ಧದ ಪ್ರಸಂಗ ಒದಗಿಬರುತ್ತದೆ. ಕಕ್ಕನಿಗೆ ಯುದ್ಧ ಮಾಡಗೊಡದೆ ತಾನೆ ಯುದ್ಧಕ್ಕೆ ಹೋಗಿ ವೈರಿಗಳನ್ನು ಸದೆಬಡಿದು ಬರುವಷ್ಟರಲ್ಲಿ ಕಕ್ಕನ ಮಗನಾದ ವಿಶಾಖನಂದಿ ನಂದನವನದ ತನ್ನ ಆವಾಸವನ್ನು ಆಕ್ರಮಿಸಿಕೊಂಡಿರುತ್ತಾನೆ. ಅದನ್ನು ಕಂಡು ಸಿಟ್ಟು ಬಂದು ವಿಶಾಖನಂದಿಯೊಂದಿಗೆ ಹೋರಾಡುತ್ತಾನೆ. ಸೋತುಹೋದ ತಮ್ಮನ ಸ್ಥಿತಿಯನ್ನು ಕಂಡು ಮರುಗಿ ಅವನಿಗೆ ತ ಸ್ಥಳವನ್ನು ಬಿಟ್ಟುಕೊಟ್ಟು, ರಾಜ್ಯವನ್ನೇ ಬಿಟ್ಟುಕೊಟ್ಟು ವೈರಾಗ್ಯ ತಾಳಿ ಸನ್ಯಾಸವನ್ನು ಸ್ವೀಕರಿಸುತ್ತಾನೆ.

ತೃತೀಯಾಶ್ವಾಸಂ:

ವಿಶ್ವನಂದಿಯು ಜಿನಮುನಿಯಾಗಿ ಮಧುರೆಯಲ್ಲಿ ಪಾರಣೆಗಾಗಿ ಬರುತ್ತಿರಲು, ಹಾದಿಯಲ್ಲಿ ಹಸುವೊಂದು ಬಂದು ಹಾಯ್ದು ಗಾಯಗೊಳಿಸುತ್ತದೆ. ನೆತ್ತರಕರುಳು ಹೊರ ಬಂದು

ಹೊರಳಾಡುತ್ತ ಬಿದ್ದ ಮುನಿಯನ್ನು ಊರ ಜನರು ನೆರೆದು ನೋಡಿ ಮರುಗುತ್ತಿರುವಾಗ, ಕಾರಣಾಂತರದಿಂದ ಅಲ್ಲಿಗೆ ಬಂದಿದ್ದ ವಿಶಾಖನಂದಿ, ಅಣ್ಣನನ್ನು ಕಂಡು ಕನಿಕರ ತಾಳದೆ 'ನಿನ್ನ ಸಿಟ್ಟು ಈಗೆಲ್ಲಿ?' ಎಂದು ಮೂದಲಿಸುತ್ತಾನೆ. ಸಮಾಧಾನ ದಿಂದ ಧ್ಯಾನಸ್ಥನಾಗಿ ಸಾಯಬೇಕೆಂದಿದ್ದ ವಿಶ್ವನಂದಿಗೆ ಕೋಪ ಉಕ್ಕೇರಿ ಬಂದು ಮುಂದಿನ ಜನ್ಮದಲ್ಲಿ ತನ್ನ ಸೇಡು ತೀರಿಸಿ ಕೊಳ್ಳುವುದಾಗಿ ಹೇಳಿ ಪ್ರಾಣ ಬಿಡುತ್ತಾನೆ.

ಮರುಜನ್ಮದಲ್ಲಿ ತ್ರಿಪೃಷ್ಟ-ವಿಜಯ (ವಾಸುದೇವ-ಬಲ ದೇವ) ರಾಗಿ ಹುಟ್ಟಿ ಬಂದು ಸ್ವಯಂಪ್ರಭೆಯ ಲಗ್ನಕ್ಕಾಗಿ ವ್ಯಾಜ್ಯ ಬೆಳೆಸುತ್ತಾರೆ. ತ್ರಿಪೃಷ್ಟ (ಮಹಾವೀರನ ೧೯ನೆಯ ಜನ್ಮದ ವ್ಯಕ್ತಿ) ದರ್ಪದಿಂದ ರಾಜ್ಯವಾಳುತ್ತಿರುವಾಗ ಸ್ವಯಂಪ್ರಭೆ ಯೊಂದಿಗೆ ಲಗ್ನ ನಿಶ್ಚಯವಾಗುತ್ತದೆ.

ಚತುರ್ಥಾಶ್ವಾಸಂ:

ಸ್ವಯಂಪ್ರಭೆಯ ವಿರಹ ವರ್ಣನೆ, ವಿಪ್ರಲಂಬ ಶೃಂಗಾರ ವರ್ಣನೆಗಳಿಂದ ಈ ಅಧ್ಯಾಯವು ತುಂಬಿಹೋಗಿದೆ.

ಪಂಚಮಾಶ್ವಾಸಂ:

ತ್ರಿಪೃಷ್ಟನ ವಿರಹವರ್ಣನೆ, ತ್ರಿಪೃಷ್ಟ-ಸ್ವಯಂಪ್ರಭೆ ಯರ ಪ್ರಥಮ ನೋಟದ ವರ್ಣನೆಗಳನ್ನು ಬಿಟ್ಟು ಬೇರೊಂದು ವಿಷಯವೇ ಈ ಆಶ್ವಾಸದಲ್ಲಿಲ್ಲ.

ಷಷ್ಠಾಶ್ವಾಸಂ:

ರಾತ್ರಿ-ಚಂದ್ರೋದಯ-ಚಂದ್ರಿಕೆಗಳ ವರ್ಣನೆ, ಅಭಿಸಾರಿಕಾರತಿಯ ವರ್ಣನೆ, ಸೂರ್ಯೋದಯದ ವರ್ಣನೆಗಳು ಈ ಆಶ್ವಾಸದಲ್ಲಿವೆ.

ಸಪ್ತಮಾಶ್ವಾಸಂ:

ತ್ರಿಪೃಷ್ಟ-ಸ್ವಯಂಪ್ರಭೆಯರ ವಿವಾಹ ವರ್ಣನೆ; ವಿದ್ಯಾಧರ ಚಕ್ರವರ್ತಿ ತನಗೆ ಸ್ವಯಂಪ್ರಭೆಯನ್ನು ಕೊಡದ್ದಕ್ಕೆ ವ್ಯಾಜ್ಯ ಹೂಡಿದ್ದು; ಜ್ವಲನ ಜಟಿಯ(ಸ್ವಯಂಪ್ರಭೆಯ ತಂದೆ) ಜೊತೆಗೆ ದೂತರನ್ನು ಅಟ್ಟಿ ವಾದವಿವಾದ ನಡೆಸಿದ್ದು, ಇಲ್ಲಿದೆ.

ಅಷ್ಟಮಾಶ್ವಾಸಂ:

ಯುದ್ಧ ಪ್ರಯಾಣ ಪ್ರಸಂಗದ ವರ್ಣನೆ; ಸೂರ್ಯಾಸ್ತ ವರ್ಣನೆ, ರಾತ್ರಿವರ್ಣನೆ, ಚಂದ್ರೋದಯ ವರ್ಣನೆ, ಕಾಮು ದಿಯ ವರ್ಣನೆ, ಚಂದ್ರಾಸ್ತ ವರ್ಣನೆ; ಆಮೇಲೆ ವಿವರವಾಗಿ ಯುದ್ಧದ ವರ್ಣನೆ; ಕೊನೆಗೆ ದಿಗ್ವಿಜಯ ವರ್ಣನೆ ಬಂದಿವೆ.

ನವಮಾಶ್ವಾಸಂ:

ಜ್ವಲನಜಟಿಯ ವೈರಾಗ್ಯ, ದೀಕ್ಷೆ; ಆ ಮೇಲೆ ಜ್ವಲನ ಜಟಿಯ ಮಗನಾದ ಅರ್ಕಕೀರ್ತಿಯ ರಾಜ್ಯ ವೈಭವ; ಅರ್ಕ

ಕೀರ್ತಿಯ ಮಗನ ಜೊತೆಗೆ ಸ್ವಯಂಪ್ರಭೆಯ ಮಗಳ ಲಗ್ನ; ನಂತರ ಅರ್ಕಕೀರ್ತಿಗೆ ವೈರಾಗ್ಯ ಮುಂತಾದವು ಉಂಟು.

ದಶಮಾಶ್ವಾಸಂ:

ತ್ರಿಪೃಷ್ಟನು ನರಕ ಗತಿಯನ್ನು ಹೊಂದಿ ಸಿಂಹ (ಮಹಾವೀರನ ೨೧ನೆಯ ಜನ್ಮ) ವಾಗಿ ಹುಟ್ಟುತ್ತಾನೆ. ಮತ್ತೆ ಆ ಸಿಂಹ ಸತ್ತು ಹೋಗಿ ನರಕಗತಿ ಉಂಟಾಗಿ ಆಮೇಲೆ ಸಿಂಹರಾಜ (೨೩ನೆಯ ಜನ್ಮ) ನಾಗಿ ಹುಟ್ಟಿ ಬರುತ್ತದೆ. ಆಗ ಅಮಿತಗುಣ ಎಂಬ ಆಚಾರ್ಯರ ಉಪದೇಶದಿಂದ ಅದಕ್ಕೆ ಸಮ್ಯಕ್ತ್ವ ಹುಟ್ಟುತ್ತದೆ. ಆಚಾರ್ಯರು ಅದಕ್ಕೆ ಅದರ ಹಿಂದಿನ ಜನ್ಮಗಳ ಕಥೆಗಳನ್ನು ಹೇಳುತ್ತಾರೆ. ಪುರೂರವ (ಮಹಾವೀರನ ೧ ನೆಯ ಜನ್ಮ) ನ ಕಥೆ, ಮರೀಚಿ (ಭರತಚಕ್ರಿಯ ಮಗ–ಮಹಾವೀರನ ೩ನೆಯ ಜನ್ಮ)ಯ ಕಥೆ ಇತ್ಯಾದಿ-ಈ ಆಶ್ವಾಸದಲ್ಲಿ ಬಂದಿವೆ.

ಏಕಾದಶಾಶ್ವಾಸಂ:

ಚಾರಣರು ಸಿಂಹಕ್ಕೆ ನರಕವರ್ಣನೆಯನ್ನು ಹೇಳಿದ್ದು; ಸಮ್ಯಕ್ತ್ವದ ಮಹತ್ವವನ್ನು ಬೋಧಿಸಿದ್ದು; ಮೃಗರಾಜನಿಗೆ ಆಗ ಥಟ್ಟನೆ ಸಮ್ಯಕ್ತ್ವ ಉಂಟಾದದ್ದು ಇಲ್ಲಿವೆ.

ದ್ವಾದಶಾಶ್ವಾಸಂ:

ಸಿಂಹವು ಮುನಿಗಳ ಮುಂದೆ ತನ್ನ ಪಾಪ ಪರಿಹಾರದ ಉಪಾಯವನ್ನು ಕೇಳಿದ್ದು, ಪ್ರಾಯೋಪಗಮನ ವ್ರತದಿಂದ

ಪಾಪಪರಿಹಾರವಾಗುವುದೆಂದು ಚಾರಣಮುನಿಗಳು ಅದಕ್ಕೆ ಹೇಳಿದ್ದು; ಇನ್ನು ಮುಂದೆ ೧೦ ನೆಯ ಜನ್ಮದಲ್ಲಿ ಅದಕ್ಕೆ ತೀರ್ಥಂಕರ ಜನ್ಮ ಲಭಿಸುವುದೆಂದು ತಿಳಿಸಿದ್ದು; ಆ ಹತ್ತು ಜನ್ಮಗಳ ವಿವರಣೆ ಮಾಡಿದ್ದು; ಈ ಅಧ್ಯಾಯದಲ್ಲಿ ಬಂದಿವೆ.

ತ್ರಯೋದಶ–ಚತುರ್ದಶ ಆಶ್ವಾಸ:

ನಂದನನು ತನ್ನ ಮುಂದಿನ ಭವಾವಳಿಯ ಕಥೆಯನ್ನು ಪಿಹಿತಾಸ್ರವ ಮುನಿಗಳ ಬಾಯಿಂದ ಕೇಳಿದ್ದು; ಆ ಮೇಲೆ ಸನ್ಯಾಸಿಯಾಗಿ ಸತ್ತು ಸ್ವರ್ಗಸೇರಿದ್ದು; ಅಲ್ಲಿಂದ ಇಳಿದು ಬಂದು ಮಹಾವೀರಸ್ವಾಮಿಯಾದದ್ದು–ವಿವರ ಇಲ್ಲಿದೆ.

ಮಹಾವೀರ (ವರ್ಧಮಾನ) ತೀರ್ಥಂಕರನ ಕಥೆ ಪ್ರಾರಂಭ:

೧) ಕುಂಡಪುರ:-ಸಿದ್ಧಾರ್ಥ-ಪ್ರಿಯಕಾರಿಣಿ: ೧೬ ಕನಸುಗಳು

೨) ಗರ್ಭಾವತರಣ ಕಲ್ಯಾಣ

೩) ಜನ್ಮಾಭಿಷೇಕ ಕಲ್ಯಾಣ

೪) ಪರಿನಿಷ್ಕ್ರಮಣ ಕಲ್ಯಾಣದ ಸಿದ್ಧತೆ ಮುಂತಾದ ವರ್ಣನೆ, ವಿವರಣೆಗಳುಂಟು.

ಪಂಚದಶಾಶ್ವಾಸಂ:

೧) ಪರಿನಿಷ್ಕ್ರಮಣ ವರ್ಣನೆ

೨) ಮನಃ ಪರಿಯಾಯ ಜ್ಞಾನ

೩) ಷಷ್ಠೋಪವಾಸ ಪಾರಣೆಗಾಗಿ ಕೂಲಪುರ ಪ್ರವೇಶ; ಕೂಲರಾಜನಿಂದ ಆಹಾರದಾನ
೪) ಈಶ್ವರ-ಪಾರ್ವತಿಯರಿಂದ ಸತ್ವ ಪರೀಕ್ಷೆ
೫) ಚಂದನೆಯ ಕಥೆ; ಚಂದನೆಯಿಂದ ಮಹಾವೀರ ಸ್ವಾಮಿಗೆ ಆಹಾರ ದಾನ
೬) ಕೇವಲಜ್ಞಾನ ಪ್ರಾಪ್ತಿಯ ವರ್ಣನೆ–ಮುಂತಾದವು ಇಲ್ಲಿ ಉಂಟು.

ಷೋಡಶಾಶ್ವಾಸಂ:

೧) ಇಂದ್ರನಿಂದ ಸಮವಸರಣ ರಚನೆ
೨) ಗೌತಮಗಣಧರನ ಆಗಮನ; ಧರ್ಮಬೋಧೆ
೩) ಶ್ರೇಣಿಕರಾಜನ ಆಗಮನ; ಅವನ ಪೂರ್ವಜನ್ಮ-ಪುನರ್ಜನ್ಮ ವೃತ್ತಾಂತಗಳು

ಇತ್ಯಾದಿ ಇದರಲ್ಲಿ ಬಂದಿವೆ.

ಇಲ್ಲಿಗೆ ವರ್ಧಮಾನ ಪುರಾಣ ಮುಗಿಯುತ್ತದೆ.

—ಕೊನೆಯ ನಾಲ್ಕು ಆಶ್ವಾಸಗಳಲ್ಲಿ ಮಾತ್ರ ಮಹಾವೀರಸ್ವಾಮಿಯ ಚರಿತ್ರೆ ಇದೆ. ಉಳಿದ ಹನ್ನೆರಡು ಆಶ್ವಾಸಗಳು ಅವನ ಪೂರ್ವಜನ್ಮಗಳ ಕಥೆಯನ್ನು ವಿವರಿಸುತ್ತವೆ. ೩ ರಿಂದ ೧೦ರ ವರೆಗೆ ಏಳು ಆಶ್ವಾಸಗಳಲ್ಲಿ ತ್ರಿಪೃಷ್ಟನ ಕಥೆಯೇ ಇದೆ. ಉಳಿದ ಜನ್ಮಾಂತರ ಕಥೆಗಳು ಸಹ ಕ್ರಮವಾಗಿ ಬಂದಿಲ್ಲ. ಹೊಸ ತಂತ್ರದೊಂದಿಗೆ ಹಿಂದು ಮುಂದಾಗಿ ಬಂದು ಒಟ್ಟು ವಿವರಣೆಯನ್ನು ಒದಗಿಸುತ್ತವೆ.

೪. ವರ್ಧಮಾನ ತೀರ್ಥಂಕರ ಭವಾವಳಿ

೧) ಪುರೂರವನೆಂಬ ಬೇಡರದೊರೆ- ಮದ್ಯಮಾಂಸ ಮಧುವಿರತಿವ್ರತಧಾರಿ.
೨) ಸೌಧರ್ಮ ಕಲ್ಪವೆಂಬ ಸ್ವರ್ಗದಲ್ಲಿ ದೇವತಾಜನ್ಮ
೩) ಮರೀಚಿ: ಭರತ ಚಕ್ರಿಯ ಮಗ-ಮಿಥ್ಯಾಸನ್ಯಾಸಿ
೪) ಬ್ರಹ್ಮಕಲ್ಪವೆಂಬ ಸ್ವರ್ಗದಲ್ಲಿ ದೇವತಾ ಜನ್ಮ
೫) ಜಟಿಳ: ಬ್ರಾಹ್ಮಣ-ಪರಿವ್ರಾಜಕ ಸನ್ಯಾಸಿ
೬) ಪ್ರಥಮ ಕಲ್ಪವೆಂಬ ಸ್ವರ್ಗದಲ್ಲಿ ದೇವತಾ ಜನ್ಮ
೭) ಪುಷ್ಪಮಿತ್ರ: ಬ್ರಾಹ್ಮಣ ಸನ್ಯಾಸಿ
೮) ಪ್ರಥಮ ಕಲ್ಪದ ಸ್ವರ್ಗವಾಸಿ
೯) ಅಗ್ನಿಸಖ:ಬ್ರಾಹ್ಮಣ-ವೇದಶಾಸ್ತ್ರಪಾರಂಗತ
೧೦) ಸನತ್ಕುಮಾರವೆಂಬ ಸ್ವರ್ಗದಲ್ಲಿ ದೇವತಾಪುರುಷ
೧೧) ಅಗ್ನಿಮಿತ್ರ: ಮಹಾತಪಸ್ವಿ
೧೨) ಮಾಹೇಂದ್ರ ಕಲ್ಪವೆಂಬ ಸ್ವರ್ಗದ ದೇವ ಜನ್ಮ
೧೩) ಭಾರದ್ವಾಜ: ಶ್ರುತಿ ಸ್ಮೃತಿ ಪುರಾಣ ಪಾರಂಗತ
೧೪) ಮಾಹೇಂದ್ರ ತ್ರಿದಿವದಲ್ಲಿ ದೇವ
೧೫) ಸ್ಥಾವರ ಜೀವಿಯಾಗಿ ನರಕದಲ್ಲಿ ತಿರುಗುವ ಸ್ಥಾವರನೆಂಬ ಭಿಕ್ಷು-ಸನ್ಯಾಸಿ

೧೬) ಮಾಹೇಂದ್ರ ಕಲ್ಪಜ
೧೭) ವಿಶ್ವನಂದಿ: ಮಹಾಪೌರುಷವಂತ ಮಗಧಾಧಿಪ: ಜಿನ ಮುನಿ
೧೮) ಶತಾರಾ ಸ್ವರ್ಗದಲ್ಲಿ ಸುರಜನ್ಮ
೧೯) ತ್ರಿಪೃಷ್ಟ: ಅರ್ಧಚಕ್ರಿ-ಮಹಾಪರಾಕ್ರಮಿ, ಪ್ರಥಮ ವಾಸುದೇವನಾಗಿ ಪ್ರತಿವಾಸುದೇವನಾದ ವಿದ್ಯಾಧರ ಚಕ್ರಿ-ಅಶ್ವಗ್ರೀವನನ್ನು ಸಂಹರಿಸಿದ್ದು.
೨೦) ಏಳನೆಯ ನರಕದಲ್ಲಿ ಜನ್ಮ
೨೧) ಸಿಂಹದ ಜನ್ಮ
೨೨) ಮೊದಲನೆಯ ನರಕದಲ್ಲಿ ಜನ್ಮ
೨೩) ಸಿಂಹರಾಜ: ಚಾರಣಮುನಿಗಳ ಉಪದೇಶದಿಂದ ಸಮ್ಯಕ್ತ್ವ ಪ್ರಾಪ್ತಿ.
೨೪) ಸೌಧರ್ಮಕಲ್ಪದಲ್ಲಿ ಸಿಂಹಕೇತು ಎಂಬ ಸುರಜನ್ಮ
೨೫) ಕನಕಧ್ವಜ: ಕನ್ನಡಿಯಲ್ಲಿ ತನ್ನ ಮುಖ ನೋಡಿದಾಗ ಬಿಳಿಯ ಕೂದಲು ಕಂಡು ವೈರಾಗ್ಯ ತಳೆದದ್ದು.
೨೬) ಕನತ್ಕಾಪಿತ್ಥಕಲ್ಪದಲ್ಲಿ ದೇವಾನಂದನೆಂಬ ವೃಂದಾರಕ.
೨೭) ಹರಿಷೇಣ: ಸಲ್ಲೇಖನ ಸಮಾಧಿಮರಣ ಕೈಕೊಂಡದ್ದು
೨೮) ಪ್ರೀತಿಂಕರ: ಮಹಾಶುಕ್ಲಕಲ್ಪದ ಪ್ರೀತಿವರ್ಧನ ವಿಮಾನ ದೇವತೆ
೨೯) ಪ್ರಿಯಮಿತ್ರ: ಕ್ಷೇಮಂಕರನ ಸಮವಸರಣ ಬೋಧೆ ಲಭಿಸಿದ್ದು.

೩೦) ಸೂರ್ಯಪ್ರಭ: ಸಹಸ್ರಾರಕಲ್ಪದಲ್ಲಿ ರುಚಕಾಖ್ಯ ವಿಮಾನ ದೇವ

೩೧) ನಂದನ: ನಿತಕಚ್ಛದೇಶದ ರಾಜ ಮುಗಿಲು ಕರಗಿದ್ದು ಕಂಡು ವೈರಾಗ್ಯ.

೩೨) ಇಂದ್ರ: ಷೋಡಶ ಕಲ್ಪದಲ್ಲಿ ಪುಷ್ಪೋತ್ತರ ವಿಮಾನ ದೇವ

೩೩) ವರ್ಧಮಾನ ಮಹಾವೀರ ತೀರ್ಥಂಕರ

೫. ಮಹಾವೀರನ ಗರ್ಭಕಲ್ಯಾಣ, ಜನ್ಮಕಲ್ಯಾಣ

ಜಂಬೂದ್ವೀಪದ ಭರತ ಖಂಡದಲ್ಲಿ ವಿದೇಹ ದೇಶ. ಅದರಲ್ಲಿ ಕುಂಡಪುರ. ಅದನ್ನು ಸಿದ್ಧಾರ್ಥನು ಆಳುತ್ತಿದ್ದನು. ಅವನ ಹೆಂಡತಿ ಪ್ರಿಯಕಾರಿಣಿ:

ಆಕೆಯನಂಗವಿಜಯ ಪ-|
ತಾಕೆಯನಭಿಮಾನ ದಾನಶೀಲ ಗುಣಾಸೀ||
ಕಾಕೆಯನನವಧಿ ಪುಣ್ಯ-|
ಶ್ಲೋಕೆಯನುದ್ಯದ್ವಿವೇಕೆಯಂ ಪೊಗಳದರಾರ್? ||

ಆ ಪ್ರಿಯಕಾರಿಣಿಯ ಜೊತೆಗೆ ಸಿದ್ಧಾರ್ಥ ಮಹಾರಾಜನು ಧರ್ಮ ಮತ್ತು ಅರ್ಥಕ್ಕೆ ವಿರೋಧ ಬಾರದ ರೀತಿ

ಯಲ್ಲಿ ಕಾಮ ಸುಖವನ್ನು ಅನುಭವಿಸುತ್ತ ಇದ್ದನು. ಆಗ ಪುಷ್ಪೋತ್ತರ ವಿಮಾನಪತಿಯಾದ ಅಚ್ಯುತೇಂದ್ರನ ಆಯುಷ್ಯ ಮುಗಿಯಲು ಇನ್ನೂ ಆರು ತಿಂಗಳ ಅವಧಿ ಉಳಿದಿತ್ತು. ಅಷ್ಟರಲ್ಲಿ ಸೌಧರ್ಮೇಂದ್ರನ ರತ್ನ ಸಿಂಹಾಸನವು ಅಸಿವಿುತ್ತ ವಾಗಿ ಕಂಪನಗೊಂಡಿತು, ಪ್ರಿಯಕಾರಿಣಿಯ ಗರ್ಭದಲ್ಲಿ ತೀರ್ಥಂಕರನು ಅವತರಿಸಲಿರುವುದನ್ನು ಸೂಚಿಸಿತು. ಆ ತೀರ್ಥಂಕರನಿಗೆ ಮನಸ್ಸಿನಲ್ಲಿಯೇ ನಮಿಸಿ ಗರ್ಭಾವತರಣ ಮಹೋತ್ಸವದ ಸಿದ್ಧತೆಯಲ್ಲಿ ಸೌಧರ್ಮೇಂದ್ರನು ತೊಡಗಿದನು. ವೈಶ್ರವಣನು ಇಂದ್ರನ ಆಜ್ಞೆಯಂತೆ ಕಂಡಪುರದಲ್ಲಿ ರತ್ನದ ಮಳೆಗರೆದನು ಆದರಿಂದ ಮನೆ ಮನೆಗಳಲ್ಲಿ ಸಿರಿ ತುಂಬಿ ತುಳುಕಿತು.

ಭಾವೀ–ಜಿನನ–ಜನನಿಯ ಗರ್ಭಶೋಧನ ಕಾರ್ಯದಲ್ಲಿ ಪ್ರವೀಣೆಯರಾದ ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮೀ–ಎಂಬ ಆರು ಮಂದಿ ದೇವತಾಸ್ತ್ರೀಯರನ್ನು ಸೌಧರ್ಮೇಂದ್ರನು ಭೂಲೋಕಕ್ಕೆ ಕಳಿಸಿದನು. ಅನೇಕ ದೇವತಾಸ್ತ್ರೀಯರೂ ಅವರ ಜೊತೆಗೆ ಹೋದರು. ದೇವತಾಸ್ತ್ರೀಯರು ಇಳಿದು ಬರುವುದು ರತ್ನವೃಷ್ಟಿಯನ್ನು ಮೀರಿಸಿದಂತಿತ್ತು. ಪ್ರೀಯಕಾರಿಣಿಗೆ ನಮಿಸಿ ಅವಳ ಸೇವೆಗೆ ತೊಡಗಿದರು.

ದೇವಲೋಕದ ಹೂವಿನ ಬಟ್ಟೆ, ರತ್ನದ ಆಭರಣ, ಸುಗಂಧ ದ್ರವ್ಯಗಳ ಲೇಪನ, ಮುಂತಾದವುಗಳು ದೇವತಾ ಸ್ತ್ರೀಯರಿಂದ ಪ್ರಿಯಕಾರಿಣಿದೇವಿಗೆ ಲಭಿಸಿದವು. 'ಜಿನ ಜನನಿಗೆ

ದೊರೆಯೆನಿಪ್ಪ ಜನನಿಯುರೊಳರೆ?' ಪೂರ್ವಜನ್ಮದ ಪುಣ್ಯದಿಂದ ಅವಳಿಗೆ ದೇವತಾಸ್ತ್ರೀಯರ ಸೇವೆ ಲಭಿಸಿದೆ. ತತ್ಪ್ರಿಯ ಕಾರಣಿಯಂತೆ ಕಾಂತೆಯರ್ ನೋಂತವರಾರ್?'

ಸ್ಫಟಿಕದಿಂದ ರಚಿಸಿದ ನೂತನ ಮೂರ್ತಿಯನ್ನು ಅಮೃತಜಲದಿಂದ ತೊಳೆದಂತೆ, ಆ ತಾಯಿಯನ್ನು ತೊಳೆದು ಎರೆದರು ಹೀಗೆ ಗರ್ಭಶುದ್ಧೀಕಾರ್ಯ ನಡೆದು ಆರು ತಿಂಗಳು ಕಾಲ ಗತಿಸಿತು. ಆಗ ಒಂದು ದಿನ ಪ್ರಿಯಕಾರಿಣಿದೇವಿ ಪುಷ್ಪವತಿಯಾದಳು.

ನವಸರಸಫಳೋದಯಮಿ-|
ನ್ನವಿಳಂಬಿತಮೆನಿಸಿ ತೋರ್ಪ ಕಲ್ಪಲತಿಕೆ ಪು||
ಷ್ಪವತಿ ದಲಿಪ್ಪಂದದೆ ನೃಪ|
ಯುವತಿ ಜಗಜ್ಜನನಿ ಪುಷ್ಪವತಿ ತಾನಾದಳ್||

ರಸಮಯವಾದ ಫಲಗಳು ಬಿಡುವುದು ಇನ್ನೇನು ತಡ ವಿಲ್ಲನೆಂಬುದನ್ನು ಸೂಚಿಸಿ ಕಲ್ಪವೃಕ್ಷವು ಹೂಬಿಡಲು ತೊಡಗಿ ದಂತೆ ಅವಳು ಪುಷ್ಪವತಿಯಾದಳು.

ಹೊರಗಾದ ನಾಲ್ಕನೆಯ ದಿನ ಮಹಾರಾಣಿಯನ್ನು ದೇವ ಕನ್ನೆಯರು ಅಕ್ಕರೆಯಿಂದ ಎರೆದರು. ಧವಳ ದಿವ್ಯಾಂಬರವನ್ನು ಉಟ್ಟು, ಮುತ್ತಿನ ಆಭರಣಗಳನ್ನು ತೊಟ್ಟು ಸುಗಂಧಾನು ಲೇಪನಗಳಿಂದ ದೇವಿ ಒಪ್ಪಿದಳು. ಸಕಲ ಶೃಂಗಾರಗಳಿಂದ ಶೋಭಿಸುವ ಶಯ್ಯಾಸದನಕ್ಕೆ ಸಕಲಲೋಕದ ಪರಮಮಂಗಲದ

ಸಾರಸರ್ವಸ್ವವೇ ನಡೆದು ಬರುವಂತೆ ಹಂಸಗತಿಯಿಂದ ರಾಣಿ ಬಂದಳು. ತನ್ನ ಜೀವಿತೇಶ್ವರನ ಕೂಡ ನಿರವಧಿ ಸುಖಾನು ಭೂತಿ ಪ್ರೀತಚಿತ್ತೆಯಾಗಿ ಪವಡಿಸಿ, ಬೆಳಗಿನ ಜಾವದಲ್ಲಿ ಹದಿ ನಾರು ಭವ್ಯ ಕನಸುಗಳನ್ನು ಕಂಡಳು.

ಮದಗಜ, ವೃಷಭ. ಸಿಂಹ, ಲಕ್ಷ್ಮೀ, ಹೂಮಾಲೆಗಳ ಜೋಡಿ, ಚಂದ್ರ, ಸೂರ್ಯ, ಮೀನುಗಳ ಜೋಡಿ, ತುಂಬಿದ ಕುಂಭಗಳ ಜೋಡಿ, ಕಮಲ ಸರೋವರ, ಸಮುದ್ರ, ಸಿಂಹಾ ಸನ, ದೇವತೆಗಳ ವಿಮಾನ, ದೇವತಾ ಮಂದಿರ, ರತ್ನರಾಶಿ, ಅಗ್ನಿಜ್ವಾಲೆ–ಹೀಗೆ ಹದಿನಾರು ವಸ್ತುಗಳು ಕನಸಿನಲ್ಲಿ ಕಂಡವು. ಎದ್ದು ಸ್ನಾನಾದಿಗಳನ್ನು ತೀರಿಸಿ, ಚಿಂತಾಮಣಿಯಂತಿರುವ ಸಿದ್ಧಾರ್ಥ ಮಹಾರಾಜನ ಬಳಿಗೆ ಬಂದು ಕನಸುಗಳನ್ನು ನಿವೇದಿ ಸಿದಳು.

ತೊದಳೇಸೀ ಸ್ವಪ್ನ ಸಂದೋಹಮನತಿ ಮುದದಿಂ
ದೇವಿ ನೀನಾವಗಂ ಕಂ|
ಡುದರಿಂ ಶ್ರೀಮಜ್ಜಿನಾಧೀಶ್ವರನಖಿಳ ಜಗನ್ಮಂಗಳಂ
ಕೇವಲ ಜ್ಞಾ||
ನದಯಾಂಭೋರಾಶಿ ವಿಶ್ವಾಂಬರಪತಿನುತ
ಪಾದಾರವಿಂದದ್ವಯಂ ಪು||
ಟ್ಟಿದಪಂ ನಿನ್ನೀ ಪ್ರಸನ್ನೋದರದೊಳನುಪಮಾನಂದ|
ದಾಮಾಭಿರಾಮಂ||

ನಿನ್ನ ಹೊಟ್ಟೆಯಿಂದ ತೀರ್ಥಂಕರನು ಹುಟ್ಟಿ ಬರುವನು; ಭುವನತ್ರಯಕ್ಕೆ ಗುರುವಾಗಲಿರುವವನಿಗೆ ನಾವು ಗುರುಗಳಾ

ಗುವ (ತಾಯಿ ತಂದೆಗಳಾಗುವ) ಭಾಗ್ಯವನ್ನು ಪಡೆದ ನಮ್ಮೀ ರ್ವರ ಜನ್ಮ ಸಫಲವಾಗುವದು- ಎಂದು ಸಿದ್ಧಾರ್ಥನು ಪ್ರಿಯ ಕಾರಿಣಿಗೆ ಹೇಳಿದನು. ದಂಪತಿಗಳಿಗೆ ಪರಮಾನಂದ ಉಂಟಾ ಯಿತು. ಅದೇ ಸಮಯಕ್ಕೆ ಅಚ್ಯುತದಿವಿಜೇಂದ್ರನು ಪುಷ್ಪೋ ತ್ತರ ವಿಮಾನದಿಂದ ಭೂಲೋಕಕ್ಕೆ ಬಂದು ಪ್ರಿಯಕಾರಿಣಿಯ ಗರ್ಭದಲ್ಲಿ ಸೇರಿಕೊಂಡನು.

ಅಂತು ನಿತಾಂತಕಾಂತಮೆನಿಪ ಶುಕ್ತಿಕಾಪುಟದೊಳು ಅನರ್ಘ್ಯಮುಕ್ತಾಫಲಂ ನೆಲಸುವಂತೆ ತತ್‌ಮಹಾತಿಶಯ ವಿಶುದ್ಧ ಗರ್ಭಾವಾಸದೊಳ್ ಆ ಸಮಸ್ತ ಗುಣನಿವಾಸಂ ನೆಲಸಿ ಬಳೆಯೆವಳೆಯೆ-

ಗರ್ಭವತಿಯರಾಗಿರುವಾಗ ಸಾಮಾನ್ಯವಾಗಿ ಜಗತ್ತಿನ ಸ್ತ್ರೀಯರಿಗೆ ಉಂಟಾಗುವ ಭಾರವೂ ವಿಕೃತಿಯೂ ಆ ಮಹಾ ರಾಣಿಗೆ ಉಂಟಾಗಲಿಲ್ಲ. ಗರ್ಭದಲ್ಲಿ ಮೋಹಲತಾಪವಿತ್ರನಿರು ವಾಗ ದೋಹಲತಾಪ್ರವೃತ್ತಿ ಎಂದಾದರೂ ತೋರಬಹುದೇ? ಅಯಶೋಧರ ಭಾರದೂರನನ್ನು ದೇಹದಲ್ಲಿ ಹೊತ್ತ ಕಾಂತೆಗೆ ಕೃಶೋಧರಭಾರವದೆಂತು?

ಪಳಕಿನ ಕಳಶದೊಳ್ ಇರಿಸಿದ ವಿಳಸನ್ಮಣಿದೀಪ ಕಳಿಕೆ ಯಂತೆ ಜಗನ್ಮಂಗಳನಿಳಯಂ ಗತಪಿಳಯಂ ಬೆಳಗಿದನಾ ಕಮಳ ಮುಖಿಯ ವಿಮಳೋದರದೊಳ್. ಅಂದರೆ- ಸ್ಫಟಿಕದ ಕೊಡ

ದೊಳಗಿರಿಸಿದ ರತ್ನದೀಪದಂತೆ ಜಿನನು ಅವಳ ಗರ್ಭದಲ್ಲಿ ಬೆಳಗಿದನು.

ಸುರಸಮಿತಿಯೊಂದಿಗೆ ಇಂದ್ರಾಣಿಸಹಿತವಾಗಿ ಸೌಧರ್ಮೇಂದ್ರನು ಸಿದ್ಧಾರ್ಥನ ಅರಮನೆಗೆ ಬಂದನು. ದಂಪತಿಗಳನ್ನು ಮೂರು ಸುತ್ತು ಪ್ರದಕ್ಷಿಣೆ ಹಾಕಿದನು. ದಿವ್ಯ ವಸ್ತ್ರಾಭರಣಗಳಿಂದ ಅವರನ್ನು ಶೃಂಗರಿಸಿ, ಪೂಜಿಸಿ, ಹಾಡಿ ಹೊಗಳಿದನು. ಗರ್ಭಕಲ್ಯಾಣ ಮಹೋತ್ಸವವನ್ನು ನೆರವೇರಿಸಿ ಅಮಂದಾನಂದದಿಂದ ಪ್ರಫುಲ್ಲಿತನಾಗಿ ಇಂದ್ರನು ನಿಜನಿವಾಸಕ್ಕೆ ಪರಿವಾರ ಸಮೇತ ಮರಳಿ ಹೋದನು.

ಆ ಜನನಿಗೆ ಜನಿಯಿಸಿದುದು|
ವೃಜನನಂ ಸಕಳ ಭುವನಭವನೋತ್ಸವ ಲ|
ಕ್ಷ್ಮೀ ಜನನಂ ವಿಬುಧ ಶ್ರೀ|
ಯೋಜನನಂ ಜೈನ ಸಮಯ ಲೀಲಾ ಜನನಂ||

ಹೀಗೆ ಮಹಾರಾಣಿಯ ಹೊಟ್ಟೆಯಿಂದ ಮಹಾವೀರಸ್ವಾಮಿ ಹುಟ್ಟಿ ಬಂದುದು ಮಹದಾನಂದವನ್ನು ಉಂಟುಮಾಡಿತು.

ಚೈತ್ರಸಿತ ತ್ರಯೋದಶಿಯೊಳುತ್ತರೆ ಸಾರ್ತರೆ ಸನ್ಮುಹೂರ್ತದೊಳ್|
ಪುತ್ರನನಲ್ತಿಯಿಂ ಪಡೆದಳಾಪ್ರಿಯಕಾರಿಣಿ ಚಾರುಗಾತ್ರನಂ||

ಗೊತ್ರಪವಿತ್ರನಂ ಭುವನಮಿತ್ರನನಾತತಕರ್ಮ
ಕಂದಳೀ|
ದಾತ್ರನಸದ್ವಬೋಧ ಸುಖಪಾತ್ರನನಂಬುಜಪತ್ರ
ನೇತ್ರನಂ||

ಚೈತ್ರ ಶುದ್ಧ ತ್ರಯೋದಶಿಯ ದಿನ ಪ್ರಿಯಕಾರಿಣಿ ಪುತ್ರ ರತ್ನವನ್ನು ಹೆತ್ತಳು. ಆಗ ಎಲ್ಲೆಡೆಗೂ ಮಂಗಳ ವಾತಾವರಣ ಉಂಟಾಯಿತು. ಪ್ರಾಣಿಗಳು ಜಾತೀವೈರವನ್ನೇ ಮರೆತು ಒಂದೆಡೆ ಸೇರಿ ಆಡತೊಡಗಿದವು. ಅರಮನೆಯಲ್ಲಿ ಸಂಭ್ರಮದ ವಾತಾವರಣ ಉಂಟಾಯಿತು. ಸಿದ್ಧಾರ್ಥನಿಗೆ ಗಂಡು ಮಗು ಹುಟ್ಟಿದ ಸುದ್ದಿ ತಿಳಿದೊಡನೆ, ಸೂತಿಕಾಗೃಹಕ್ಕೆ ಬಂದ ಮಗುವಿನ ಮುಖ ನೋಡಿ ಆನಂದ ಹೊಂದಿದನು. ಜಿನ ಮಂದಿರಗಳಲ್ಲಿ ಪೂಜೆ ನಡೆಯಿಸಿದನು. ದಾನ ಧರ್ಮಾದಿಗಳನ್ನು ಮಾಡಿದನು. ಗುರು ಹಿರಿಯರು ಬಂಧುಬಳಗದವರು ಸಡಗರದಲ್ಲಿ ಓಲಾಡಿದರು.

ಆಗ ದೇವಲೋಕದಲ್ಲಿ ವಾದನವಿಲ್ಲದೆ ವಾದ್ಯಗಳು ಬಾರಿಸತೊಡಗಿದವು. ದೇವತೆಗಳು ಅಕಾರಣವಾಗಿ ನಡುಗತೊಡಗಿದುದೇ ನೃತ್ಯವಾಗಿ ಪರಿಣಮಿಸಿತು. ದೇವತೆಗಳ ತಲೆಗಳು ತಂತಾನೆ ಬಾಗಿದುವು. ಕಲ್ಪವೃಕ್ಷಗಳಿಂದ ರಾಶಿ ರಾಶಿಯಾಗಿ ಹೂಮಳೆಗರೆಯಿತು. ಇಂದ್ರನ ಆಸನ ಕಂಪಿಸಿತು. ಅವಧಿಬೋಧದಿಂದ ಜಿನ ಜನ್ಮದ ಸೂಚನೆಯುಂಟಾಯಿತು. ಕೂಡಲೆ ಸೌಧರ್ಮೇಂದ್ರನು ಜಿನಜನ್ಮಾಭಿಷೇಕ ಮಹೋತ್ಸವದ ಸಿದ್ಧತೆಗೆ

ತೊಡಗಿದನು. ಎಲ್ಲ ದೇವತೆಗಳಿಗೂ ಆಜ್ಞೆ ಮಾಡಿದನು. ಭುವನ-ವ್ಯಂತರ-ಜ್ಯೋತಿಷ-ದಿವಿಜ ಲೋಕಗಳ ದೇವತೆಗಳಿಗೆ ಕ್ರಮವಾಗಿ ಶಂಖ-ನಗಾರಿ-ಸಿಂಹ ಘಂಟೆ ಮುಂತಾದ ಧ್ವನಿಗಳ ಮೂಲಕ ಆಜ್ಞೆ ತಿಳಿದು ಬಂತು. ಎಲ್ಲರೂ ಆಕಾಶದ ಅಂಗಳದಲ್ಲಿ ಸೇರಿದರು. ಐರಾವತವನ್ನು ತರಿಸಿದರು. ಇಂದ್ರ-ಇಂದ್ರಾಣಿಯರನ್ನು ಐರಾವತದ ಮೇಲೆ ಕೂಡ್ರಿಸಿ ಸಕಲ ದೇವದಂಪತಿಗಳು ಮೆರವಣಿಗೆ ಹೊರಟು ಭೂಲೋಕಕ್ಕೆ ಬಂದಿಳಿದರು.

ಶೋಭಾಕರಂಡಕವಾದ ಕುಂಡಪುರಕ್ಕೆ ದೇವತೆಗಳು ಬಂದು ತಲುಪಿ, ಪುರದ ಹೊರವಳಯದ ಉದ್ಯಾನದಲ್ಲಿ ನಿಂತು–

ಬಿಜಯಂಗೆಯ್ಸಿ ತರಲ್ಕೆಂ।
ದುಜಗದ್ಗುರುವಂ ಪ್ರಯತ್ನದಿಂದಂ ಶಕ್ರಂ॥
ನಿಜಸತಿಯಂ ಕಳುಪಿದನಂ
ಬುಜಮುಖಿಯಂ ದರ್ಶನೈಕರುಚಿಯಂ ಶಚಿಯಂ॥

ಜಿನ ಬಾಲಕನನ್ನು ತರಲು ಶಚಿಯನ್ನು ಇಂದ್ರನು ಕಳಿಸಿದನು. ಅವಳು ದೇವತಾಸ್ತ್ರೀಯರೊಂದಿಗೆ ಸಿದ್ಧಾರ್ಥನ ಅರ-ಮನೆಯನ್ನು ಹೊಕ್ಕು ಸೂತಿಕಾಸದನವನ್ನು ಮೂರು ಸಾರೆ ಪ್ರದಕ್ಷಿಣೆ ಹಾಕಿ ಒಳಹೊಕ್ಕು ಸಕಲ ಸೌಂದರ್ಯದ ಸಾರವೆನಿಸಿದ ಜಿನಶಿಶುವನ್ನು ಕಂಡಳು. ಬೆಳುದಿಂಗಳಿನಿಂದ ಸಮುದ್ರ ಉಕ್ಕೇರುವಂತೆ, ಜಿನಶಿಶುವಿನ ಕಾಂತಿಯನ್ನು ಕಂಡು ಶಚಿಯ ಹೃದಯದಲ್ಲಿ ಹರ್ಷ ಉಕ್ಕೇರಿತು.

ಪ್ರಾಚಿಯ ಪಕ್ಕದ ಶೀತಮ|
ರೀಚಿಯವೋಲ್ ತಾಯಪಕ್ಕದೊಳ್ ಪಟ್ಟಿರ್ದಾ||
ರೋಚಿರ್ಮಯನ ವಿನೂತ|
ಶ್ರೀ ಚರಣಾಂಬುಜಕೆ ವಿನಯವಿನಮಿತೆಯಾದಳ್||

ಪೂರ್ವದಿಕ್-ಪರ್ವತದ ಪಕ್ಕದಲ್ಲಿ ತಂಗಿರಣ (ಚಂದ್ರ) ನಿರುವಂತೆ, ತಾಯಿಯ ಪಕ್ಕದಲ್ಲಿ ಮಲಗಿರುವ ಜಿನಶಿಶುವಿನ ಶ್ರೀ ಚರಣಾಂಬುಜಕ್ಕೆ ಶಚಿದೇವಿ ಬಾಗಿ ನಮಸ್ಕರಿಸಿದಳು. ಆಗ ಶಚಿಯ ಕೂದಲ ರಾಶಿ ಮಗುವಿನ ಪಾದಗಳ ಮೇಲೆ ಹರಡಿತು; ಕೂಸಿನ ತಾಯಿಯಾದ ಪ್ರಿಯಕಾರಿಣಿದೇವಿಗೆ ಮಾಯಾನಿದ್ರೆ ಬರುವಂತೆ ಮಾಡಿ, ಅವಳ ಪಕ್ಕದಲ್ಲಿ ಮಾಯಾಶಿಶುವನ್ನು ಮಲಗಿಸಿ ಶಚಿದೇವಿ ಆ ಜಿನಶಿಶುವನ್ನು ಎತ್ತಿಕೊಂಡಳು. ಕಲ್ಪ ವೃಕ್ಷದ ಹೂಗೊಂಚಲನ್ನು ಎತ್ತಿದಂತೆ ಕೂಸನ್ನೆತ್ತಿ ಕುಂಡದ ಪುರದ ಹೊರಗೆ ಬಂದು ಆ ಕೂಸನ್ನು ಇಂದ್ರನ ಕೈಗೆ ಒಪ್ಪಿಸಿ ದಳು.

ಸೌಧರ್ಮೇಂದ್ರನು ತನ್ನ ಸಹಸ್ರಲೋಚನಗಳಿಂದ ಕೂಸಿನ ಸೌಂದರ್ಯವನ್ನು ಕಂಡು ಪರಮಾನಂದವನ್ನು ಪಡೆ ದನು. ದೇವಾಂಗ ಸ್ಪರ್ಶೋಚಿತ ಅಮೂಲ್ಯ ದಿವ್ಯಾಂಬರವನ್ನು ಕೂಸಿನ ಮೈಗೆ ಹೊದಿಸಿದನು. ಐರಾವತವನ್ನು ಏರಿ ಕುಳಿತು, ಜಿನಶಿಶುವನ್ನು ತನ್ನ ತೊಡೆಯ ಮೇಲೆ ಕೂಡ್ರಿಸಿಕೊಂಡು 'ತನ್ನ ಬೆನ್ನಂ ಸನ್ನುತ ಸಮುನ್ನತ ಘನಸ್ತನಭರಂಗಳವುಂಕಿ ಸೋಂಕು ವಿನಂ ಇಂದ್ರಾಣಿಯುಮಂ ಕುಳ್ಳಿರಿಸಿದಾಗಳ್' ಈಶಾನೇಂದ್ರನು

ಮುತ್ತಿನ ಸತ್ತಿಗೆಯನ್ನು ಹಿಡಿದನು. ಸನತ್ಕುಮಾರರು ಚೌರಿಯನ್ನು ಬೀಸಿದರು. ಸಾಮಾನಿಕರು ವಿವಿಧ ಆಯುಧಗಳನ್ನು ಧರಿಸಿ ಸಿದ್ಧರಾದರು. ವೈಜಯಂತೀಪ್ರಮುಖಾಶಾ ಕನ್ನಿಕೆಯರು ಭೃಂಗಾರ ಕಳಸ ಕನ್ನಡಿ ಮುಂತಾದ ಮಂಗಳದ್ರವ್ಯಗಳನ್ನು ಹಿಡಿದುಕೊಂಡು ನಡೆದರು. ಕೆಲವರು ಧ್ವಜಗಳನ್ನು ಹಿಡಿದರು. ಇನ್ನು ಕೆಲವರು ಮಂಗಳಪಾಠಕರಾಗಿ ಮುಂದೆ ನಡೆದರು. ಹೀಗೆ ಮೆರವಣಿಗೆ ಹೊರಟು ಮಂದಾರ ಪರ್ವತಕ್ಕೆ ಬಂದು ಎಲ್ಲರು ತಲುಪಿದರು.

ಪಾಂಡುಕ ವನಮಂ ಶಿಖಿಕೃತ|
ತಾಂಡವಮಂ ಕಂಡು ತೀರ್ಥಕರವರ ಸವನೋ||
ನ್ಮಂಡಿತಮಂ ಬಲವಂದುದ|
ಖಂಡಿತ ಶೋಭಾನವದ್ಯಮಂ ತದ್ವನಮಂ||

ನವಿಲುಗಳ ನರ್ತನ ನೋಡಿ ಅಖಂಡಿತವೂ ಅನವದ್ಯವೂ ಆದ ಶೋಭೆ ಆ ಪಾಂಡುಕವನವನ್ನು ಸುತ್ತುವರಿಯಿತು ಪಾಂಡುಕಶಿಲಾತಲದ ಸಿಂಹಪೀಠದಲ್ಲಿ ಶಿಶುವನ್ನು ಕೂಡ್ರಿಸಿ ದೇವತೆಗಳು ಜಯಜಯಕಾರ ಮಾಡಿದರು. ಹಾಲುಸಮುದ್ರದಿಂದ ದೇವತೆಗಳು ಕುಂಭಗಳನ್ನು ತುಂಬಿತಂದು ಜಿನಶಿಶುವಿನ ಅಭಿಷೇಕ ಮಾಡಿದರು. ಎಲ್ಲಿ ನೋಡಿದಲ್ಲಿ ಹಾಲುತುಂಬಿ ಹರಿಯತೊಡಗಿತು. ಪರ್ವತಗಳ ದರಿಕಂದರಗಳೆಲ್ಲ ತುಂಬಿ ಅಲ್ಲಲ್ಲಿ ಬರಿ ಶಿಖರಗಳಷ್ಟೇ ಕಾಣತೊಡಗಿದವು. ದೇವತೆಗಳ ವಿಮಾನಗಳೆಲ್ಲ ಗುಳ್ಳೆಗಳಂತೆ ತೇಲತೊಡಗಿದವು. ದೇವತೆಗಳ ಸ್ತ್ರೀಪುರುಷ

ರೆಲ್ಲರೂ ಜಿನಗಂಧೋದಕವನ್ನು ತಲೆಯ ಮೇಲೆ ಸಿಂಪಡಿಸಿಕೊಂಡು ರೋಮಾಂಚನಗೊಂಡು ಧನ್ಯರಾದರು.

ಶಚಿಪರಮನ ತನುಜಲಕಣ|
ನಿಚಯಮನಾತ್ಮೀಯ ಪಾಣಿಪಲ್ಲವ ಧೃತದಿಂ||
ಶುಚಿತಮ ಮೃದುತಮ ದೇವಾಂ!
ಗಚೇಳಕದಿಂ ತೊಡೆದು ತುಡಿಸಿದಳ್ ತುಡುಗೆಗಳಂ||

ಶಚಿದೇವಿಯು ಅಭಿಷೇಕಗೊಂಡ ಜಿನಶಿಶುವಿನ ಮೈಯನ್ನು ದೇವಾಂಗ ವಸ್ತ್ರಗಳಿಂದ ಚಿಗುರೆಲೆಗೈಗಳಿಂದ ಒರೆಯಿಸಿ ಬಟ್ಟೆಗಳನ್ನು ತೊಡಿಸಿದಳು. ರನ್ನದ ಚಿನ್ನದ ಆಭರಣಗಳನ್ನು ಇಡಿಸಿ, ಕಣ್ಣಿಗೆ ಕಾಡಿಗೆ ಹಚ್ಚಿ, ಹಣೆಯಲ್ಲಿ ತಿಲಕವಿಟ್ಟು ಕೂಸನ್ನು ಪೂಜಿಸಿದಳು. ಅಷ್ಟದ್ರವ್ಯಗಳಿಂದ ಇಂದ್ರನು ಜಿನಶಿಶುವಿನ ಪಾದಕಮಲಗಳನ್ನು ಪೂಜಿಸಿದನು. ಮೆರವಣಿಗೆ ಮತ್ತೆ ಕುಂಡಪುರಕ್ಕೆ ಮರಳಿ ಬಂದು ಅಲ್ಲಿ ರಚಿತವಾದ ಮಹಾಮಂಟಪದಲ್ಲಿ ಸಿಂಹಪೀಠದಲ್ಲಿ ಶಿಶುವನ್ನಿರಿಸಿದರು. ಮಾಯಶಿಶು ಮಾಯವಾಗಿ ನಿಜಶಿಶುವನ್ನು ಅಲ್ಲಿ ಕಂಡು ತಾಯಿತಂದೆಗಳು ಪರಮ ಹರ್ಷವನ್ನು ತಾಳಿದರು.

ಆ ಜಿನಪನ ಜನನುತ ಜನ|
ನೀ ಜನಕರನಿರಿಸಿ ರತ್ನಪೀಠದೊಳಿಂದ್ರಂ
ಪೂಜಿಸಿದಂ ದಿವ್ಯಾಂಬರ|
ರಾಜಿತ ಭೂಷಾನುಲೇಪ ಮಾಲ್ಯಾದಿಗಳಿಂ||

ಇಂದ್ರನು ಶಿಶುವಿನ ತಾಯಿತಂದೆಗಳನ್ನು ಸತ್ಕರಿಸಿ ಗೌರವಿಸಿದನು.

ಗುರುವಾದಂ ಭುವನತ್ರಯಕ್ಕೆ ಮಿಗೆ ಪೆಂಪಂ ತಾಳ್ದಿದ ಈ ದೇವಂ.ಈ ಗುರುವಿಂಗಂ ಗುರುವಾದಿರಿ. ಇಂತು ಪರಮಾಗಣ್ಯಕ್ಕೆ ಪುಣ್ಯಕ್ಕೆ ನೋಂತರ್ ಆದಾರ್ ಈ ಭುವನಾಂತರಾಳದೊಳ್ ನಿಮ್ಮಂತೆ?-ಎಂದು ಜಿನನ ತಾಯಿತಂದೆಗಳನ್ನು ದೇವೇಂದ್ರನು ಆನಂದದಿಂದ ಹೊಗಳಿದನು. ಆಮೇಲೆ ವಿವಿಧ ವಿನೋದಾವಳಿಗಳು ನಡೆದವು. ಗೀತ ನೃತ್ಯಾದಿಗಳು ಕಣ್ಮನ ಸೆಳೆದವು. ಸ್ವತಃ ದೇವೇಂದ್ರನೆ 'ಸಮವಕಾರ' ರೂಪಕವನ್ನು ಆನಂದದಿಂದ ಆಡಿತೋರಿಸಿದನು.

ಸಕಳ ಜನ ನಯನ ಹೃದಯ|
ಪ್ರಕರಮನೋರಂತೆ ತಣಿಪಿದಂ ಜಿನಸಭೆಯೊಳ್||
ಸುಕೃತನಿದಾನಂ ಸಂಗೀ|
ತಕ ವಿಕಸದದಿಂದಮಿಂದ್ರನುದಿತಾನಂದಂ||

ಇಂದ್ರನು ಎಲ್ಲರ ಮನಸ್ಸಿಗೆ ಆನಂದವನ್ನು ಉಂಟುಮಾಡಿ ತೃಪ್ತಿಪಡಿಸಿದನು. ಪುರುಪರಮೇಶ್ವರನು ಕೇವಲಜ್ಞಾನದಿಂದ ತಿಳಿದುಕೊಂಡು ಬರಲಿರುವ ತೀರ್ಥಂಕರ ನಾಮಾವಳಿಯನ್ನು ಹಿಂದೆ ಭರತಚಕ್ರಿಗೆ ಹೇಳಿದ್ದುದನ್ನು ಜ್ಞಾಪಿಸಿಕೊಂಡು, ದೇವೇಂದ್ರನು ಆ ಹೆಸರುಗಳನ್ನು ಕ್ರಮವಾಗಿ ಹೇಳುತ್ತ ಅವುಗಳಲ್ಲಿ ಕೊನೆಯದಾದ 'ವೀರ' ಎಂಬ ಹೆಸರು ಮಾತ್ರ ಇನ್ನೂ

ಯಾರಿಗೂ ಇಡಲ್ಪಡದೆ ಹಿಂದೆ ಉಳಿದಿದೆ; ಅದನ್ನು ಈ ಜಿನ ಶಿಶುವಿಗೆ ಇಡಬೇಕು. ಎಂದನು. ಸಿದ್ಧಾರ್ಥನಿಗೆ ನಿವೇದಿಸಿ, ಸಕಲ ಸಭೆಗೆ ವರ್ಣಿಸಿ ಹೇಳಿ ವೀರನೆಂಬ ಮಂಗಲನಾಮಕರಣ ವನ್ನು ಇಂದ್ರನು ಮಾಡಿದನು. ಆ ಜಿನಶಿಶುವಿಗೆ 'ಮಜ್ಜನ ಮಂಡನಾದಿ ಬಾಳೋಚಿತೋಪಚಾರವ್ಯಾಪಾರಮಂ ಅನಾರತಂ ಅತೀವಯತ್ನದಿಂ ವಿಧಿಯಿಸಲೆಂದು' ವನಿತೆಯರಿಗೆ ಒಪ್ಪಿಸಿ ಜನ್ಮಾಭಿಷೇಕವೆಂಬ ದ್ವಿತಿಯ ಕಲ್ಯಾಣ ಮಹೋತ್ಸವವನ್ನು ನೆರವೇರಿಸಿ ಸೌಧರ್ಮೇಂದ್ರನು ತನ್ನ ಸಕಲ ಪರಿವಾರದೊಂದಿಗೆ ನಿಜನಿವಾಸಕ್ಕೆ ತೆರಳಿದನು.

೬. ವರ್ಧಮಾನನ ಬಾಲ್ಯ ಮತ್ತು ತಾರುಣ್ಯ

ಸಿದ್ಧಾರ್ಥ ಮಹಾರಾಜನು ಸಿರಿಳೋದ್ಧವ ವರ್ಧನಕಾರ ವಾದ ತನ್ನ ಮಗನಿಗೆ 'ವರ್ಧಮಾನ'ನೆಂದು ಎರಡನೆಯ ಹೆಸ ರಿಟ್ಟನು. ಸಕಲ ಚೈತ್ಯಾಲಯಗಳಲ್ಲಿ ಪೂಜೆಪುರಸ್ಕಾರಾದಿ ಗಳನ್ನು ನಡೆಯಿಸಿ ಗುರುಹಿರಿಯರ ಬಂಧುಬಳಗದವರ ಸಮ ಕ್ಷಮದಲ್ಲಿ ನಾಮಕರಣ ಮಹೋತ್ಸವವನ್ನು ನೆರವೇರಿಸಿದನು. ಇಂದ್ರನು 'ವೀರ'ನೆಂದು ಮೊದಲನೆಯ ಹೆಸರನ್ನು ಆಗಲೇ ಇಟ್ಟು ಹೋಗಿದ್ದನು.

ಪೂರ್ವಜನ್ಮಗಳ ಪುಣ್ಯವಿಶೇಷಗಳಿಂದ ತೀರ್ಥಂಕರ ಶಿಶು ವಿಗೆ ಹುಟ್ಟನೊಂದಿಗೇ ಮತಿ-ಶ್ರುತ-ಅವಧಿಜ್ಞಾನಗಳು ಬಂದಿ

ರುವುದುಂಟು. ವರ್ಧಮಾನನಿಗೆ ಆ ಜ್ಞಾನಗಳು ಇದ್ದುದರಿಂದ ಗುರುಗಳಿಲ್ಲದೆಯೇ ಅಕ್ಷರಾದಿ ಸಕಲ ವಿದ್ಯೆಗಳು ಬಂದು ಒದಗಿದ್ದವು. ಸಂಜಯ-ವಿಜಯರೆಂಬ ಚಾರಣಮುನಿಗಳು ಶಾಸ್ತ್ರಾಧ್ಯಯನದ ಒಂದು ಸಂದರ್ಭವು ಸರಿಯಾಗಿ ತಿಳಿಯದೆ ತೊಳಲಾಡುತ್ತಿದ್ದರು. ಅವರು ಮನಸ್ಸಿನ ಅತೃಪ್ತಿಯಿಂದ ಸಂಚರಿಸುತ್ತ ಭೂಮಿಯ ಮೇಲೆ ಒಂದಾಗ ಉದ್ಯಾನದಲ್ಲಿ ಒಂದು ಸುಂದರ ಶಿಶುವನ್ನು ಕಂಡರು. ಕೂಸಿನ ತೇಜಸ್ಸಿಗೆ ಆಕರ್ಷಿತರಾಗಿ ಅದರ ಬಳಿಗೆ ಬಂದು ತವಕಗೊಳ್ಳದೆಯೆ ಅದನ್ನು ಸುತ್ತುವರಿದು ನೋಡಿದರು. ಅಷ್ಟರಲ್ಲಿ ಅವರಿಗೆ ಆ ಮೊದಲು ಅರ್ಥವಾಗದ ಶಾಸ್ತ್ರದ ಸಂದರ್ಭ ಸರಿಯಾಗಿ ಅರ್ಥವಾಗಿ ತಿಳಿಯತೊಡಗಿತು. ಅದು ಕೂಸಿನ ಮಹಿಮೆಯಿಂದಲೇ ಆದುದೆಂದು ಖಚಿತವಾಯಿತು. ಆ ಕೂಸು ಮತ್ತಾವುದೂ ಆಗಿರದೆ 'ವರ್ಧಮಾನ'ನೇ ಆಗಿದ್ದುದನ್ನು ತಿಳಿದು,

ಬಲವರೆ ತತ್ಸನ್ನಿಧಿಯೊಳ್|
ತೊಲಗಿದುದು ಪದಾರ್ಥ ಸಂಶಯಂ ಪರಿದದ ಕ||
ಟ್ಟಲೆ ದಿನಕರಸನ್ನಿಧಿಯೊಳ್|
ತೊಲಗುವವೋಲದೇಂ ಸದರ್ಥನೋ ತೀರ್ಥಕರಂ||

ಎಂದು ಹಾಡಿ ಹೊಗಳಿದರು. ಸನ್ಮತಿ ಸಮುತ್ಪತ್ತಿಗೆ ನಿಮಿತ್ತನಾದುದರಿಂದ ಆ ಚಿನ್ಮಯ ಸನ್ಮೂರ್ತಿಗೆ 'ಸನ್ಮತಿ' ಎಂಬ ಮೂರನೆಯ ಹೆಸರನ್ನು ಇಟ್ಟು, ಚಾರಣರು ಹರುಷದಿಂದ ಹೊರಟು ಹೋದರು.

ಒಮ್ಮೆ, ಇಂದ್ರನು ತನ್ನ ಒಡ್ಡೋಲಗದಲ್ಲಿ ದೇವತೆಗಳೊಂದಿಗೆ ಮಾತನಾಡುತ್ತ, ಭೂಲೋಕದ ಸಂದರ್ಭ ತೆಗೆದು, 'ವೀರಜಿನಕುಮಾರಕನಂತೆ ಆರ್ ಧರೆಯೊಳ್ ನಿರ್ಭಯರ್?' ಎಂದು ಹೊಗಳಿದನು. ಸಂಗಮಕನೆಂಬ ದೇವನು ಆ ಮಾತಿಗೆ ಎದುರಾಡಿ, 'ಭಯರಾಹಿತ್ಯಂ ಸಂಗಳಿಕುಮೆ ಬಾಳಕಗೆ? ಇದು ಅಸಂಗತಂ! ಆದೊಡೆ, ಇದಂ ಪರೀಕ್ಷಿಸಲಕ್ಕುಂ!' ಎಂದು ಹೇಳಿ ಬಾಲಕನ ಧೈರ್ಯಪರೀಕ್ಷೆ ಮಾಡುವದಕ್ಕಾಗಿ ಭೂಮಿಗಿಳಿದು ಬಂದನು.

ಕುಂಡಪುರದ ಉದ್ಯಾನವೊಂದರಲ್ಲಿ ಓರಗೆಯ ಹುಡುಗರ ಜೊತೆಗೆ ಸನ್ಮತಿಯು ಮರಗೊಂಬಿನಾಟ (ಗಿಡಮಂಗನಾಟ)ವನ್ನು ಆಡುತ್ತಿದ್ದನು. ಆ ಹುಡುಗರನ್ನು ಹೆದರಿಸಲು ಸಂಗಮಕನು ಭಯಂಕರ ಸರ್ಪವೇಷ ತಾಳಿದನು. ಆ ಹೆಡೆತೆಗೆದು ಘೂತ್ಕರಿಸುವ ಹಾವನ್ನು ಕಂಡು ಹುಡುಗರೆಲ್ಲ ಗಾಬರಿಯಾದರು. 'ಬಂದುದು ಪಿಡಿತ್ತು! ಬಾರಿಸುವರಾರಿದನಕ್ಕಟಾ ಕೆಟ್ಟೆವು!' ಎಂದು ಕೂಗುತ್ತ ಅಳುತ್ತ ಟೊಂಗೆ ಟೊಂಗೆಗಳಿಂದಲೆ ನೆಲಕ್ಕೆ ಹಾರಿ ಹುಡುಗರೆಲ್ಲರೂ ಹೌಹಾರಿ ಓಡಿ ಹೋದರು. 'ಆ ಮಂದರ ಧೈರ್ಯಂ ಬರ್ಗನೆ ಕುಜಾಗ್ರದೊಳ್ ಇರ್ದಂ ಆಕಂಪನಂ ಜಿನಂ!'

'ಧೀರೋದಾತ್ತಂ ಉತ್ತುಂಗ ನಿಶ್ರೇಣಿಯಂ ಮೆಟ್ಟಿ ಮಹಾಹರ್ಮ್ಯಶಿಖರದಿಂ ಇಳಾತಳಕ್ಕೆ ಬರ್ಪಂತೆ' ಆ ಸನ್ಮತಿ ಬಾಲಕನು ಸರ್ಪರಾಜನ ಹೆಡೆಯ ಮೇಲೆ ಕೆಂಪುಮಾಣಿಕ್ಯದ ಕಿರಣ

ಸೂಸುವ ಮೃದುಪಾದಗಳನ್ನು ಇಕ್ಕುತ್ತ, ಮೆಟ್ಟಿಲುಗಳನ್ನು ಇಳಿಯುವಂತೆ ಇಳಿಯುತ್ತ ಕೆಳಗೆ ಬಂದನು.

ಸಂಗಮದೇವನು ಬಾಲಕನ ಧೈರ್ಯಕ್ಕೆ ಬೆರಗಾಗಿ, ತನ್ನ ನಿಜರೂಪವನ್ನು ಧರಿಸಿ, ಜಿನಬಾಲಕನ ಪಾದಗಳನ್ನು ಪೂಜಿಸಿ, 'ವಸುಧಾವಳಯದೊಳ್ ಇಂತಪ್ಪ ವೀರರಾರ್?' ಎಂದು ಹೊಗಳಿ, ಸಿದ್ಧಾರ್ಥ ಮಹಾರಾಜನ ಪುತ್ರ ಸಕಲ ಪ್ರಜೆಗಳ ಸಮ್ಮುಖದಲ್ಲಿ ಸನ್ಮತಿಗೆ 'ಮಹಾವೀರ'ನೆಂದು ನಾಲ್ಕ ನೆಯ ಹೆಸರನ್ನಿಟ್ಟು ನಮಸ್ಕರಿಸಿ ಹೊರಟು ಹೋದನು.

ಅಂದಿನಿಂದ ಜಿನಬಾಲಕನಿಗೆ ವೀರ, ವರ್ಧಮಾನ, ಸನ್ಮತಿ ಮತ್ತು ಮಹಾವೀರ ಎಂದ ನಾಲ್ಕು ಹೆಸರುಗಳು ರೂಢಿಗೆ ಬಂದವು. ಸಕಲಜನಹಿತಕಾರಿಯಾದ ಆ ಜಿನೇಶ್ವರ ನನ್ನು ವಸುಧೆಯ ಸಮಸ್ತಜನ ಸೇರಿ 'ವಸುಧೈಕ ಬಾಂಧವ' ನೆಂದು ಕೊಂಡಾಡಿತು.

ಮರಿಹಂಸದ ಮಂದಗತಿಯನ್ನೂ ಮರಿಯಾನೆಯ ಮಂದ ಗತಿಯನ್ನೂ ಜಿನಬಾಲಕನ ಮಂದಗತಿಯೊಂದಿಗೆ ಹೋಲಿಸಲು ಬಂದೀತೇ? ಮೂರು ಲೋಕದ ಶಿಖರಸ್ಥಳವಾದ ಸಿದ್ಧಶಿಲೆಗೆ ಹೊರಟ ಅವನ ಗತಿಯನ್ನು 'ವಿಳಸಿತಗಮನ'ವೆನ್ನದೆ 'ಮಂದ ಗಮನ'ವೆಂದರೆ ಹೇಗೆ ಸರಿಯಾದೀತು?

ನಗೆ, ತನಗೆ ಮುಂದೆ ಮೋಹಾರಿ ಗರ್ವಮಂ ಮುಱಿದ ಕಾಲದೊಳ್ ಪರಮನ ಪೊರ್ದುಗೆ ಘಟಿಯಿಸದು; ಈಗಳೆ ಲೀಲೆಗೆ ಸಂದಪೆಂ; ಎಂಬ ತೆರವೆ ಮೆಱೆದುದು ಜಿನನೊಳ್!

ಮಹಾವೀರನಿಗೆ ಬಾಲ್ಯವು ಕಳೆದು ಯೌವನ ಪ್ರಾಪ್ತವಾಯಿತು. ಹೂವಿನಂತೆ ಮುಗುಳು ನಗೆ; ಚಿಗುರೆಲೆಯಂತೆ ತುಟಿ; ಹೊಳೆಯುವ ಬಳ್ಳಿಯಂತೆ ಹುಬ್ಬು: ಉದ್ದ ಟೊಂಗೆಯಂತೆ ಇಳಿಬಿದ್ದ ತೋಳು, ಜಗವನ್ನೇ ಕಾಲಿಗೆರಗಿಸಿಕೊಳ್ಳುವ ಪಾದಕಮಲ! ತಾರುಣ್ಯ ಅವನ ಅಂಗಾಂಗಗಳಲ್ಲಿ ತುಂಬಿ ನಿಂತು ಸಾಫಲ್ಯ ಹೊಂದಿತು.

ಮದಂ ಅದಿರ್ದುದು; ಕೋಪಂ ಕೊಗ್ಗಿದುದು; ಅಳಿಪು ಒಳಸೋರ್ದುದು; ಅನ್ನೆಯಂ ಬನ್ನಂಬಟ್ಟುದು; ಮಾಯೆ ಮಾಯಮಾಯ್ತು, ಏನುದಾರಗುಣಗಣಗರಿಷ್ಠನೋ ವೀರ ಜಿನಂ!

ಸುರಲೋಕವನ್ನು ಮೀರಿದ ಭೋಗಭಾಗ್ಯಗಳಿದ್ದರೂ ಸನ್ಮತಿ ಅವಕ್ಕೆ ಸೋಲಲಿಲ್ಲ. 'ಅಂಬರಕೆ ಪರಿಕಿಪಂದು ಪಂಕ ಪ್ರಲೇಪಂ?'

೭ ಮಹಾವೀರನ ಪರಿನಿಷ್ಕ್ರಮಣ ಕಲ್ಯಾಣ

ನಾಥವಂಶಲಲಾಮನಾದ ಮಹಾವೀರನಿಗೆ ೩೦ ವರ್ಷ ಕುಮಾರ ಕಾಲ ಕಳೆಯಿತು. ಒಂದು ದಿನ ಅರಮನೆಯ ಅಂಗಳದಲ್ಲಿ ಅವನು ಚಿಂತೆ ಮಾಡುತ್ತ ಕುಳಿತನು. ಪರಿನಿಷ್ಕ್ರಮಣ ಕಲ್ಯಾಣವೆಂಬ ಲಕ್ಷ್ಮಿ ಕಳಿಸಿದ ಸೇವಕಿಯಂತೆ ವೈರಾಗ್ಯ ಬಂದು ಅವನ ಮನವನ್ನು ಆವರಿಸಿತ್ತು. ಪ್ರಾಣವೆಂಬ ಸತಿ ತೊಟ್ಟುಕೊಂಡು ಕಳೆದು ಒಗೆದ ದೇಹಗಳ ಸಂಖ್ಯೆ ಮತ್ತು ಹೆಸರುಗಳನ್ನು ಎಣಿಸುವುದು ಸಾಧ್ಯವೆ? ಎಂದುಕೊಂಡನು.

ಸ-ರಣಂ ಸ-ಮರಣಂ ಈ ಸಂಸರಣಂ! ಸುಖ ಇದರೊಳ್ ಆವುದು ಇರ್ದಪುದು? ಅದರಿಂದ ಅ-ರಣಂ ಅ-ಮರಣಂ ಎನಿಪ್ಪಾ ಪರಮಪದಂ ಬೊಕ್ಕು ಸುಖದಿಂ ಇರ್ಪನೆ ಚದುರಂ! ಅಂದರೆ-ಈ ಸಂಸಾರವು ಹೋರಾಟದಿಂದ ಕೂಡಿದ್ದೂ, ಸಾವು ಉಳ್ಳದ್ದೂ ಆಗಿದೆ; ಇದರಲ್ಲಿ ಯಾವ ಸುಖವಿದೆ? ಆದ್ದರಿಂದ ಹೋರಾಟವಿಲ್ಲದ ಪರಮಪದವಿಯನ್ನು ಪಡೆದು ಸುಖದಿಂದ ಇರುವುದೇ ಜಾಣತನ; ಅಲ್ಲವೆ? ಎಂದು ಚಿಂತಿಸಿದನು.

'ಸ-ವಿಷಂ ಇದು, ಎಂಬುದನರಿಯದೆ 'ಸವಿ-ಸವಿ' ಎಂದು ಅನುಭವಿಪ್ಪ ಜೀವನಕ್ಕೆ ಇಂತೀ ಭವಸುಖಂ ಅಸುಖವೆ!'

ಬಲವಾದ ಪಾಪಸಂಗ್ರಹವು ಎಲ್ಲವನ್ನೂ ನುಂಗಿಬಿಡುವುದಲ್ಲವೇ?

'ಕಿಡುವ ಒಡಲ್-ಒಡವೆಂಗಳೆರಡರೊಳ್ ಎಡೆಯುಡುಗವೆ ತೊಡರ್ದುರ್ ತೋರ್ಪ ಅಹಂ ಮಮಭಾವಂ ಕೆಡಸದೆ ಬಿಡುಗುವೆ ಸಂಸೃತಿ ಜಡಧಿಯ ಕಡಿದಪ್ಪ ಸುಳಿಯ ಕುಳಿಯೊಳ್ ಖಳನಂ?'

ಹೀಗೆ ಶರೀರ ಮತ್ತು ಸಂಪತ್ತುಗಳು ನಶ್ವರವೆಂದೂ, ಶಾಶ್ವತ ಸುಖದ ದಾರಿಯನ್ನು ಹಿಡಿಯಬೇಕೆಂದೂ, ಮಹಾವೀರನು ವಿಚಾರಿಸುತ್ತ ಕುಳಿತ ಆ ಸಮಯದಲ್ಲಿ ಪುಣ್ಯಸಿಧಿಗಳಾದ ಲೋಕಾಂತಿಕ ದೇವರು ಮಹಾವೀರನಲ್ಲಿ ವೈರಾಗ್ಯ ವಿಕಾಸವಾದುದನ್ನು ಅವಧಿಜ್ಞಾನದಿಂದ ತಿಳಿದುಕೊಂಡು, ಸ್ವರ್ಗಲೋಕದಿಂದ ಭೂಮಿಗಿಳಿದು ಬಂದು, ನಮೇರು-ಮಂದಾರ-ಪಾರಿಜಾತ ಹೂಗಳ ಮಳೆಯನ್ನು ತಂದು ವೀರ ಜಿನೇಂದ್ರನ ಪಾದಕಮಲಗಳಲ್ಲಿ ಸುರಿದರು.

"ದೇವ, ದಯಾರಸ ತುಂಬಿತುಳುಕುವ ನಿನ್ನ ಮನಸ್ಸಿನಲ್ಲಿ ವೈರಾಗ್ಯವೆಂಬ ಕಮಲವರಳಿ ಭವ್ಯಜನಭೃಂಗಾಳಿ ಸಾರಿ ಬರಲು ಸಮಯ ಒದಗಿದೆ. ಅದು ಶುದ್ಧ ಭಾವದ ಸುಗಂಧ ಬೀರುವ ಸದ್ಗುಣದ ಪರಬೋಧಪರಾಗದಿಂದ ರಂಜಿಸುತ್ತಿದೆ. ಪರಮಶ್ರೀಪಾರ್ಶ್ವನಾಥಸ್ವಾಮಿಯ ಕಾಲ ಕಳೆದು ಬಹಳದಿನಗಳಾದ್ದರಿಂದ ಸದ್ಧರ್ಮತೀರ್ಥ ಅವ್ಯವಸ್ಥಿತವಾಗಿದೆ. ನೀನು ಅದನ್ನು ಸರಿಗೊಳಿಸಿ ಭಕ್ತಜನವನ್ನು ಮುಕ್ತಿಗೇರಿಸಿ, ಆ ಮೇಲೆ

ನೀನೂ ಅಮೃತ ಪ್ರಾಜ್ಯ ಸಾಮ್ರಾಜ್ಯದ ಒಳ್ಪನ್ನು ಹೊಂದು. 'ಜಳಧಿಗೆ ಜಳಧಿಯ ಜಳಮುಂ ತಳೆದಂಜುಳಿಯಿಂದಂ ಅರ್ಘ್ಯಂ ಈವಂತೆ' ವಿಮಲ ಸಮುದ್ರದಂತಿರುವ ಜ್ಞಾನಿಯಾದ ನಿನಗೆ ನಾವು ಜ್ಞಾಪಿಸುವುದು ಬರಿಯ ನಿಮಿತ್ತ ಮಾತ್ರವಾದುದು, ತೀರ ಸಾಮಾನ್ಯವಾದುದು. ನಿನ್ನ ಶ್ರೇಷ್ಠವಾದ ಸುಂದರವಾದ ಪರಿನಿಷ್ಕ್ರಮಣ ಪ್ರಭಾವವನ್ನು ನೋಡಿ ನಾವೂ ಕೃತಾರ್ಥರಾಗೋಣವೆಂದು ಬಂದೆವೇ ಹೊರತು ನಮಗಿಲ್ಲಿ ಬೇರೇನು ಕೆಲಸವಿತ್ತು? ನೀನೇ ಹೇಳು." ಎಂದು ಸನ್ಮತಿಸ್ವಾಮಿಗೆ ಕೈಮುಗಿದು ಆ ದೇವತೆಗಳು ಬೇಡಿಕೊಂಡರು.

ಸಾರಸ್ವತ, ಆದಿತ್ಯ, ವಹ್ನಿ, ಅರುಣ, ಗರ್ದ್ಧತೋಯ, ಕುಷಿತ, ಅವ್ಯಾಬಾಧ, ಅರಿಷ್ಟ-ಎಂಬ ಎಂಟುಮಂದಿ ಲೋಕಾಂತಿಕ ದೇವರು ಆ ಮಹೋದಾರನಾದ ಮಹಾವೀರನಿಗೆ ಶುಂಭದ್ಗಂಭೀರ-ಉಚಿತ ವಾಚಾವಿತತಿಯಿಂದ ಪ್ರತಿಬೋಧಿಸಿ ಹರ್ಷದಿಂದ ಬೀಳ್ಕೊಂಡರು.

ಇತ್ತ ತಾಯಿ ತಂದೆಗಳ ಮತ್ತು ಬಂಧುಬಳಗದವರ ಮೋಹಲತೆಯ ತೊಡಕನ್ನು ತ್ರಿಜಗತ್ಪತಿಯಾದ ಸನ್ಮತಿಸ್ವಾಮಿ ತನ್ನ ಚದುರಮಾತುಗಳೆಂಬ ಕೈಗಳಿಂದ ಬಿಡಿಸಿಕೊಂಡನು. ಗುರುಗುಣನು ಗುರುಹಿರಿಯರನ್ನು ಒಡಂಬಡಿಸಿ ತಪಸ್ಸಿಗೆ ತೆರಳಲು ಸಿದ್ಧನಾದನು. ಅವಧಿಬೋಧೆಯಿಂದ ಇಂದ್ರನು ತಿಳಿದು ಇಳೆಗೆ ಬಂದು ಅರಮನೆ ಹೊಕ್ಕು, ಚಂದನ-ಅಕ್ಷತ-ಪಾರಿ

ಜಾತ ಸತ್ಫಲಾದಿಗಳಿಂದ ವೀರನ ಪಾದಕಮಲಗಳನ್ನು ಪೂಜಿಸಿ ಸಂತೋಷತಾಳಿದನು.

ಜಿನಜನ್ಮಾಭಿಷೇಕ ಸಂದರ್ಭದಂತೆ ಸಕಲತೀರ್ಥಗಳನ್ನು ನಿರ್ಮಲವಾದ ಚಿನ್ನದ ಕಲಶಗಳಿಂದ ತುಂಬಿ ತರಿಸಿ ವೀರ ತೀರ್ಥಂಕರನ ಮೇಲೆ ಎರೆದು ಮಂಗಳಮಜ್ಜನ ಮಾಡಿಸಿದನು. ಆ ಮೇಲೆ ದೇವಶಿಲ್ಪಿ ರಚಿಸಿದ ರತ್ನಖಚಿತ ಪಲ್ಲಕ್ಕಿಯನ್ನು ತಂದು ಅವನ ಮುಂದೆ ಇರಿಸಿದನು. ಭುವನತ್ರಯವೆಂಬ ಮಹಾ ಮಂದಿರದ ಪ್ರಥಮ ಸೋಪಾನಪಂಕ್ತಿಯನ್ನು ಮೆಟ್ಟುವಂತೆ ಸನ್ಮತಿಸ್ವಾಮಿ ಇಂದ್ರನ ಕೈಯಾಸರೆಯೊಂದಿಗೆ ಪಲ್ಲಕ್ಕಿಯನ್ನು ಮೆಟ್ಟಿ ಏರಿದನು. ದೇವದುಂದುಭಿ ದಿಗಂತವನ್ನೂ ಅಂಬರವನ್ನೂ ತುಂಬಿತುಳುಕುವಂತೆ ನಿನದಿಸಿತು. ಸರ್ವಾಲಂಕಾರ ಭೂಷಿತನಾದ ಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಭೂಪೇಂದ್ರರು ಏಳು ಹೆಜ್ಜೆಗಳವರೆಗೆ ಪಲ್ಲಕ್ಕಿಯಲ್ಲಿ ಹೊತ್ತು ನಡೆದರು. ಅಲ್ಲಿಂದ ಮುಂದೆ ಏಳು ಹೆಜ್ಜೆಗಳವರೆಗೆ ಬಲಾಢ್ಯರಾದ ಖೇಚರೇಂದ್ರರು ಅದನ್ನು ಹೊತ್ತುಕೊಂಡರು. ಆ ಮೇಲೆ ಸುರಾಸುರ ಸಮೂಹವು ಬಂದು ಹೊತ್ತುಕೊಂಡಿತು. ಅಲ್ಲಿಂದಾಚೆಗೆ ದೇವೇಂದ್ರರು ಸಂತಸದಿಂದ ಪಲ್ಲಕ್ಕಿಯನ್ನು ಹೊತ್ತುಕೊಂಡು 'ನಾಥಷಂಡ' ಎಂಬ ಉದ್ಯಾನದ ವರೆಗೆ ಬಂದು ಕೆಳಗಿಳಿಸಿದರು. ಮಹಾವೀರನು ಶಿಬಿಕೆಯಿಂದಿಳಿದು ಉದ್ಯಾನದ ಶಿಲಾತಳಕ್ಕೆ ಬಿಜಯಂಗೆಯ್ದನು.

ಪಿಡಿದ ಜವನಿಕೆಯ ಮರೆಯೊಳ್ |
ತೊಡವುಮನುಡುಗೆಯುಮನಂಗದಿಂ ಪಿಂಗಿಸಿ ಮುಂ||

ಬಡಗನೊಗದಿಂದೆ ಮೂಜಗ|
ದೊಡೆಯಂ ಕುಳ್ಳಿರ್ದನೆಸೆಯೆ ಸಂಸ್ಥಾನದೊಳಂ||

ದಿಗಂಬರನಾಗಿ ವೀರನು ಮಾರ್ಗಶೀರ್ಷ ಕೃಷ್ಣಪಕ್ಷದ ದಶಮಿಯ ದಿನ 'ಸಿದ್ಧಂ ನಮಃ' ಎಂದು ಕೇಶಲೋಚನ ಮಾಡಿಕೊಂಡನು. ಮಂಗಳನಾದ ಮೊಳಗಿತು. ಪರಿನಿಷ್ಕ್ರಮಣ ಕಲ್ಯಾಣಗೈದು ಇಂದ್ರನು ಬೀಳ್ಕೊಂಡನು.

೮. ಸನ್ಮತಿಗೆ ಕೂಲಭೂಪಾಲನಿಂದ ಆಹಾರ ದಾನ

ಇತ್ತ ಕಡೆಗೆ ತಪದಲ್ಲಿ ತೊಡಗಿದ ಸನ್ಮತಿ ಸ್ವಾಮಿಗೆ ಮನಃಪರ್ಯಾಯ ಜ್ಞಾನ ಉಂಟಾಯಿತು:

ಆರ್ಯನುತಂಗಾಯ್ತು ಮನಃ |
ಪರ್ಯಯ ಬೋಧಂ ವಿಶುದ್ಧ ಸಪ್ತರ್ಧಿಗುಣಾ||
ಶ್ಚರ್ಯಂ ಜನಿಯಿಸಿತೆಸೆದುದು|
ಧೈರ್ಯಂ ಸಮನಿಸಿತು ಸಕಲ ಸಂಯಮಸಾರಂ||

ಮತಿ, ಶ್ರುತಿ, ಅವಧಿ, ಮನಃಪರ್ಯಾಯ, ಕೇವಲ– ಈ ಐದು ಜ್ಞಾನಗಳಲ್ಲಿ ಮಹಾವೀರನಿಗೆ ಮೊದಲಿನ ಮೂರು ಜ್ಞಾನಗಳು ಹುಟ್ಟಾ ಇದ್ದವು. ಈಗ ಕಠೋರವಾದ ತಪಸ್ಸಿನಿಂದ ೪ನೆಯದಾದ ಮನಃಪರ್ಯಾಯ ಜ್ಞಾನ ಉಂಟಾಯಿತು. ಸಪ್ತರ್ಧಿಗಳಾಶ್ಚರ್ಯ, ಧೈರ್ಯ, ಸಂಯಮಗಳು ಉಂಟಾದವು.

ದೀಕ್ಷೆ ತೆಗೆದುಕೊಂಡಾಗಿನಿಂದ ಸನ್ಮತಿಯು ಆರು ದಿನಕ್ಕೊಮ್ಮೆ ಆಹಾರ ಸ್ವೀಕಾರ ಮಾಡುವ ಷಷ್ಠೋಪವಾಸವ್ರತದ ಪ್ರತಿಜ್ಞೆ ಹೊತ್ತಿದ್ದನು. ಪರಮ ಐಶ್ವರ್ಯದಾನಸಮರ್ಥನೂ, ದಾನತೀರ್ಥಪ್ರವರ್ತನಾರ್ಥನೂ ಆಗಿ, ಮುನಿಭೋಜನ ಸಮುಚಿತ ವೇಳೆಯಲ್ಲಿ ಸಜ್ಜನ ನಿವಾಸಕ್ಕೆ ಅನುಕೂಲವಾದ ಕೂಲಪುರವನ್ನು ಹೊಕ್ಕ ಆ ಸನ್ಮತಿ ಸ್ವಾಮಿಯು ಚಲಿಸದ ತೋಳುಗಳುಳ್ಳವನಾಗಿ, ಮೆಲ್ಲನೆ ನಡೆಯುತ್ತ, ಸಕಲಾವಯವಗಳಲ್ಲಿ ವಿಕಾರರಹಿತನಾದವನಾಗಿ, ಪಾತ್ರ ಯಾರೆಂಬುದನ್ನು ಗಮನಿಸದೆ ನಿಶ್ಚಿತ ದಿಕ್ಕಿಗೆ ಹೋಗಬೇಕೆನ್ನದವನಾಗಿ, ಜೀವಹಿಂಸೆ ಮಾಡದೆ, ದಿಗಂಬರನಾಗಿ, ದೇಹ ಪೋಷಣೆಯನ್ನು ಅಲಕ್ಷಿಸಿದವನಾಗಿ ಜೇಷ್ಟೆ-ನಿಂದೆಗಳನ್ನು ಕೇಳದವನಾಗಿ, ಅದೀನವದನಾರವಿಂದನಾಗಿ, ಮನೆಗಳೊಳಗೆ ನೋಡದವನಾಗಿ ರಾಜಮಾರ್ಗ ಹಿಡಿದು ಬರುತ್ತಿದ್ದನು. ಆಗ–

ಕೂಲಾಭಿಧಾನ ಧರಣೀ–|
ಪಾಲಂಗನುಕೂಲವೃತ್ತಿ ಪಡಿಯರನೋರ್ವಂ||

ಲೀಲೆಯೊಳೆ ಪರಿದು ಪೇಳ್ದಂ।
ಶೀಲಗುಣಾವನಿಯ ಬರವನಂದಾಸುರಪಂ॥

ಕೂಲದೇಶದ ರಾಜನಿಗೆ ಓಡಿ ಬಂದು ಒಬ್ಬ ಸೇವಕನು ಮುನಿಯ ಬರವನ್ನು ತಿಳಿಸಿದನು.

ಭೂತಳಪತಿ ಪಡೆದು ಶುಚೀ।
ಭೂತಂ ದ್ರವ್ಯಾರ್ಚನಾಸಮೇತಂ ಭವ್ಯ॥
ವ್ರಾತಪರೀತಂ ಪರಮ ವಿ।
ಭೂತಿಯಿನಂದಾ ತಪೋಧನಂಗಿದಿರ್ವಂದಂ॥

ಕೂಲ ದೇಶದ ರಾಜನು ಶುಚಿಭೂತನಾಗಿ ಪೂಜಾದ್ರವ್ಯಗಳೊಂದಿಗೆ ಭವ್ಯ ಸಮೂಹದಿಂದ ಕೂಡಿಕೊಂಡು ವೈಭವದಿಂದ ಮುನಿಯನ್ನು ಎದುರುಗೊಂಡನು.

ಬಂದು ಬಲವಂದು ಪೂಜಿಸಿ।
ಬಂದಿಸಿ ತತ್ಪದಪಯೋಜಮಂ ನಿಲ್ಲಿಂ ನಿ॥
ಮೆಂದೊಸೆದು ನಿಲಿಸಿದಂ ಶ್ರೀ।
ನಂದಿ ತಪೋನಿಧಿಯನಧಿಕವಾಣೀಕಾಂತಂ॥

ಆ ರಾಜನು ಮುನಿಮಹಾರಾಜನನ್ನು ಬಲಗೊಂಡು ಪಾದ ಪೂಜೆ ಮಾಡಿ ವಂದಿಸಿ ನಿಲ್ಲಿಸಿದನು.

ಸುರಭೂಜಂ ಚಿಂತಾಮಣಿ।
ಪರುಷದ ಕಣಿ ಕಾಮಧೇನು ನವನಿಧಿತತಿ ನಿ

ದ್ಧರಸಂ ತನಗಿದಿರ್ವಂದವೊಲ್|
ಒರಸಂ ಸ್ಮರಹರನ ಬರವಿನೊಳ್ ಕರಮೊಸೆದಂ

ಕಾಮಧೇನು–ಕಲ್ಪವೃಕ್ಷ–ಚಿಂತಾಮಣಿ– ಪರುಷಮಣಿ–ನವನಿಧಿತತಿ–ಸಿದ್ಧರಸ–ಗಳೇ ಮುನಿಯ ರೂಪದಿಂದ ಎದುರು ಬಂದವೋ ಏನೋ ಎನ್ನುವಂತೆ ಮುನಿಯು ಶೋಭಿಸಿದನು.

ವಿಜಯಂಗೆಯ್ಸಿದನುದ್ಧ|
ಧ್ವಜ ವಿಳಸತ್ಪೂರ್ಣ ಕಳಶವಂದನಮಾಲಾ||
ವ್ರಜಪರಿರಂಜಿತವೆನಿಸಿದ|
ನಿಜಧಾಮಕ್ಕಾ ಮಹಾನುಭಾವನ್ನೃತನಂ||

ರಾಜನು ತನ್ನ ಅರಮನೆಗೆ ಮುನಿಯನ್ನು ಕರೆದುಕೊಂಡು ಹೋದನು.

ಉಚಿತ ಆಸನದಲ್ಲಿ ಕುಳ್ಳಿರಿಸಿ ಪಾದಗಳನ್ನು ತೊಳೆದು ಮಂತ್ರಗಳನ್ನು ಉಚ್ಚರಿಸುತ್ತ ಜಲ–ಗಂಧ–ಅಕ್ಷತೆ–ಪುಷ್ಪ–ಚರು–ಧೂಪ–ದೀಪ–ಫಲಗಳೆಂಬ ಅಷ್ಟದ್ರವ್ಯಗಳಿಂದ ಸ್ವಾಮಿಯನ್ನು ಪೂಜಿಸಿದನು.

ಇಂದೀಮದೀಯ ಜನ್ಮಂ|
ಸಂದೆಯಮೇಂ ಸಫಳಮಾಯ್ತು ಜಗದಾರಾಧ್ಯಂ||
ಬಂದಂ ಮಂದಿರಕೆಂದಾ|
ನಂದದೊಳೊಂದಿದನುದಾತ್ತ ಕವಿಜನಮಿತ್ರಂ

ಆ ಕೂಲರಾಜನು ಮುನಿ ತನ್ನ ಅರಮನೆಗೆ ಬಂದನಲ್ಲಾ ಎಂದು ಬಹಳ ಆನಂದ ಹೊಂದಿದನು. ಜಗದಾರಾಧ್ಯನಾದ ಮಹಾವೀರನ ಬರವಿನಿಂದ ತನ್ನ ಜನ್ಮ ಸಾರ್ಥಕವಾಯಿತೆಂದು ತಿಳಿದುಕೊಂಡನು.

ಪರಿಶುದ್ಧನಾದ ಕೂಲಾವನೀಪಾಲನು ಪ್ರತಿಗ್ರಹ ಮೊದಲಾದ ನವವಿಧ ನವ ಪುಣ್ಯಪ್ರಾವಿಣ್ಯನು ಉದ್ಘಾದಿಸಮಸ್ತ ಗುಣವರೇಣ್ಯನು–

ಪರಮಪವಿತ್ರನ ಕರಸರ।
ಸಿರುಹಪುಟಾಂತರದೊಳಖಿಳ ಕರಣಪವಿತ್ರಂ॥
ನಿರವದ್ಯಮನತಿ ಮುದದಿಂ।
ಪರಮಾನ್ನಮನಿಕ್ಕಿದಂ ತ್ರಿವಾರಮುದಾರಂ।

ಪರಮ ಪವಿತ್ರನಾದ ಸನ್ಮತಿಸ್ವಾಮಿಯು ಕಮಲದಂತಿರುವ ಬೊಗಸೆಯಲ್ಲಿ ಅಖಿಳ ಕರಣಪವಿತ್ರವಾದ ನಿರವದ್ಯವಾದ ಪರಮಾನ್ನವನ್ನು ರಾಜನು ಇಕ್ಕಿದನು. ಅಂತರಾಯವಿಲ್ಲದೆ ನಿರ್ವರ್ತಿಕ ಆತ್ಮೀಯ ಕಾಯಸ್ಥಿತಿಕನಾಗಿ ಮುನಿ ಕೈಯೆತ್ತಿಕೊಂಡು 'ದಾನವಿಂದಕ್ಷಯಮಕ್ಕೆ' ಎಂದು ಸತ್ಯವಚನದಿಂದ ಆಶೀರ್ವದಿಸಿದನು; ಮತ್ತು ಆ ಅರಮನೆಯಿಂದ ಮರಳಿ ಹೋದನು.

ಆಗ ಕೂಲಭೂಪಾಲನ ಅರಮನೆಯ ಅಂಗಳದಲ್ಲಿ–

ಅಲರ್ಗಳಸರಿ ಪ್ರೊಂಗಳ ಮಳೆ|
ಯೆಲರ್ಗಳ ಲೇಟಂ ಸುರಾನಕದದನಿ ದಿವಿಜಾ||
ವಳಿಯ ಪ್ರೊಗಳ್ತೆಗಳೆಂಬೀ|
ಲಲಿತಾಶ್ಚರ್ಯಂಗಳಾದ ಮೊದವಿದುವಯ್ದುಂ||

ಹೂಮಳೆ, ಚಿನ್ನದ ಮಳೆ, ತಂಗಾಳಿ ಬೀಡುವಿಕೆ, ದೇವತಾ ಸಮೂಹದ ಹೊಗಳಿಕೆಯ ಧ್ವನಿ ಮತ್ತು ದೇವದುಂದುಭಿ ಧ್ವನಿಗಳೆಂಬ ಐದು ಲಲಿತಾಶ್ಚರ್ಯಗಳು ಘಟಿಸಿದವು.

ಅತ್ತ ಆ ಮುನಿವರನು ಗ್ರಾಮ-ನಗರ-ಗಿರಿ-ಕಂದರ-ಭೀಮಾರಣ್ಯ ಪ್ರದೇಶಗಳಲ್ಲಿ ಸಂಚರಿಸಿ ಕಾಮಾರಣ್ಯವನ್ನು ಸುಟ್ಟು ಭೂಮಿಹಿತಚರಿತ್ರನಾಗಿ ಉದಾತ್ತನಾದನು.

ಯಮಿಗೆ ಸಮನಿಸಿತಖಿಳ ಸ|
ತ್ವಮೈತ್ರಿ ಸಂಕ್ಲಿಶ್ಯಮಾನದೊಳ್ ಕಾರುಣ್ಯಂ||
ವಿಮಳ ಗುಣದೊಳ್ ಪ್ರಮೋದಂ|
ಸಮಂತು ದುರ್ವಿನಯ ಜನದೊಳೌದಾಸೀನ್ಯಂ||

ಮಹಾವೀರನಿಗೆ ಆಗ ಅಖಿಳ ಸತ್ವದಲ್ಲಿ ಮೈತ್ರಿ, ದುಃಖದಲ್ಲಿ ಕಾರುಣ್ಯ, ನಿರ್ಮಳ ಗುಣದಲ್ಲಿ ಪ್ರಮೋದ, ದುಷ್ಟದುರ್ವಿನಯರಾದ ಜನರಲ್ಲಿ ಉದಾಸೀನಭಾವ ಉಂಟಾದವು.

ಯತಿ ಪತಿಗೆ ಸಿಂಹನಿಷ್ಕ್ರೀ-|
ಡಿತಮಾಚಾಮ್ಲ ಪ್ರವರ್ಧನಂ ಮೊದಲಾದೂ||

ರ್ಜಿತ ನಿರಶನ ಭೇದಂಗಳೊ|
ಅತಿಶಯದ ನೆಗಳ್ತೆ ಪೆತ್ತುದಪವಿಘ್ನತೆಯಂ||

ಮುನಿಮಹಾರಾಜನಿಗೆ ಸಿಂಹನಿಷ್ಕ್ರೀಡಿತ, ಆಚಾಮ್ಲ ಪ್ರವರ್ಧನ ಮೊದಲಾದ ಮೇಲಾದ ಉಪವಾಸಾ (ವ್ರತ)ಭೇದಗಳಲ್ಲಿ ಕೀರ್ತಿಯುಂಟಾಗಿ ವಿಘ್ನವಿನಾಶವಾಯಿತು. ಭೂಮಂಡಳದ ಜನರೆಲ್ಲರಿಂದ ವಂದಿತನಾಗಿ, ಮೇಲಾದ ಉಗ್ರ ದೀಪ್ತ ತಪ್ತ ಮಹಾಘೋರ ತಪ್ರೋವಿಶೇಷ ವಿಧಿಯಲ್ಲಿ ಕಾಮಾರಿಯಾದ, ಮುನಿ ಯತ್ನಪರನಾದನು.

ಪದಿನೆಣ್ಸಾಸಿರ ಶೀಲದೊ|
ಳೊದವಿದುದೆಣ್ಬತ್ತುನಾಲ್ಕು ಲಕ್ಕೆ ಗುಣದೊಳೊ||
ಪ್ಪಿದುದು ಯತಿರಾಜರಾಜನ|
ಹೃದಯಂ ಸದಯಂ ಪ್ರಭೂತ ಮಹಿಮಾಭ್ಯು
ದಯಂ||

ಪ್ರಭೂತ ಮಹಿಮಾಭ್ಯುದಯನಾದ ದಯಾವಂತನಾದ ಮುನಿಮಹಾರಾಜನ ಹೃದಯವು ಹದಿನೆಂಟು ಸಾವಿರ ಶೀಲದಲ್ಲಿ ಒದವಿದುದು; ಎಂಬತ್ತುನಾಲ್ಕು ಲಕ್ಷ ಗುಣದೊಳು ಒಪ್ಪಿದುದು.

ಪಂಚ ಮಹಾವ್ರತವಾರಿಧಿ|
ಪಂಚ ದಶಮಿತ ಪ್ರಮಾದ ವಿಚ್ಛೇದಕರಂ||

ಪಂಚ ವಿಧ ಸಮಿತಿಯುಕ್ತಂ|
ಪಂಚ ಭವಂಗಳ ವಿಡಂಬಮಂ ಸ್ತಂಭಿಸಿದಂ||

ಐದು ಮಹಾವ್ರತಗಳ ಸಾಗರನಾದನು. ಹದಿನೈದು ದೋಷಗಳನ್ನು ನಾಶ ಮಾಡಿದನು. ಐದುಪ್ರಕಾರದ ಸಮಿತಿಗಳನ್ನು ಆಚರಿಸಿದನು. ಐದು ಜನ್ಮಗಳ ಚೇಷ್ಟೆಯನ್ನು ನಿಲ್ಲಿಸಿದನು.

೯ ಸನ್ಮತಿಯ ಸತ್ವಪರೀಕ್ಷೆ

ವಾರಣಾಸೀಪುರದ ಹೊರಗಿನ ಪ್ರೇತವನದ ಪಕ್ಕದಲ್ಲಿ ಒಂದು ದಿವಸ ಸನ್ಮತಿಸ್ವಾಮಿಯು ತಪಸ್ಸಿಗೆ ತೊಡಗಿದನು. 'ತಪನನಪರ ಪಾರಾವಾರಮಂ ಸಾರೆ ವೀರಂ ವ್ಯಪಗತಪದವಿಕ್ಷೇಪಕ್ರಿಯಂ ಶಕ್ರವಂದ್ಯಂ ಸ್ವಪರಹಿತಚರಿತ್ರಂ ನಿಃ ಪ್ರಕಂಪಾಂಗಂ ಇರ್ದಂ ಕ್ಷಪೆಯೊಳ್' ಯೋಗಿಜನಪುಂಗವನಾದ ಸನ್ಮತಿಸ್ವಾಮಿಯು ಪ್ರತಿಮಾಯೋಗದಲ್ಲಿ ರಾತ್ರಿಯನ್ನು ಕಳೆಯುತ್ತಿರುವಾಗ–

'ಸಂಡೆಗವೇಂದ್ರನಂ ಭುಜಗಭೂಷಣನೇರಿ ಬರುತ್ತುತತ್ತಪೋ|

ಸಂದಿತಸಂ ಜಿನೇಂದುವನಭೀಕ್ಷಿಸಿ ಪಾಣಿಪಯೋಜ
ಯುಗ್ಮಮಂ||
ತಂದು ನೊಸಲ್ಗೆ ತಾಂ ಮುಗಿದು ಭಕ್ತಿಭರಾನತ
ಮೂರ್ಧನಾಗೆ, ಪೂ|
ರ್ಣೇಂದುನಿಭಾಸ್ಯೆಯಂದು ಗಿರಿನಂದನೆ ವಿಸ್ಮಯದಿಂದೆ
ನೋಡಿದಳ್||'

'ರತಿಪತಿಗೆ ಎತ್ತಣಿನ ಈ ನಗ್ನತೆ ಸಮನಿಸಿದತ್ತು?– ಎನುತ್ತ ಮಾನಸದೊಳ್ ವಿಸ್ಮಿತೆಯಾದಳ್ ಪಾರ್ವತಿ, ಯತಿಪತಿಯು ಚಮತ್ಕೃತಿಯನೀವ ರೂಪಿಂಗೆ ಕರಂ' ಶಿವನು ತಪಸ್ಸಿಗೆ ತೊಡಗಿದ ಯತಿಪತಿಯಲ್ಲಿ ಭಕ್ತಿರತನಾಗಿರುವುದನ್ನು ಕಂಡು ಪಾರ್ವತಿಗೆ ಆಶ್ಚರ್ಯವಾಯಿತು.

ಬಲ್ಲಿದರುಂ ನಿಮಗಧಿಕರು|
ಮಿಲ್ಲ ವಿಚಾರಿಪ್ಪೊಡೆ ಸಕಳ ಭುವನಂಗಳೊಳೆಂ||
ದೆಲ್ಲರುಮೆಂಬರ್ ದೇವ ಜ|
ಗಲ್ಲೋಚನ, ನಿನ್ನನೆಱಗಿಪೀತನದಾವೊಂ?||

ವಿಚಾರಿಸಿದರೆ ನಿಮಗಿಂತ ಬಲ್ಲಿದರೂ ಅಧಿಕರೂ ಸಕಲ ಲೋಕಗಳಲ್ಲಿ ಯಾರೂ ಇಲ್ಲವೆಂದು ಎಲ್ಲರೂ ಹೇಳುತ್ತಾರೆ. ದೇವ, ನಿನ್ನನ್ನೂ ಎರಗಿಸುವವನು ಈತನು ಆದಾವನು?– ಎಂದು ಕೇಳಿದ ಪಾರ್ವತಿಗೆ ಶಿವನು ಉತ್ತರ ಕೊಡುತ್ತಾನೆ:

'ಒರ್ಮೊದಲೆ ಮೂಜಗಕೆ ಉನ್ನತನಪ್ಪಂ ಆನಂದದಿಂದೆ ಎನಿಸುವ ಈ ವಿಭುಗೆ ಅಪ್ರತಿಮಾನಯೋಗೀಂದುಗೆ ಆನೆಜಗೆ

ಮಾನಿನಿ ವಿಸ್ಮಯಮಾಡುದೇ? ನಿಖಿಳ ಜಗಂಗಳೊಳ್ ಅಧಿಕನಂ ಅಖಂಡ ಶೌರ್ಯನುಂ ಅಸಾರಸಂಸಾರಪರಾಙ್ಮುಖನುಂ ನಿರುಪಮನಿರ್ಮಳ ಸುಖಸಾರನುಂ ಎನಿಪ ವೀರನಂ ನೀನಱಿಯಾ?’

ನಿನ್ನ ಪೊಗೞ್ತೆಗೆ ಪಕ್ಕಾ|
ದನ್ನನ ಸನ್ಮತಿಯ ಶಕ್ತಿಯುನ್ನತಿಯಂ ನೋ||
ಟ್ಪಂ ನೆಟ್ಟನೆ ತೋರ್ಪುದೆಲೇ|
ಪನ್ನಗಭೂಷಣ ಮುದಿಪ್ಪುಮಂ ಸಲಿಪುದಿದಂ||

ಮಡದಿಯ ಮುಗ್ಧಭಾವಕ್ಕೆ ಸೋತು ಮುಗುಳುನಗೆ ನಗುತ್ತ ಶಿವನು ಅವನ ಆ ಧೈರ್ಯವನ್ನು ಆಶ್ಚರ್ಯಪಡುವಂತೆ ಪಾರ್ವತಿಗೆ ತೋರಿಸಬೇಕೆಂದು ಸಕಲ ಪಿಶಾಚಿಗಳನ್ನೂ ನಿಶಾಚರರನ್ನೂ ಕರೆದು ಸನ್ಮತಿಯ ಸತ್ವ ಪರೀಕ್ಷೆಗೆ ತೊಡಗುತ್ತಾನೆ; ಮತ್ತು ಅವರಿಗೆ ಉಲ್ಬಣ–ವೈಕುರ್ವಣ–ವಿಡಂಬನ–ಶಂಖಪಾತದಿಂದ ಅವನ ಧೈರ್ಯವನ್ನು 'ತೂರ್ಣಂ ಚೂರ್ಣೀಕರಿಸಿಂ' ಎಂದು ಆಜ್ಞಾಪಿಸುತ್ತಾನೆ.

ಕೂಡಲೆ, ಮರುಳ್ ತಂಡಗಳಿಂದ ಭೂಮಂಡಲ, ನಭೋಮಂಡಲ, ದಿಙ್ಮಂಡಲಗಳು ತುಂಬಿದವು. ಪಿಶಾಚಿಗಳ ನಿಶಾಚರರ ಅಟ್ಟಹಾಸರಸಾಬ್ಧಿ ಮೇರೆಮೀರಿತು. ಅವುಗಳ ವಿಚಿತ್ರರೂಪ ಭಯೋತ್ಪಾದಕವಾಗಿತ್ತು.

ನೆಕ್ಕ ಕದಂಪು ಕಂಪಿಸಧರಂ ಮಿಗಿ ಕೆಂಪಡರ್ದಕ್ಷಿ
ಬಿಟ್ಟ ಬಾ|

ಯುಕ್ಕುಳಿಸಿರ್ದ ಪೊಟ್ಟೆ ಪೊಱವಾಯ್ದೆರ್ದೆಯುರ್ವಿಪ
ಪುರ್ವು ಕೆಂಗದಿರ್||
ಮಿಕ್ಕುಮರಲ್ದ ದಾಡೆ ದಸಿಗಾಲ್ ಮಸಿಮೆಯ್ಯ್
ಬಿಱುಸಾದಕೆಯ್ಯ್ ಮುರು|
ಳ್ವಕ್ಕದ ನಿಟ್ಟೊಡಲ್ ಮಸೆದ ಕತ್ತಿಗೆ ಕಣ್ಬೊಲಸಾದು
ವೆತ್ತಲುಂ||

ಆ ಪಿಶಾಚಿಗಳು ದೆವ್ವಗಳು ಭೂತಪ್ರೇತಾದಿಗಳು ಕೂಗಾಡುವ ರೌದ್ರಧ್ವನಿ, ಅವುಗಳ ಅಸ್ತವ್ಯಸ್ತ ಭಯಂಕರ ಅದ್ಭುತಕರ ವಿಚಿತ್ರ ಕಾರ್ಯಗಳು ಕೇಳಿದವರ ಕಂಡವರ ಎದೆ ಝಲ್ಲೆನ್ನುವಂತಿತ್ತು; ಹೆದರಿ ನಡುಗಿ ಗಾಬರಿಗೊಂಡು ಸಾಯುವಂತಿತ್ತು.

ಒದಱಿ ಕುಕಿಲ್ದು ಬಿಟ್ಟುಗಳ ಕೆಯ್ದುಗಳುರ್ವಿದ
ನೀರ ತೋರಗೆಂ
ಡದ ಸರಿಯುಂ ಸಮಂತು ಸುರಿದುಗ್ರ ವಿಷಾಹಿಗಳಂತೆ
ತಳ್ತು ಕಂ||
ಠದೊಳೆ ತಗುಳ್ಚಿ ಪೆರ್ವುಲಿಯು ಸಿಂಹದ ಜಂಗುಳಿ
ಯಾಗಿ ಪಾಯ್ದು ಮಾ|
ಣದೆ ಬಿಱುಗಾಳಿದೂಳಿಗಳನಾಗಿಸಿ ಬಾಧಿಸಿದತ್ತು
ತದ್ಬಳಂ||

ಏನು ಮಾಡಿದರೂ ಆ ಮಹಾಮುನಿಯಾದ ಸನ್ಮತಿಸ್ವಾಮಿಯ ತಪಸ್ಸನ್ನು ಕೆಡಿಸುವುದು ಮರುಳ್ ತಂಡಕ್ಕೆ

ಸಾಧ್ಯವಾಗುವುದಿಲ್ಲ. ಅವುಗಳ ಎಲ್ಲ ಪ್ರಯತ್ನಗಳೂ ವ್ಯರ್ಥವಾದವು. 'ಸುಜನ ಸರೋಜಸೂರ್ಯನ ಧೈರ್ಯಾಚಳಮಂ ಚಳಿಯಿಸಲ್ ನೆಱೆಯದೆ, ಅಂತರಂಗಭಂಗಭಾರದಿಂ ಜೋಲ್ದ ತೆರದೆ ಬಱುತು ಪೆಱಗಣ್ಗೆ ಪಿಂಗೆ, ಗಂಗಾಧರಂ ನಿರೀಕ್ಷಿಸಿ ನಿಜಾಂಗನೆಗೆ ಗಂಡು ಇಂತೆಂದಂ-'

ತುಂಗತರಾವನಿಧರಮಂ|
ಗುಂಗುರು ಕಾಯ್ದು ಪೊಲಿಪಾಯ್ತು ಕಡಂಗಿ ಸತಿ ನೀ||
ನಂಗಜಗಜಗಗಜರಿಪುವಂ|
ಭಂಗಿಪೆನೀ ಗಣದಿನೆಂಬ ನಮ್ಮುದ್ಯೋಗಂ||

ಸನ್ಮತಿಯ ಸತ್ವಪರೀಕ್ಷೆಗೆ ನಾವು ಕೈಕೊಂಡ ಉದ್ಯೋಗ ವ್ಯರ್ಥವಾಯಿತು. ಈಗಲಾದರೂ ಜಿನನ ಯೋಗ್ಯತೆ ತಿಳಿಯಿತೆ? ಎಂದನು. 'ವಿಸ್ಮಯಸ್ಮೇರನಯನಾರವಿಂದೆಯಾದ ಸುಂದರಿಗೆ ಮಂದರಾಚಳಸ್ಥಿರನ ಮುನಿವರನ ನಿರತಿಶಯ ಧೈರ್ಯ ಪ್ರಭಾವಮಂ ವ್ಯಾವರ್ಣಿಸಿ, ತಾನುಂ ಆ ಮಾನಿನಿಯುಂ ಅನೂನ ಅರ್ಚನಾನೀಕದಿಂ ಲೋಕಪೂಜ್ಯನಂ ಪೂಜಿಸಿ ಸುವೀರನುಂ ಅತಿವೀರನುಂ ಎಂದು ನಾಮಂಗಳಂ ಪ್ರೇಮದೆ ಜಿನಸ್ವಾಮಿಗೆ ಇಟ್ಟು ಪೊಡಮಟ್ಟು ಪೋದರ್'

ಇತ್ತ ಸನ್ಮತಿಯು ಯೋಗನಿಯೋಗವನ್ನು ಮುಗಿಸಿ ದಿಗಂತಕೀರ್ತಿವಂತನಾಗಿ ಅಲ್ಲಿಂದ ಪೊರಟು ಚೋಳ-ಆಂಧ್ರ-ಕರ್ಣಾಟ-ಮಗಧ-ಗೂರ್ಜರ-ಮಾಳವ-ಲಾಟ-ಕರಹಾಟಕ-ಪಾಂಚಾಳ ದೇಶಗಳಲ್ಲಿ ಸಂಚರಿಸ ತೊಡಗಿದನು.

೧೦. ಮಹಾವೀರಸ್ವಾಮಿಗೆ ಚಂದನೆಯಿಂದ ಆಹಾರ ದಾನ

ಸಕಲ ಸಂಪತ್ತಿನಿಂದ ಕೂಡಿದ ಸಿಂಬಿ ಎಂಬ ದೇಶದಲ್ಲಿ ವೈಶಾಳಿ ಎಂಬ ನಗರವನ್ನು ಚೇಟಕರಾಜನು ಆಳುತ್ತಿದ್ದನು. ಅವನಿಗೆ ಸುಭದ್ರೆ ಎಂಬ ರಾಣಿ ಇದ್ದಳು. ಆ ದಂಪತಿಗಳಿಗೆ ಧನ ಚಂದ್ರ, ಧನದತ್ತ, ಉಪೇಂದ್ರ, ಸುದತ್ತ, ಸಿಂಹಚಂದ್ರ, ಪತಂಗ, ಅಕಂಪನ, ಕಾಂಭೋಜ, ಪ್ರಭಂಜನ, ಪ್ರಭಾಸರೆಂಬ ಹತ್ತು ಮಂದಿ ಗಂಡು ಮಕ್ಕಳಿದ್ದರು. ಅವರೆಲ್ಲರೂ ವಿನಯ ಗುಣಾಭರಣರಾಗಿಯೂ, ಉತ್ಸವಾಂತಃಕರಣರಾಗಿಯೂ, ನಿರ್ಮಲ ಕೀರ್ತಿಯುಳ್ಳವರಾಗಿಯೂ ಶೋಭಾಯಮಾನರಾಗಿದ್ದರು. ಅವರ ತರುವಾಯ ಹುಟ್ಟಿದ ಪ್ರಿಯಕಾರಿಣಿ, ಮೃಗಾವತಿ, ಸುಪ್ರಭೆ, ಸುಪ್ರಭಾವತಿ, ಚೇಳಿನಿ, ಜ್ಯೇಷ್ಠೆ, ಚಂದನೆ ಎಂಬ ಏಳು ಮಂದಿ ಹೆಣ್ಣು ಮಕ್ಕಳಿದ್ದರು. ಅವರೆಲ್ಲರೂ ಅಭಿಮಾನಿ ಗಳೂ, ಸುಂದರಿಯರೂ, ವಿವೇಕಿಗಳೂ ಆಗಿ ಶೋಭಿಸುತ್ತಿದ್ದರು. ಅವರೆಲ್ಲರಲ್ಲಿ ಕಡೆಯವಳಾದ ಚಂದನೆ ಅತ್ಯಂತ ಸುಂದರಿಯಾಗಿ ದ್ದಳು.

ಒಂದು ದಿನ ಚಂದನೆ ಅರಮಂದಿರದ ಹಿಂದಿನ ಸಹಾಮರದ ಬನದಲ್ಲಿ ವಿನೋದಕ್ಕಾಗಿ ಗೆಳತಿಯರೊಂದಿಗೆ ಜೋಕಾಲಿಯಾಡುತ್ತಿದ್ದಳು. ಅವಳ ಸೊಬಗನ್ನು ನೋಡಿ ಕಾಮನು 'ರಾಗರಸಸಾಗರದೊಳ್ ಜಳಕೇಳಿಯಾಡಿದ'ನಂತೆ!

ಆಗ ಮನೋವೇಗನೆಂಬ ಖೇಚರನು ಆಕಾಶ ಮಾರ್ಗದಲ್ಲಿ ಸ್ವೇಚ್ಛಾವಿಹಾರ ಭರದಿಂದ ಹೋಗುತ್ತಿರುವಾಗ ಸತಿಯರ ಸಂಗೀತಧ್ವನಿ ಕವಿದು ಬಂದು ಆಕರ್ಷಿತನಾಗಿ ಆಶ್ಚರ್ಯಚಕಿತನಾಗಿ ನಿಂತುಬಿಟ್ಟನು. ಕಣ್ಣಿಗೆ ಹಬ್ಬವನ್ನು ಉಂಟು ಮಾಡುವ ಕೌತುಕದ ಆ ಉದ್ಯಾನವನ್ನು ಒಮ್ಮೆಲೆ ನೋಡಿ ಅದರ ಒಳಗೆ ಪ್ರವೇಶ ಮಾಡಿದನು. ತಳಿರುಯ್ಯಾಲೆಯಾಡುತ್ತಿದ್ದ ಚಂದನೆ ಅವನಿಗೆ ದೇವಲೋಕದ ಸ್ತ್ರೀಯರಿಗಿಂತ ಎಷ್ಟೋ ಪಟ್ಟು ಸುಂದರವಾಗಿರುವಂತೆ ಕಂಡಳು. ಕಾಮನ ಹೂಬಾಣದ ಹೊಡೆತಕ್ಕೆ ಸಿಕ್ಕು ಚಂದನೆಗೆ ಸೋತು ಅವಳನ್ನು ಅಪಹರಿಸಿಕೊಂಡು ವಿಮಾನದಲ್ಲಿ ಕುಳಿತು ಮನೋವೇಗದಿಂದ ಹೋಗುತ್ತಿದ್ದನು ಆ ಗುಣವತಿಯನ್ನು ಒಲಿಸಿಕೊಂಡು ವಶಮಾಡಿಕೊಳ್ಳುವುದು ಅಸಾಧ್ಯವೆಂದು ತೋರಿತು. ಸಿಟ್ಟು ಸೆಡುವಿನಿಂದ ಒಂದು ಘೋರ ಅರಣ್ಯದಲ್ಲಿ ಚಂದನೆಯನ್ನು ಚೆಲ್ಲಿ ತನ್ನ ಊರಿಗೆ ಹೊರಟುಹೋದನು. ಭಯಂಕರವಾಗಿ ಬೆಳೆದ ಆ ಹಳುವಿನಲ್ಲಿ ಆಕೆ ತನ್ನ ಸುತ್ತುಮುತ್ತು ಕಣ್ಣು ಹೊರಳಿಸಿ ನೋಡಿ ಆ ನನ್ನ ನಂದನ ಸಮಾನವಾದ ವೈಭವದ ಉದ್ಯಾನವೆಲ್ಲಿ? ಈ ಜರ್ ಎಂದು ಹೆದರಿಕೆ ಉಂಟು ಮಾಡುವ ಕಾನನ

ವೆಲ್ಲಿ? 'ಮದೇನಃಪರಿಪಾಕಮಿಂತಿದಲ್ಲದೆ ಪೆರತೇಂ?–' ಎಂದು ತಾಳ್ಮೆಯನ್ನು ತಂದುಕೊಂಡು ಚಂದನೆ ಅನಘಜಿನಚರಣಾಬ್ಜಕ್ಕೆ ವಂದನೆ ಮಾಡುತ್ತಿದ್ದಳು.

ಕಿರಾತನೊಬ್ಬನು ಕಾತರನಾಗಿ ಆ ತರುಣಿಯನ್ನು ರಾಹು ಚಂದ್ರ ಕಳೆಯನ್ನು ಹಿಡಿಯುವಂತೆ ಹಿಡಿದುಕೊಂಡನು. ಕರ್ಮ ಧರ್ಮಸಂಯೋಗದಿಂದ ಅದೇ ಸಮಯದಲ್ಲಿ ವತ್ಸದೇಶದ ಕೌಶಾಂಬಿಯ ವೃಷಭದತ್ತನೆಂಬ ವೈಶ್ಯನು ವನದ್ರವ್ಯಾಹರಣ ಪರಿಣತಿಯಿಂದ ಅಲ್ಲಿಗೆ ಬಂದು ತೊಳಲಾಡುತ್ತಿದ್ದವನು ಆಗ ತೊಟ್ಟನೆ ತನ್ನ ಕಣ್ಣೆದುರಿನಲ್ಲಿಯೇ ಚಂದನೆಯ ಆಕ್ರಂದನ ಅವಸ್ಥೆಯನ್ನು ಕಂಡನು. ದಯಾವಂತನಾದ ಆತನು ಸವಿ ಮಾತುಗಳಿಂದ ಸದುಪದೇಶಗಳಿಂದ ಕಿರಾತನ ಮನವೊಲಿಸಿ ಹೇರಳ ದ್ರವ್ಯವನ್ನು ಅವನಿಗೆ ಕೊಟ್ಟು ಚಂದನೆಯನ್ನು ಬಿಡಿಸಿ ಕೊಂಡು ತನ್ನ ವಶಕ್ಕೆ ತೆಗೆದುಕೊಂಡನು. ತನ್ನ ಜೊತೆಗೆ ತನ್ನ ಊರಾದ ಕೌಶಾಂಬಿಗೆ ಅವಳನ್ನು ಕರೆದುಕೊಂಡು ಬಂದು ತನ್ನ ಹೆಂಡತಿಯ ಕೈಗೆ ಚಂದನೆಯನ್ನು ಒಪ್ಪಿಸಿದನು.

ನಿನತು ಮಗಳಪ್ಪೀಕೆಯ|
ನನುನಯದಿಂದೆಲಗೆ ಸಲಹು ಮನ್ನಿಸು ನೀನೆಂ||
ದನವದ್ಯ ವೃತ್ತನಿತ್ತಂ|
ತನತ್ತು ವಲ್ಲಭೆಗೆ ಶೀಲವತಿಯಂ ಸತಿಯಂ||

ಚಂದನೆಯ ಚೆಲುವನ್ನು ಶೆಟ್ಟಿಯ ಹೆಂಡತಿ ದಿಟ್ಟಿಸಿ ನೋಡಿ ಮನದಲ್ಲಿ ಮತ್ಸರ ತಾಳಿದಳು. ಅವಳ ಬಗ್ಗೆ ಹೀಗೆ ಅಂದುಕೊಂಡಳು:

ಎತ್ತಣಿನಕ್ಕೆ ಬಂದಳಿವಳಪ್ಪೊಡೆ ನೆಟ್ಟನೆ
ಗಾಡಿಕಾರ್ತಿ ಕ
ಣ್ಕೆತ್ತಿ ಮದೀಕನಂ ತನಗೆ ಮೆಲ್ಲನೆ ವಲ್ಲಭನಾಗೆ
ಮಾಳ್ಕುಮು||
ದೃತ್ತತೆಯಿಂದಮೇಕೆ ನಮಗೀಕೆಯು
ಕುತ್ತಮೆನುತ್ತೆ ಚಿತ್ತದೊಳ್|
ವೃತ್ತಪಯೋಧರದ್ವಿತಯೆ ಚಿಂತಿಸಿ
ಕಂಡಳದೊಂದುಪಾಯಮಂ||

ಅಧಿಕ ಸುಂದರಿಯಾದ ಇವಳು ತನ್ನ ಗಂಡನನ್ನು ವಶ ಮಾಡಿಕೊಳ್ಳದೆ ಬಿಡಳು, ಇವಳನ್ನು ಉಪಾಯದಿಂದ ದೂರವಿರಿಸಬೇಕೆಂದು ತಿಳಿದು ತಪ್ಪು ಹೊರಿಸಿ ಬಂಧನದಲ್ಲಿಟ್ಟು ಬಾಗಿಲ ಬಳಿಯ ಹುಲ್ಲು ಮನೆಯ ಕೋಣೆಯಲ್ಲಿ ಮುಚ್ಚಿಟ್ಟು ಕೊಚ್ಚನಿಕ್ಕಿ ನಡೆಸುತ್ತಿದ್ದಳು.

ಆಗ ಮಹಾವೀರಸ್ವಾಮಿ ವಿಹಾರ ಮಾಡುತ್ತ ಕೌಶಾಂಬಿಗೆ ಬಂದನು. ವಿಹಿತವಿಶಿಷ್ಟ ಉಪವಾಸಗಳನ್ನು ಕೈಕೊಂಡು ಮರುದಿವಸ ಪಾರಣೆಗಾಗಿ ಆ ಪಟ್ಟಣದಲ್ಲಿ ಚರ್ಯಾಮಾರ್ಗದಲ್ಲಿ ಬರುತ್ತಿರುವಾಗ, ಆ ವೃತ್ತಾಂತವನ್ನು ಚಂದನೆ ದ್ವಾರಪುರುಷರಿಂದ ಕೇಳಿ ಅವಸರಗೊಂಡಳು.

ಚಂದನೆ ಮುನಿಯುಂ ನಿಲಿಸುತೆ|
ನಿಂದತಿ ಮುದದಿಂದೆ ಪರಿವ ಪದದೊಳ್ ಪದದೊಳ್||

ಸಂಧಿಸಿದಾ ಸಂಕಲೆ ಪರಿ|
ಡೊಂದಿಸಿತುಂ ತೋರದಂತಡಂಗಿದು ದೆಳೆಯೊಳ್||

ಮುನಿಯನ್ನು ಆಹಾರದಾನಕ್ಕಾಗಿ ನಿಲ್ಲಿಸುವೆನೆಂದು ಧಾವಿಸುವ ಚಂದನೆಯ ಬಂಧನ ಕಳಚಿಹೋಯಿತು. ಜಗನ್ನಾಥನಾದ ಮಹಾವೀರನ ಸನ್ನಿಧಿಯ ಸಾಮರ್ಥ್ಯದಿಂದ ಸ್ವಾತಂತ್ರ್ಯ ಪ್ರಾಪ್ತವಾಯಿತು. ಕೂಡಲೇ ಚಂದನೆ ಲೀಲೆಯಿಂದ ಎದುರುಗೊಂಡು 'ಸನ್ಮತಿಸ್ವಾಮಿಯಂ ಸಮಯಸಮುಚಿತ ಕ್ರಮದಿಂ ನಿಲಿಸಿ ನಿಜನಿವಾಸಕ್ಕೆ ಬಿಜಯಂಗೆಯ್ಸಿ ಪ್ರೀತೋಚ್ಛ್ವಾಸನದೊಳಿರಿಸಿ–

ಪದಯುಗಳಂಗಳಂ ತೊಳೆದು ಪೂಜಿಸಿ ಬಂದಿಸಿ
ಕಾಂತೆ ಕಾಯ ವಾಕ್|
ಹೃದಯವಿಶುದ್ಧಿಯಿಂದೆ ನಿರವದ್ಯಮನನ್ನ ಮನೀಯೆ
ತದ್ಗುಣಾ||
ಸ್ಪದನದನಾಂತು ತನ್ನುದರದೊಳ್ ನಿನಗಕ್ಷಯ
ಮಕ್ಕೆ ದಾನಮೆಂ|
ದುದಿತ ದಯಾಧ್ವಜಂ ಪರಸಿ ಪೋಪ್ಪದುಮಾಪದ
ದೊಳ್ ಸುರಾಧ್ವದಿಂ||
ವಸುಕುಸುಮ ವರ್ಷಣಂ ಮಂ|
ದಸಮೀರಣಮನಿಮಿಷ ಪ್ರಶಂಸೋಕ್ತಿ ಸುರೋ||
ಲ್ಲಸಿತ ಪಟಹಸ್ವನಂ ನಿಮಿ|
ರ್ದೆಸೆದುವು ಚಂದನೆಯ ಮನೆಯ ಮಿಸುಪಂಗಣ
ದೊಳ್||

ಚಂದನೆ ಶಾಸ್ತ್ರೋಕ್ತವಿಧಾನದಿಂದ ಮಹಾವೀರಸ್ವಾಮಿಗೆ ಆಹಾರದಾನ ಮಾಡಿದಳು. ದಾನ ಅಕ್ಷಯವಾಗಲೆಂದು ಆಶೀರ್ವಾದ ಕೊಟ್ಟು ಹೊರಟು ಹೋದನು. ಇತ್ತ ಚಂದನೆಯ ಅಂಗಳದಲ್ಲಿ ಹೂಮಳೆ, ರತ್ನದ ಮಳೆ, ಮಂದಗಾಳಿ, ದೇವ ದುಂದುಭಿ, ದೇವತಾ ಪ್ರಶಂಸೆಗಳೆಂದು ಐದು ಆಶ್ಚರ್ಯದ ಘಟನೆಗಳು ನಡೆದವು. ಅದು ಊರ ಜನರಿಗೆ ಬಹಳ ಚಮತ್ಕಾರ ವೆನಿಸಿತು. ವೃಷಭದತ್ತನು ವಿಸ್ಮಯಾಯತ್ತಚಿತ್ತನಾಗಿ ಚಂದನೆ ಇದ್ದ ಕೋಣೆಗೆ ಮಂದಗತಿಯಿಂದ ಬಂದು, ಪೂರ್ವಾಪರ ವೃತ್ತಾಂತವನ್ನೆಲ್ಲ ವಿವರವಾಗಿ ತಿಳಿದುಕೊಂಡು, ತಪ್ಪು ಮಾಡಿದ ತನ್ನ ಸತಿಯನ್ನು ಆ ಸುತೆಯ ಪದಪಯೋಜಕ್ಕೆರಗಿಸಿ, ಮೆರೆವ ವಸ್ತ್ರಾಭರಣರಾಜಿಯಿಂ ಪೂಜಿಸಿ, ತದನಂತರ ಆ ಚಂದನೆ ಯನ್ನು ತಾನೆ ಕರೆದುಕೊಂಡು ಹೋಗಿ, ಮಗಳ ವಿಯೋಗ ದಿಂದ ಸಹಿಸಲಸಾಧ್ಯವಾದ ದುಃಖದಲ್ಲಿರುವ ಚೇಟಕರಾಜನಿಗೆ ಒಪ್ಪಿಸಿ, ಆತ್ಮಸಂತೋಷವನ್ನು ಹೊಂದಿದನು.

೧೧. ಮಹಾವೀರನ ಕೇವಲಜ್ಞಾನ ಮತ್ತು ಸಮವಸರಣ

ಭಗವಾನ್ ಮಹಾವೀರಸ್ವಾಮಿ ಚಂದನೆಯ ಕೈಯಿಂದ ನಿರವದ್ಯವಾದ ಆಹಾರವನ್ನು ಸ್ವೀಕರಿಸಿ ಆಶೀರ್ವಾದ ಮಾಡಿ

ತಪಸ್ಸಿಗೆ ತೆರಳಿದನು. ಘೋರ ತಪಸ್ಸನ್ನು ಮಾಡಿ ಒಂದು ದಿನ ಸಂಚರಿಸುತ್ತ ವೈಭವದಿಂದ ಶೋಭಿಸುವ ಜೃಂಭಿಕಾಪುರಕ್ಕೆ ಬಂದನು. ಅಲ್ಲಿ ಸಮೀಪದಲ್ಲಿ ಗ್ರಾಮಸೀಮೆಯ ಭೂಮಿಯಲ್ಲಿ ರಿಜುಕೂಲಿ ಎಂಬ ನದಿಯು ಹರಿಯುತ್ತಿತ್ತು. ಅದರ ದಂಡೆಯ ಮೇಲೆ–

ಒದವಿರ್ದ ಶಾಲವೃಕ್ಷದ।
ಮೊದಲೊಳ್ ಪಜ್ಜಳಿಪ ಜಂತುರಹಿತ ಶಿಳಾಪ॥
ಟ್ಟದ ಮೇಲೆ ಮೂಡಮೊಗದಿಂ।
ತ್ರಿದಶಾರ್ಚಿತ ಪಾದಪಂಕಜಂ ನಿಂದಿರ್ದಂ॥

ಶಾಲವೃಕ್ಷದ ಕಲ್ಲಿನ ಆಸನದ ಮೇಲೆ ಪೂರ್ವದಿಕ್ಕಿಗೆ ಮುಖಮಾಡಿ ನಿಂತು ತಪಸ್ಸು ಮಾಡತೊಡಗಿದನು. 'ಎರಡುಂ ಪಾಡಂಗಳೆಡೆ ನಾಲ್ಕೆರಲ್, ಎರಡುಂ ತೋಳಗುವ ಉಂಗುಟಂಗಳ ಮಧ್ಯಂ ಪರಕೆಪ್ಪೊಡೆ ಒರ್ಗೇರ್ಣ್ ತೆರಪಾಗಿರೆ, ನಿಂದಂ ಅಕಂಪಂ ಉಚಿತ ರುಜ್ವಾಗತದೊಳ್'

ಧ್ಯಾನಕ್ಕೆ ತೊಡಗಿದನು. ಆಗ ಮಹಾವೀರ ಸ್ವಾಮಿಯ 'ನಯನಯುಗಂ ನಾಸಾಗ್ರ ಪ್ರಯುಕ್ತಸಂ. ಅವ್ಯಕ್ತಂ ವರ್ತನಂ ಪ್ರಾಣಾಪಾನಯುಗಂ. ಸುಶ್ಲಿಷ್ಟಂ ಶೋಭೆಯನಾಂತುದು ಯೋಗನಿಷ್ಠನ ಓಷ್ಠದ್ವಿತಯಂ'

ಎಲ್ಲ ಅವಯವಗಳಲ್ಲಿಯೂ ಪರಮಾಣು ಮಾತ್ರವೂ ವಿಕೃತಿ ಉಂಟಾಗಿರಲಿಲ್ಲ. ಇಂಥ 'ಯೋಗಿಪ್ರವರನ ನಿಲವು ಈಯದು ಆರ್ಗೆ ಪೆರ್ಚಿವ ನಲವಂ?'

ಪ್ರಶಾಂತಪ್ರಪೂರ್ಣ ಗಂಗಾನದಿಗೆ ಹಿಮಾಲಯವು ಶೋಭಿಸುವಂತೆ, ರಿಜುಕೂಲೆನದಿಗೆ ಪ್ರತಿಮಾಯೋಗ ನಿಮಗ್ನ ಸನ್ಮತಿಯು ಶೋಭಿಸಿದನು. ಆಗ ಆ ಪುಣ್ಯಾರಣ್ಯದಲ್ಲಿ ಸಕಲ ಪ್ರಾಣಿಗಳು ತಮ್ಮ ಜಾತಿವೈರವನ್ನೇ ಮರೆತು ಕೂಡಿ ಆಡ ತೊಡಗಿದವು.

ಘಾತೀಕರ್ಮಗಳ ಕತ್ತಲೆ ಕಳೆಯಲು, ಸಕಲಭವ್ಯ ಸಮೂಹಕ್ಕೆ ಸದ್ಗತಿ ಪ್ರಾಪ್ತವಾಗಲು ಸದ್ಧರ್ಮಚಕ್ರಕ್ಕೆ ಆನಂದ ಉತ್ಸಾಹಗಳು ಉಂಟಾಗಲು, ಮಹಾವೀರ ತೀರ್ಥಂಕರನಿಗೆ ನಿರ್ವಾಣಬೋಧೆಯೆಂಬ ಸೂರ್ಯೋದಯವಾಯಿತು. ನವ ಕೇವಲಲಬ್ಧಿಗಳು ಉದ್ಭವಿಸಲು ಕೋಟಿಸೂರ್ಯಚಂದ್ರರ ಕಾಂತಿ ಯಂತೆ ವಿರಾಜಿಸಿದ ಪರಮಪುರುಷನ ಚರಮದೇಹವು ಕರ ಮೆಸೆದುದು.

ವೈಶಾಖಮಾಸ ಸಿತದಶ |
ಮೀ ಶುಭದಿನ ಹಸ್ತತಾರೆಗಳ್ ದೊರೆಕೊಳೆ ನಿಃ ||
ಕಾಶಮುಸೆಯ್ದುದುದನಘ ಜಿ |
ನೇಶನ ಘನಸಕಳ ವಿಮಳ ಕೇವಳ ಬೋಧಂ ||

ವೈಶಾಖ ಶುಕ್ಲ ದಶಮಿಯ ಹಸ್ತಾನಕ್ಷತ್ರದಲ್ಲಿ ವೀರ ಜಿನನಿಗೆ ಕೇವಲಜ್ಞಾನ ಲಭಿಸಿತು.

ಮತಿಯುಂ ಶ್ರುತಮುಮವಧಿಯುಂ |
ವಿತತ ಮನಃಪರ್ಯಯಾವಗಮುಮುಂ ಕಿಡೆ ಸ ||

ಸ್ಮೃತಿಗೆ ಸಮುಸಿಸಿತು ಕೇವಳ |
ಮತೀಂದ್ರಿಯ ಜ್ಞಾನಮಕ್ರಮಮವ್ಯವಧಾನಂ ||

ಮತಿ-ಶ್ರುತ-ಅವಧಿ-ಮನಃಪರ್ಯಾಯಗಳನ್ನು ದಾಟಿ ಸನ್ಮತಿ ಸ್ವಾಮಿಗೆ 'ಅತೀಂದ್ರಿಯ ಜ್ಞಾನಂ ಅಕ್ರಮಮವ್ಯವಧಾನಂ' ಎನಿಸಿದ ಕೇವಲಜ್ಞಾನವು ಹುಟ್ಟಿತು. ಆಗ ಆಸೆಗಳು ಅವನ ಪಾದಗಳಲ್ಲಿ ಪ್ರಸನ್ನತೆಯನ್ನು ಹೊಂದಿದವು. ಆಕಾಶವು ವಿಶಾಲ ಭಾವನೆಯನ್ನು ತಳೆಯಿತು. ಈ ವಸುಂಧರೆಯ ಮೇಲೆ ಹರಿಯುವ ನದಿಗಳು ಸೌಂದರ್ಯವನ್ನು ಹೊತ್ತುವು. ಗತಕರಾಳ ಧೂಳಿಯಿಂದ ಕೂಡಿದ ಭೂತಳವು ವಿರಾಜಿಸಿತು.

ಸ್ವರ್ಗದ ಕಲ್ಪವೃಕ್ಷಗಳಿಂದ ಸುವಾಸನಾಯುಕ್ತವಾದ ಹೂ-ಮೊಗ್ಗೆಗಳು ಸುರಿದವು. ತಂಗಾಳಿ ಆ ಸುಗಂಧವನ್ನು ಹೊತ್ತು ಸುತ್ತಲು ಸುಳಿಯಿತು. ಸಮಸ್ತ ಗಿಡ ಮರಬಳ್ಳಿಗಳು ಒಡನೆಯೆ ಚಿಗುರು-ಹೂ-ಹಣ್ಣುಗಳನ್ನು ಹೊತ್ತು ಎತ್ತಲೂ ಶೋಭಿಸತೊಡಗಿದವು. ಶಂಖಧ್ವನಿ, ಭೇರೀಧ್ವನಿ, ಸಿಂಹಧ್ವನಿ, ಘಂಟಾಧ್ವನಿಗಳು ದೇವಲೋಕದಲ್ಲಿ ಉಂಟಾದವು. ಕಾರಣವಿಲ್ಲದೆ ಇಂದ್ರನ ಸಿಂಹಾಸನ ನಡುಗಿತು. ಮೂರುಲೋಕದ ಜೀವರಾಶಿಗೆಲ್ಲ ಅಮಂದ ಆನಂದ ಉಂಟಾಯಿತು. ಇಂದ್ರನಿಗೆ ಅವಧಿಜ್ಞಾನದಿಂದ ವೀರನಿಗೆ ಕೇವಲಜ್ಞಾನ ಜನಿಸಿದ ಸಂಗತಿ ಅರಿವಾಯಿತು. ಚತುರ್ಥಕಲ್ಯಾಣವನ್ನು ನಡೆಸಲು ಪರಿವಾರದೊಡನೆ ಭೂಮಿಗೆ ಬಂದನು.

ಇಂದ್ರನ ಆಣತಿಯಂತೆ ಅವನಿಗಿಂತ ಮೊದಲೇ ಭೂಮಿ ಗಿಳಿದು ಬಂದು ಧನದನು ಸಮವಸರಣ (ಧರ್ಮಸಭೆ) ರಚನೆ ಮಾಡಿದ್ದನು. ದೀರ್ಘವರ್ತುಳಾಕಾರದ ಹನ್ನೊಂದು ಭೂಭಾಗ ಗಳನ್ನು ಕ್ರಮವಾಗಿ ೧) ಪ್ರಾಸಾದಚೈತ್ಯ ಭೂಮಿ, ೨) ಜಲ ಖಾತಿಕಾಭೂಮಿ, ೩) ವಲ್ಲೀವನದ ಭೂಮಿ, ೪) ಉಪವನ ಭೂಮಿ, ೫) ಧ್ವಜಭೂಮಿ, ೬) ಕಲ್ಪಮಹೀರುಹ ಭೂಮಿ, ೭) ಭವನಭೂಮಿ, ೮) ದ್ವಾದಶಗಣಗಳ ಭೂಮಿ, ೯) ಪ್ರಥಮ ಪೀಠ ೧೦) ದ್ವಿತೀಯ ಪೀಠ ೧೧) ತೃತೀಯ ಪೀಠ–ಅದರ ಮೇಲೆ ಗಂಧಕುಟಿ ಮುಂತಾದವುಗಳನ್ನು ಸೃಷ್ಟಿಸಿದ್ದನು.

'ಗಂಧಕುಟಿಯ ನಡುವೆ ಬೆಡಂಗುವಡೆದು ಸಿಂಹಸಂಹತಿ ವಿಧೃತಮುಂ, ಶೋಣಮಾಣಿಕ್ಯ ದೀಪ್ತಿವ್ಯಾಪ್ತ ದಿಗಂತ ರಾಳಮುಂ, ಬಹುಳಾಮೋದ ಭದ್ರತರ ವಿನಿದ್ರ ಸಹಸ್ರದಳ ಕಳಧೌತಕಮಳಕರ್ಣಿಕಾಕಮನೀಯಮುಂ ಅಪ್ಪ ಸರ್ವೋ ತ್ಕೃಷ್ಟ ಹರಿವಿಷ್ಟರಾಗ್ರದಲ್ಲಿ'–

ಮದನಾರಿ ನಾಲ್ಕೆರಲ್ ಮು |
ಟ್ಟದೆ ಜಿನಪತಿ ವರ್ಧಮಾನನುಪಮ ಮಹಿಮಾ ||
ಸ್ಪದನವನತ ಲೋಕತ್ರಯ |
ನುದಿತ ಯಶಂ ವಿದಿತ ವಿಶ್ವನೊಪ್ಪುತ್ತಿರ್ದಂ ||

ಸವಮಸರಣ (ಧರ್ಮಸಭೆಯ) ದ ಹನ್ನೊಂದು ಭೂಭಾಗದ ವರ್ತುಲಗಳ ಮಧ್ಯದಲ್ಲಿ ಇರುವ ಗಂಧಕುಟಿಯ ಸಿಂಹಾಸನದ

ಮೇಲೆ ಸಹಸ್ರದಳದ ಕಮಲದ ತುದಿಯಲ್ಲಿ ನಾಲ್ಕು ಬೆರಳು ಅಂತರದಲ್ಲಿ ಭಗವಾನ್ ಮಹಾವೀರ (ವರ್ಧಮಾನ) ತೀರ್ಥಂಕರನು ವಿರಾಜಮಾನನಾಗಿದ್ದಾನೆ. ಆಗ ಇಂದ್ರನು ಅಲ್ಲಿಗೆ ಬಂದು ಸ್ವಾಮಿಗೆ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಸಾಷ್ಟಾಂಗ ನಮಸ್ಕಾರ ಮಾಡಿ ಪೂಜಿಸಿ ಆನಂದ ಪುಳಕಿತನಾಗಿ ಕೈ ಮುಗಿದು ಜಿನಸ್ತುತಿ ಮಾಡುತ್ತ ಪ್ರಾರ್ಥಿಸಿದನು:

ದಯೆಯ ಪಯೋಧಿ ಸತ್ಯದ ತವರ್ಮನೆ ಶೀಲದ
ಜನ್ಮಭೂಮಿ ಕಾಂ।
ತಿಯ ಕಣಿ ಶಾಂತಿಯಾಗರಮನಂತ ಗುಣಂಗಳ
ಮಂಗಳಾಲಯಂ॥
ಜಯರಮೆಯಿಕ್ಕೆದಾಣಮೆನಿಸಿರ್ದ ಜಗನ್ನುತ
ವರ್ಧಮಾನ ನಿ।
ನ್ನಯ ನಿರವದ್ಯಮಾರ್ಗಮೆಮಗೀಗಪವರ್ಗದ
ಸಿದ್ಧಿಯಂ ಜಿನಾ॥

೧೨. ಮಹಾವೀರನ ದಿವ್ಯ ಧ್ವನಿ ಮತ್ತು ಗೌತಮ ಗಣಧರ

ಕೇವಲಜ್ಞಾನ ಹುಟ್ಟಿಯೂ, ಸಮವಸರಣದಲ್ಲಿ ಆಸೀನನಾಗಿಯೂ, ಭಗವಾನ್ ಮಹಾವೀರಸ್ವಾಮಿಗೆ 'ದಿವ್ಯಧ್ವನಿ' ಏಕೆ ಹುಟ್ಟಲೊಲ್ಲದು? ಎಂದು ಇಂದ್ರನು ಚಿಂತಿಸಿದನು. ಗೌತಮ ಗಣಧರನು ಬಾರದ್ದರಿಂದ ಹಾಗಾಗಿದೆಯೆಂದು ಅವಧಿ ಜ್ಞಾನದಿಂದ ತಿಳಿದುಕೊಂಡು ವಟುವೇಷ ಧರಿಸಿ ಇಂದ್ರನು ಅವನನ್ನು ಕರೆತರಲು ಗೌತಮಪುರಕ್ಕೆ ಹೋದನು.

ಊರ ಮಧ್ಯದಲ್ಲಿರುವ ಅಧ್ಯಯನ ಶಾಲೆಯನ್ನು ಪ್ರವೇಶಿಸಿ, ಐನೂರು ಮಂದಿ ಶಿಷ್ಯರ ಸಮೂಹಕ್ಕೆ ಬೋಧೆ ಮಾಡುತ್ತಿರುವ ಗೌತಮನನ್ನು ಕಂಡು, ಇಂದ್ರನು ಹಿಗ್ಗಿದನು. ಈ ಹೊಸ ವಟು ಎಲ್ಲಿಂದ ಬಂದನೆಂದು ಕುತೂಹಲದಿಂದ ವಿದ್ಯಾರ್ಥಿಗಳು ಓದನ್ನು ನಿಲ್ಲಿಸಿ ಅವನ ಕಡೆಗೆ ನೋಡತೊಡಗಿದರು. ಗುರುಗಳ ಬಳಿಗೆ ಬಂದು ಅವರಿಗೆ ನಮಸ್ಕಾರ ಮಾಡದೆ ಸುಮ್ಮನೆ ನೋಡುತ್ತ ನಿಂತಿದ್ದಾನೆ, 'ಇವನೇಂ ಮರುಳೋ ಮೇಣ್ ಅಖಿಳಶಾಸ್ತ್ರ ಸಮಿತಿಯ ತಿರುಳೊ?' ಎಂದು ವಿದ್ಯಾರ್ಥಿಗಳು ಅವನ ನಡತೆಯ ಬಗ್ಗೆ ಚಕಿತರಾದರು. ಆಗ ಆ ಗುರು

ಗೌತಮನು ವಿದ್ಯಾರ್ಥಿಗಳ ಚಿತ್ತ ಚಂಚಲವಾದುದನ್ನು ಗಮನಿಸಿ, ಅವರ ಕಡೆಗೆ ಸಿಟ್ಟಿನ ದೃಷ್ಟಿ ಬೀರಿದನು. 'ಗುರು ಹೂಂಕಾರಪ್ರೇರಿತಂ ಪುನರಧ್ಯಯನ ವಿಧಾನಾವಧಾನಂ ಆಗೆ' ಮತ್ತೆ ಪಾಠ ಮುಂದುವರಿಯಿತು. ಮೃದುಮಧುರ ಗಂಭೀರ ಧ್ವನಿಯಿಂದ ಬೋಧಿಸುತ್ತ ಗೌತಮನು ಶಾಸ್ತ್ರದ ಅರ್ಥ—ವ್ಯಾಖ್ಯಾನಗಳಲ್ಲಿ ಆಸಕ್ತನಾದನು. ಬೋಧನೆ ಬಲು ಹೃದಯಂಗಮವಾಗಿತ್ತು. ವಟುವೇಷದ ಇಂದ್ರನು ಮಧ್ಯಪ್ರವೇಶಿಸಿ ಎಡಗೈಸನ್ನೆಯಿಂದ ಬೋಧನೆಯನ್ನು ತರುಬಿ, ಬೋಧಿಸುವ ರೀತಿಯ ಬಗ್ಗೆ ಅಸಮ್ಮತಿಯನ್ನು ಸೂಚಿಸಿದನು. ಗೌತಮನು ಮಾಡಿದ ಅರ್ಥ-ವ್ಯಾಖ್ಯಾನಗಳು ಸರಿಯಿಲ್ಲವೆಂದು ಹೇಳಿ, ತನಗೆ ತಿಳಿದ ನಿಜವಾದ ಅರ್ಥವನ್ನು ವಟುವೇಷದ ಇಂದ್ರನು ವಿವರಿಸಿದನು.

ಅಂತು ಪರಕೀಯ ಸಿದ್ಧಾಂತ ಸಮರ್ಥನಸಮರ್ಥ ಹೇತುಜಾತ ಮನಸಿದ್ಧ ವಿರುದ್ಧಾದಿಗಳಿಂ ಅದಂ ದೂಷಿಸಿ, ಪರವಾದೀ ವನಜಾಕರ ಹಿಮಕರನೆನೆ ಶೋಭಿಸುವ ವೇಷಧಾರಿ (ವಟು)ಯಂ ಸೂರಿಕುಂಜರಂ (ಗೌತಮಂ) ನಿವಾರಿಸಿ, 'ಎಲೆ, ತಮ್ಮಾ, 'ಗಿಳಿಯ ಚಪಳತೆ ನೆಲೆವೆತ್ತುದು ನಿನ್ನೊಳ್. ಇನ್ನೆಗಂ ನಿನಗೆ ಇನಿತಂ ಕಲಿಸಿದ ಕೋವಿದನಾವೊಂ? ಜೀಕ್ಕನೆ ಅರಿಪು ಎಂಬುದುಂ ಮುಗುಳ್‌ನಗೆನಗುತಂ'

ಇಂದ್ರನು ಗೌತಮನಿಗೆ ತನ್ನ ಗುರು ಮಹಾವೀರನೆಂದು ತಿಳಿಸಿ, ಅವನ ಗುಣಗಾನ ಮಾಡಿದನು. 'ಪರಮವೀರ ಭಟ್ಟಾ

ರಕಂ; ಅಮಿತ ದಯಾಧಾರಕಂ. ವಿಶ್ವವಿದ್ಯಾಭರಣಂ; ಸ್ಮರ ದೂರಂ, ನಿರ್ವಿಕಾರಂ; ಸಮವಸರಣಕಾಂತಂ' ಎಂದು ವರ್ಣನೆ ಮಾಡಿದನು. ಅವನ ಮಾತನ್ನು ಕೇಳಿ ಗೌತಮನು ಗಹಗಹಿಸಿ ನಕ್ಕು, 'ನಮ್ಮ ಸಿದ್ಧಾರ್ಥನ ಮಗ ಸನ್ಮತಿ, ಅವನೇ ಅಲ್ಲವೆ ನಿನ್ನ ನಚ್ಚಿನ ಗುರು? ಅವನು ಇಂದ್ರಜಾಲವಿದ್ಯೆಯನ್ನು ಕಲಿತು ಚಮತ್ಕಾರ ಮಾಡುತ್ತಾನೆ. ಇನ್ನೂ ಬಾಲಕನೈ ನೀನು. ನಿನ್ನೊಡನೆ ಜಗಳವಾಡುವುದು ಅನುಚಿತವಾದುದು. ನಾನೇ ಬರುವೆ. 'ನಿನ್ನ ಗುರು ವರ್ಧಮಾನಂ ಬನ್ನಂ ಬಡುವಂತೆ ಮಾಡುವೆಂ. ನಡೆ ಪೋಪಂ!' ಎಂದನು.

ಇಂದ್ರಭೂತಿ ಎಂಬ ಬೇರೆಯ ಹೆಸರನ್ನು ಇಟ್ಟುಕೊಂಡು, ದುರಭಿಮಾನಿಗಳಾದ ಅಗ್ನಿಭೂತಿ--ವಾಯುಭೂತಿಗಳೆಂಬ ತಮ್ಮಂದಿರನ್ನು ಜೊತೆಗೆ ಕರೆದುಕೊಂಡು ಇಂದ್ರ(ವಟು)ನೊಂದಿಗೆ ಗೌತಮನು ಸನ್ಮತಿಯ ಬಳಿಗೆ ಬಂದನು.

ನಿಟ್ಟು ಅತೃಪ್ತಿ ಅಸಮಾಧಾನಗಳಿಂದ ಕೂಡಿದ ಇಂದ್ರ ಭೂತಿ (ಗೌತಮ) ಸಮವಸರಣವನ್ನು ಕಂಡಕೂಡಲೆ ಶಾಂತ ನಾದನು. ಕೋಪ ಮಾಯವಾಯಿತು. ಮಿಥ್ಯಾತ್ವ ಮಹಾ ತಾಪವು ಹೊರಟು ಹೋಯಿತು. ಅಲ್ಲಿದ್ದ ಮಾನಸ್ತಂಭದರ್ಶನ ಮಾತ್ರದಿಂದ ಮನಸ್ಸಿನೊಳಗಿನ ಹೊಯ್ದಾಟ ನಿಂತುಬಿಟ್ಟಿತು. ಬಂಧುತ್ರಯರ ಆತ್ಮದಲ್ಲಿ ಗಟ್ಟಿಯಾಗಿ ಅಂಟಿನಿಂತ ಮಹಾ ಮದೋತ್ಕಟ ರೋಗವು ಆಗ ತಂತಾನೆ ವಾಸಿಯಾಯಿತು. ವಟು ವೇಷವನ್ನು ತೊರೆದು ಇಂದ್ರನು ನಿಜರೂಪ ಧರಿಸಿದನು.

ಸಭೆಯಲ್ಲಿ (ಸಮವಸರಣದಲ್ಲಿ) ಜನಸಮೂಹ ಸಾಗರದಂತೆ ಬಹು ವಿಸ್ತಾರವಾಗಿ ಹರಡಿಕೊಂಡಿತ್ತು.

ಆ ಮೇಲೆ, ಗೌತಮನು ಪರಮಪ್ರೀತಿಯಿಂದ ಅನಂತ ಗುಣಗಳ ಜನ್ಮಭೂಮಿಯಾದ ಶ್ರೀ ವರ್ಧಮಾನ ಸ್ವಾಮಿಯನ್ನು ಕಂಡು 'ಮೂಮೆ ಬಲಗೊಂಡು ಸರ್ವಾಂಗ ಪ್ರಣತ ಸಣುತಿ, ಪ್ರಯತ್ನ ವದನವಾರಿಜಂ ನಿಟಿಳ ತಟಕುಟ್ಮಳಿತ ಕರ ವಾರಿಜನಾಗಿ ನಿಂದಿರ್ದು' ಜಗತ್ರಯ ಪವಿತ್ರನಾದ ಕೇವಲ ಜ್ಞಾನನೇತ್ರನಾದ ಸ್ವಾಮಿಯ ಸ್ತೋತ್ರವನ್ನು ಕೈಕೊಂಡನು.

ಪರುಷಂ ಪೊರ್ದಿದ ತತ್ಸಿ|
ದ್ಧರಸಂ ರಸಿಯಿಸಿದ ಲೋಹದೊಂದಂದಮನೇಂ||
ಧರಿಯಿಸಿದನೊ ಜಿನತನುರುಚಿ|
ಪರಿಗತವಪು ಶುದ್ಧ ಹೃದಯದೀಪ್ರಂ ವಿಪ್ರಂ||

ಪರುಷಮಣಿಯನ್ನು ಸ್ಪರ್ಶ ಮಾಡಿದ ಸಿದ್ಧರಸದಿಂದ ರಚಿಸಿದ ಕಬ್ಬಿಣದ ಗತಿ ಹೇಗೆ ಚಿನ್ನವಾಗಿ ಮಾರ್ಪಡುತ್ತದೆಯೋ ಹಾಗೆ ಜಿನತನುವಿನ (ವರ್ಧಮಾನನ) ಸ್ಪರ್ಶದಿಂದ ಗೌತಮನ ದೇಹವು ಶುದ್ಧ ಹೃದಯವಾಗಿ ಪರಿವರ್ತನಗೊಂಡಿತು. ಆಗ ಗೌತಮನು ತನ್ನ ತಮ್ಮಂದಿರು ಸಹಿತವಾಗಿ ಸನ್ಮತಿ ಸ್ವಾಮಿಯ ಬಳಿಯಲ್ಲಿ ಜಿನದೀಕ್ಷೆ ಹೊಂದಿದನು.

ತಳೆಯಲೊಡಂ ದೀಕ್ಷೆಯನಾ|
ಗಳೆ ಸಪ್ತರ್ಧಿಗಳ ಸಂಪದಂ ಸಮನಿಸಿತು||

ಜ್ವಳಿತ ಚತುಜ್ಞಾನಂಗಳ|
ವಿಳಾಸಮಳವಟ್ಟುದಾ ವಿಶಿಷ್ಟ ವೃತಿಯೊಳ್||

ದೀಕ್ಷೆಯನ್ನು ಹೊಂದಿದೊಡನೆ ಗೌತಮನಿಗೆ ಸಪ್ತರ್ಧಿ ಸಂಪತ್ತು (ಸಪ್ತ ತತ್ವಗಳ ತಿರುಳು)ಲಭಿಸಿತು. ಮತಿ-ಶ್ರುತ-ಅವಧಿ-ಮನಃಪರ್ಯಯ ಎಂಬ ನಾಲ್ಕು ಪ್ರಕಾರದ ಜ್ಞಾನಗಳು ಹುಟ್ಟಿದವು. ಸಮಿತಿಗಳು, ಪಂಚಮಹಾವ್ರತಗಳು, ಶೀಲಗುಣಗಳು, ಗುಪ್ತಿಗಳು ಅಳವಟ್ಟವು. ಇಂದ್ರಾದಿಗಳಿಂದ ವಂದನೆ ಮಾಡಿಸಿಕೊಳ್ಳುವ ಮಹಾಮರ್ಯಾದೆ ದೊರಕಿತು ಮುಮುಕ್ಷು ಮುಖ್ಯ ಪ್ರವೃತ್ತಿಯನ್ನು ಹೊಂದಿ ಬೋಧಸಿಂಧು-ಜಗತ್ರಯ ಬಂಧುವಾದ ಮಹಾವೀರಸ್ವಾಮಿಯ ಮುಂದೆ ನಿಂತು, ಕೈ ಮುಗಿದು 'ಜೀತಸದಂದವಂ ದುರಿತದಂಡವಂ ಈ ಜಗದಂದವಂ ಸುಧೀನೂತನಯ ಪ್ರಮಾಣಚಯದುದಮುಮಂ ಬೆಸಸು' ಎಂದು ಬೇಡಿಕೊಂಡನು.

ಭಗವಾನ್ ವರ್ಧಮಾನಸ್ವಾಮಿ ಪ್ರಸನ್ನನಾದನು. ಗೌತಮನಿಗೆ ೬೦ ಸಾವಿರ ಪ್ರಶ್ನೆಗಳಿಗೆ ಉತ್ತರ ಕೊಡುವ ಸಾಮರ್ಥ್ಯ ಉಂಟಾಯಿತು. ಗಣಧರಪದವಿ ದೊರೆತು, ಅವನ ನಾಲಗೆಯು ಸರಸ್ವತಿಯು ನರ್ತಿಸುವ ನಾಟ್ಯರಂಗವಾಯಿತು. ಹೀಗೆ ಯೋಗಿವರ್ಯನಾದ ಗೌತಮನಿಗೆ ಪರ್ಯನುಯೋಗ ಭಾಗಿಯಾಗುವ ಅವಕಾಶ ದೊರೆಯಿತು.

ಪವನನಿರೋಧವಿಲ್ಲದೆ ಗಳೋಷ್ಠಪುಟಾದಿ ನಿಮಿತ್ತವಿಲ್ಲದೆ ಉದ್ಭವಿಸುವ, ದೋಷವಿಲ್ಲದೆ ಸಮಸ್ತ ಜನಗಳ ವಾಂಛಿತಾರ್ಥ

ವನ್ನು ಸುಪಿಶದವಾಗಿ ಹೇಳುವ, 'ಭುವನ ಅಖಿಳ ಭಾಷೆಗಳ್
ಆವಗಂ ತನತ್ತವಯುವಂ ಅದ ನಾದಂ ಒಗೆದತ್ತು ಅಭವಂಗೆ'

ಅಂತತಿಕ್ರಾಂತ ಕರಣವರ್ಣಾಚರಣವುಂ, ಸರಸ್ವತೀ ಸಮುಳಂಕಾರ ಸತ್ಕಾರ ಲಾಂಛಿತವುಂ, ಅಪಗತಾತುಳವುಂ, ಅಪುನರುಕ್ತವುಂ, ಏಕಯೋಜನ ಅಂತರ ಅವಸ್ಥಿತ ಸಮಸ್ತ ಜನಸಂತಾನ ಸ್ವಾಂತಸುವ್ಯಕ್ತವುಂ, ಅತ್ಯಂತ ಮೃದು ಮಧುರತಾಯುಕ್ತಮುಂ, ಗಣಧರ—ಕುಳಿಶಧರ—ಚಕ್ರಧರ ಪ್ರಶ್ನವ್ಯತಿರೇಕ ಅನಿಃಶ್ರುತಮುಮಪ್ಪ ದಿವ್ಯರಾವಂ ಶ್ರಾವಣ ಬಹುಳ ಪಕ್ಷಪಕ್ಷತಿಯೊಳ್ ನೆಗಳ್ವುದುಂ.

ಆ ದಿವ್ಯಧ್ವನಿಯ ಭಾವವನ್ನು ಗೌತಮನು ನಾಲ್ಕು ಅನುಯೋಗಗಳಲ್ಲಿ ರಚಿಸಿದನು. ವರ್ಧಮಾನಸ್ವಾಮಿಯ ಗಣ ನಾಥನಾಗಿ ಮಹಿಮೋನ್ನತಿಯನ್ನು ಹೊಂದಿ, ಅತಿನಿರ್ಮಲ ಧರ್ಮಸುಧೆಯನ್ನು ವಿನೇಯಜನವೆಂಬ ಸಸ್ಯಸಂತತಿಗೆ ಉಣಿಸಿ, ಅಭಿವೃದ್ಧಿಗೊಳಿಸಿದನು.

ಮಹಾವೀರ (ವರ್ಧಮಾನ) ತೀರ್ಥಂಕರನಿಗೆ ಮೂವತ್ತು ನಾಲ್ಕು ಅತಿಶಯಗಳು, ಎಂಟು ಪ್ರಾತಿಹಾರ್ಯಗಳು, ಅನಂತ ಚತುಷ್ಟಯಗಳು ಉಂಟಾದವು; ಅರ್ಹತ್ ಪದವಿಯ ೪೬ ಗುಣ ಗಳು ಆಳವಟ್ಟವು.

ಶ್ರೀ ವರ್ಧಮಾನ ಸನ್ಮತಿ|
ದೇವ ಮಹಾವೀರ ವೀರಮುಖ್ಯಸಮಸ್ತೋ—||
ರ್ವೀವಳಯ ವಿನುತ ದಶಶತ|
ಪಾವನ ನಾಮಂಗಳಂ ಜಿನಂ ತಳೆದೆಸೆದಂ||

೧೪. ಮಹಾವೀರಸ್ವಾಮಿಯ ವಿಹಾರ ಮತ್ತು ಪರಿನಿರ್ವಾಣ

ಪರಮ ಆರ್ಹಂತ್ಯ-ಲಕ್ಷ್ಮೀಕಾಂತನಿಗೆ, ನಿಖಿಳಗುಣನಿಶಾಂತನಿಗೆ, ಸಚ್ಚಿದಾನಂದ ಕಂದಳೀ ಜನ್ಮಭೂಮಿಗೆ, ಮಹಾವೀರ ಸ್ವಾಮಿಗೆ ಸಮಸ್ತ ಭವ್ಯಜನರ ಪೂರ್ವಜನ್ಮದ ಪುಣ್ಯೋದಯದಿಂದ ಶ್ರೇಯವನ್ನು ಉಂಟುಮಾಡುವ ಸಮುಚಿತ ವಿಹಾರ ಪ್ರಾಪ್ತವಾಯಿತು. ಅದನ್ನು ಇಂದ್ರನು ತನ್ನ ಅವಧಿಜ್ಞಾನದಿಂದ ತಿಳಿದು ಬೇಗನೆ ಬಳಿಗೆ ಬಂದು ಸ್ವಾಮಿಯ ಪೂಜೆಯನ್ನು ಕೈಕೊಂಡನು.

ಮಂದಾರದ ಪೂಸಮಾಲೆಗ- |
ಳಿಂದಂ ಜಿನಪಾದ ಪದ್ಮಮಂ ಪೂಜಿಸಿಯಾ ||
ನಂದದಿ ಬಿನ್ನವಿಸಿದನಿಂ- |
ತೆಂದು ಶಚೀರಮಣನಮಳ ಭಕ್ತಿಸಮೇತಂ ||

'ಜನರಲ್ಲಿ ಅನೀತಿ ಅಜ್ಞಾನ ಹೆಚ್ಚಾಗಿದೆ; ಅದನ್ನು ಹೋಗಲಾಡಿಸಬೇಕು. ಸಜ್ಜನರ ಹೃದಯಕಮಲದಲ್ಲಿ ವೈಭವ ಲಕ್ಷ್ಮಿ ಹುಟ್ಟಿಬರಬೇಕಾಗಿದೆ. ಆದ್ದರಿಂದ ಜಗತ್ರಯನೇತ್ರನೆ,

ಪಾವನ ಜಿನ ಭಾನು, ಮಹಾವೀರಸ್ವಾಮಿಯೆ, ನೀನು ವಿಹಾರವನ್ನು ಕೈಕೊಳ್ಳಬೇಕು'.– ಎಂದು ಇಂದ್ರನು ಬೇಡಿಕೊಂಡನು. ಅವನ ಪ್ರಾರ್ಥನೆ ಫಲಿಸಿತು.

ವೃಂದಾರಕ ಮಂದಾಹತಿ |
ದುಂದುಭಿ ಸಂದೋಹ ಸಾಂಧ್ರ ಮಂದ್ರೋಚ್ಚಧ್ವಾ ||
ನಂ ದೆಸೆಗಳುಮಂ ನಭಮುಮ |
ನಂದಾಕ್ರಮಿಸಿತ್ತು ಭವ್ಯಜನ ಹರ್ಷಕರಂ ||

ದುಂದುಭಿ ನಿನಾದ ದಿಙ್ಮಂಡಲವನ್ನು ವ್ಯಾಪಿಸಿತು. ಸನ್ಮತಿಸ್ವಾಮಿಯ ವಿಹಾರದ ಸೂಚನೆಯೆಂದು ತಿಳಿದು ಭವ್ಯಜನರಿಗೆ ಆನಂದವಾಯಿತು.

ಕೂಡಲೆ, ನಿಳಿಂಪ ನಿರ್ಮಿತ **ಚತುರ್ದಶ ಅತಿಶಯಗಳು** ಉಂಟಾದವು:

(೧) ಸರ್ವತ್ರ ಏಳೇಳು ಸಾವಿರ ಕಮಲಪತ್ರಗಳುಳ್ಳ ಕುಮುದ ವನಯಾನ

(೨) ಸರ್ವರಿಗೂ ತಿಳಿಯುವ ಅರ್ಧಮಾಗಧಿ ಭಾಷೆ

(೩) ಸರ್ವಜನ ಮೈತ್ರೀಭಾವ

(೪) ಸರ್ವರಿಗೂ ಅನುಕೂಲವಾದ ಸುಗಂಧ ಮಿಶ್ರಿತ ಮಂದ ಗಾಳಿ

(೫) ಸರ್ವಪ್ರಯತ್ನದೊಂದಿಗೆ ಮರುತ್ಕುಮಾರರು ಧೂಳು, ಮುಳ್ಳು, ಹುಲ್ಲು, ಕ್ರಿಮಿಕೀಟಕಾದಿಗಳು ಇಲ್ಲದಂತೆ

ಮಾಡಿ, ಉಡುಗಿ ಸ್ವಚ್ಛಮಾಡಿದ ಒಂದು ಯೋಜನವಿಸ್ತಾರ ಭೂಭಾಗ

(೬) ಸರ್ವಪರಿಶ್ರಮದೊಂದಿಗೆ ಆ ಭೂಭಾಗದ ಮೇಲೆ ಸ್ತನಿತಕುಮಾರರು ಸುಗಂಧಪೂರಿತ ಗಂಧೋದಕದ ಮಳೆಯನ್ನು ಸುರಿಸುವುದು.

(೭) ಸರ್ವಋತು ಯೋಗ್ಯ ರಸಫಲ ಶೋಭಿತ ವೃಕ್ಷರಾಜಿಯುಳ್ಳ ಹಾಗೂ ಕನ್ನಡಿಯನ್ನು ಹೋಲುವ ರತ್ನಮಯ ನೆಲಗಟ್ಟು

(೮) ಸರ್ವರ ಕಣ್ಣಿಗೆ ಆನಂದವನ್ನು ಉಂಟುಮಾಡುವ ತೆನೆ ಭಾರದಿಂದ ಬಾಗಿದ ಭತ್ತ ಮೊದಲಾದ ಸಸ್ಯಸಂಪತ್ತು.

(೯) ಸಮಸ್ತ ಪ್ರಾಣಿಸಮೂಹದಲ್ಲಿ ವೈರವಡಗಿ ಮೈತ್ರಿ ಉಂಟಾಗುವುದು

(೧೦) ಸಕಲ ಪಕ್ಷಿಗಳ ನಿರಾತಂಕ ಸಂಚಾರಯೋಗ್ಯ ನಿರ್ಮಲ ಗಗನಮಂಡಲ

(೧೧) ಸಕಲ ದಿಙ್ಮಂಡಲದಲ್ಲಿ ನಿರಭ್ರತೆ, ಶುಭ್ರತೆ ಸ್ವಚ್ಛ ಬೆಳಕು

(೧೨) ಸರ್ವ ದೇವತೆಗಳ ಸಮೂಹದ ಪ್ರಿಯವಾದ ಸ್ಪರ್ಧಾತ್ಮಕ ಧ್ವನಿ

(೧೩) ಸರ್ವಭವ್ಯಜನ ಹೃದಯಕಮಲವನ್ನು ಅರಳಿಸುವ ಸೂರ್ಯಮಂಡಲದಂತೆ ಅವರ ಮುಂದೆಮುಂದೆ ಸಾಗಿರುವ ಧರ್ಮಚಕ್ರ

(೧೪) ಸಮಸ್ತ ಪೈರು ಪಚ್ಚೆಯಿಂದ ಪ್ರಶಸ್ತವಾದ ಭೂಮಿಯ ಮೇಲೆ-೧) ಚಿನ್ನದ ಗಿಂಡಿ, ೨) ಕಳಶ, ೩) ಕನ್ನಡಿ, ೪) ಛತ್ರ, ೫) ಚಾಮರ, ೬) ಧ್ವಜ, ೭) ಬೀಸಣಿಕೆ, ಇವುಗಳನ್ನು ಹಿಡಿದುಕೊಂಡು ಮುಂದೆಸಾಗಿದ ೮) ಮುತ್ತೈದೆಯರು-ಮುಂತಾದ ಅಷ್ಟ ಮಂಗಳೋಪಕರಣ.

–ಹೀಗೆ ಸಕಲ ಆಶ್ಚರ್ಯಕರವಾದ ದೇವನಿರ್ಮಿತ ಹದಿನಾಲ್ಕು ಅತಿಶಯಗಳೊಂದಿಗೆ ಸನ್ಮತಿ ಸ್ವಾಮಿಯ ಸಮವಸರಣ ಸಭೆ ಅಂತರದಲ್ಲಿ ಸಂಚರಿಸುತ್ತ ಮುಂದುವರಿಯಿತು. ೧೦ ಘಾತಿಕ್ಷಯಜಾತಿಶಯಗಳು, ೧೦ ಸಹಜಾತಿಶಯಗಳು, ೮ ಪ್ರಾತಿಹಾರ್ಯಗಳು, ಅನಂತ ಚತುಷ್ಟಯಗಳು ಸ್ವಾಮಿಗೆ ಆ ಮೊದಲೆ ಉಂಟಾಗಿದ್ದವು.

ಕುರು, ಕರಹಾಟ, ಲಾಟ, ಖಚ, ಗೂರ್ಜರ, ಮಾಳವ, ಚೋಳ ಮೊದಲಾದ ಬಂಧುರ ದೇಶಗಳಲ್ಲಿ ಧರ್ಮಾಮೃತದ ಮಳೆಗರೆಯುತ್ತ ಅಸಾಮಾನ್ಯ ವೈಭವದೊಂದಿಗೆ ಮಹಾವೀರನ ವಿಹಾರ ನಡೆದು ತೀರ್ಥಗಳನ್ನು ಉದ್ಧರಿಸಿತು.

ಎಸೆವಾ ಜಿನರಾಜನ ಸಮ–|
ವಸರಣಮಾಶ್ಚರ್ಯಕರಣಮದು ಕೂಡೆ ವಿಹಾ||
ರಿಸುತುಂ ಬಂದುದು ರಾಜಗೃ|
ಹ ಸಮೀಪದ ವಿಪುಳಗಿರಿಗೆ ವಿಮಳೋತ್ಸವದಿಂ||

ರಾಜಗೃಹ ಸಮೀಪದ ವಿಪುಳಾಚಲಕ್ಕೆ ಬಂದಾಗ-ಮಗಧ ರಾಜನು ಸುಗಂಧ ತೀಡುವ ತಂಗಾಳಿಯಿಂದಲೂ, ಸೌಂದರ್ಯ

ವನ್ನು ಹೊಂದಿದ ದಿಗಂತದಿಂದಲೂ, ಮತ್ತು ಸ್ವತಃ ಜನರು ಬಂದು ಹೇಳಿದುದರಿಂದಲೂ ಸಮವಸರಣದ ಆಗಮನವನ್ನು ಅರಿತು ಹರ್ಷಚಿತ್ತನಾದನು.

ಮಗದಾಧಿಪತಿ ಶ್ರೇಣಿಕನು ಚೇಳಿನಿ ಮಹಾರಾಣಿಯೊಂದಿಗೆ ಭವ್ಯ ಜನಸಮೂಹ ಸಹಿತವಾಗಿ ಅಲ್ಲಿಗೆ ಬಂದು, ಸಮವಸರಣವನ್ನು ಹೊಕ್ಕು ಅದರ ಸೌಂದರ್ಯವನ್ನು ಬಣ್ಣಿಸಿದನು. ಮಹಾವೀರ ಸ್ವಾಮಿಯನ್ನು ಬಲಗೊಂಡು ಸಕಲ ಪೂಜಾದ್ರವ್ಯಗಳಿಂದ ಮನವಾರೆ ಪೂಜಿಸಿ, ಸಾಷ್ಟಾಂಗ ನಮಸ್ಕಾರ ಮಾಡಿ, ಶ್ರೀ, ಪಾದಪೀಠದ ಪಕ್ಕದಲ್ಲಿ ಕೈಮುಗಿದು ನಿಂತು ಸ್ತೋತ್ರ ಮಾಡಿದನು.

ಲಕ್ಷ್ಮಿ-ಸರಸ್ವತಿ-ಜಯಶ್ರೀ-ಅಮೃತಶ್ರೀಯರಿಗೆ ಆಸರೆ ನೀಡುವ ಅದೃಷ್ಟವಂತ ನೀನು; ಅವರ ವಂದನೆಗೆ ಪಾತ್ರ ನೀನು. ನಿನಗೆ ಶರಣಾದ ನರನು ದುಸ್ಸಾಧ್ಯವಾದ ದುರಿತ ಮಹಾ ಭಟರ ಸೈನ್ಯವನ್ನು ಸುಲಭವಾಗಿ ಸೋಲಿಸಬಲ್ಲ. ನಿನಗೆ ಶರಣಾದವನು ಸಂಸಾರ ಮಹಾಸಾಗರವನ್ನು ಬೊಗಸೆಯಲ್ಲಿ ಹಿಡಿಯಬಲ್ಲ ನಿನ್ನನ್ನು ನಂಬಿದವನು ಕಾಮನನ್ನು ಕಟ್ಟಿಗೆಯಂತೆ ಸುಟ್ಟು ಕಡುಪಾಪದಿಂದ ಬಿಡುಗಡೆ ಹೊಂದಿ ಮುಕ್ತನಾಗುತ್ತಾನೆ.

ಜನ-ಮನಗಳಲ್ಲಿ ತಳೆದ ಅಧಿಕ ಸಿಟ್ಟು, ಮತ್ತು ಅದರ ಪರಿಣಾಮದಿಂದ ಉಂಟಾದ ಪಾಪ ನಿನ್ನಿಂದ ಮಾಯವಾಗುವವು. ಸೊಕ್ಕು ನೀಗಿ ದಯಾಭಾವನೆ ಮೂಡಲು, ಅಭ್ಯುದಯಕ್ಕೆ

ಆಸ್ಪದವಾಗಲು ನೀನೆ ಕಾರಣ. ಪಾಪವಾಸನೆ ಕಳೆದುಕೊಳ್ಳಲು ನಿನ್ನನ್ನು ಪೂಜಿಸುವವನು ನಿನ್ನ ಸದ್ಗುಣಗಳಿಗೆ ಶರಣು ಹೋಗುವನು. ಪೂಜೆ, ವ್ರತ, ನಿಷ್ಠೆಗಳಿಗಾಗಿ ನಿನಗೆ ಶರಣಾದವನು ನಿನ್ನಲ್ಲಿ ವಿರಾಜಿಸುವ ಪುಣ್ಯರೂಪವನ್ನು ಕಂಡು ಉದ್ಧಾರವಾಗುವನು. ಹೀಗೆ ವಿವಿಧ ಸ್ತೋತ್ರಗಳಿಂದ ವರ್ಣಿಸಿ, ಶ್ರೇಣಿಕ ಮಹಾರಾಜನು ಗಣಾಗ್ರೇಸರನಾದ ಗೌತಮನ ಬಳಿಗೆ ಬಂದು ಆತನನ್ನು ವಂದಿಸಿದನು.

ಸಮವಸರಣದ ನಿಜೋಚಿತ ಕೋಷ್ಠದಲ್ಲಿ ಮಗಧಾಧಿಪನು ಕುಳಿತುಕೊಂಡು ತತ್ವವನ್ನು ತಿಳಿದುಕೊಳ್ಳುವ ಆಶೆಯನ್ನು ವ್ಯಕ್ತಪಡಿಸಿದನು. ಗೌತಮನು ಪ್ರಸನ್ನಚಿತ್ತನಾಗಿ ಗಂಭೀರ ಉದಾರ ವಾಣಿಯಿಂದ ಉಪದೇಶದ ಅಮೃತಪ್ರವಾಹವನ್ನೇ ಹರಿಸಿದನು. ಪಂಚಾಸ್ತಿಕಾಯ, ಷಡ್‌ದ್ರವ್ಯ, ಸಪ್ತತತ್ವ, ನವಪದಾರ್ಥ, ತ್ರಿಲೋಕ-ತ್ರಿಕಾಲ ಪ್ರಪಂಚ, ತ್ರಿಷಷ್ಟಿ-ಶಲಾಕಾಪುರುಷ-ಪುರಾಣ ಕಥಾ ಕಳಾಪ, ಸಾಗಾರ-ಅನಗಾರ ಭೇದಭಿನ್ನಾಚಾರ, ಅಸಾರ ಸಂಸಾರ ವೃತ್ತಿ, ಪರಮಪವಿತ್ರ ರತ್ನತ್ರಯ ಸಂಪತ್ತು-ಮುಂತಾದ ವಿಷಯಗಳನ್ನು ಕುರಿತು ಸವಿಸ್ತಾರವಾಗಿ ಹೇಳಿದನು.

ಅಧಿಕೋತ್ಸವ ಪೀಯೂಷಾಂ|
ಬುಧಿಯೊಳ್ ತನ್ನಂತರಂಗ ಮೋಲಾಡೆ ಗುಣಾಂ||
ಬುಧಿ ಮಗಧ ಮಂಡಳೇಶಂ|
ವಿಧು ವಿಶದ ಯಶೋವಿಭಾಸಿ ತಣ್ಣನೆ ತಣಿದಂ||

ಧರ್ಮೋಪದೇಶವನ್ನು ಕೇಳಿ ಸಂತೃಪ್ತಿಗೊಂಡ ಶ್ರೇಣಿಕನು ಕೈಮುಗಿದು ತನ್ನ ಪೂರ್ವ ಜನ್ಮದ ವೃತ್ತಾಂತವನ್ನು ವಿವರಿಸಬೇಕೆಂದು ವಿನಂತಿ ಮಾಡಿಕೊಂಡನು. ಗಣಧರನು ಕೂಡಲೆ ಅವನ ಭವಾಂತರಗಳನ್ನು ಕುರಿತು ಹೇಳತೊಡಗಿದನು. 'ನೀನು ಹಿಂದಿನ ಜನ್ಮದಲ್ಲಿ ಬೇಡರ ದೊರೆಯಾಗಿದ್ದಾಗ ಮುನಿಗಳ ಹತ್ತಿರ ಕಾಗೆಯ ಮಾಂಸವನ್ನು ತಿನ್ನದಿರುವ ವ್ರತವನ್ನು ಸ್ವೀಕರಿಸಿದ್ದೆ. ನಿನಗೆ ನಸಿಗುತ್ತ ಬೇನೆ ಉಂಟಾಗಿ, ಅದರ ನಿವಾರಣೆಗೋಸ್ಕರ ಕಾಗೆಯ ಮಾಂಸ ತಿನ್ನಲು, ನಿನ್ನ ಬಳಗದವರು ಒತ್ತಾಯ ತಂದರು. ನೀನು ಮಣಿಯಲಿಲ್ಲ. ಆಗ ನಿನ್ನ ಮೈದುನನನ್ನು ಕರೆಯಿಸಿಕೊಂಡರು. ಅವನು ಬರುವಾಗ ದಾರಿಯಲ್ಲಿ ಅಳುವ ಹೆಂಗಸೊಬ್ಬಳನ್ನು ಕಂಡು ದುಃಖದ ಕಾರಣವನ್ನು ವಿಚಾರಿಸಿದನು. ಅವಳು ಯಕ್ಷಿಣಿ. ಕಾಗೆಯ ಮಾಂಸ ತಿನ್ನದೆ ವ್ರತದಿಂದ ಸತ್ತರೆ ಆ ಬೇಡರ ದೊರೆ ತನ್ನ ಗಂಡನಾಗುತ್ತಾನೆ. ಅದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಬೇಡಿಕೊಂಡಳು. ಅವಳಿಗೆ ಸಮಾಧಾನ ಹೇಳಿ ಅವನು ನಿನ್ನ ಬಳಿಗೆ ಬಂದು ಮಾಂಸ ತಿನ್ನಲು ಒತ್ತಾಯ ಮಾಡಿದನು. ಅದಕ್ಕೂ ನೀನು ಸೋಲಲಿಲ್ಲ. ನೀನು ವ್ರತ ಬಿಡದೆ ಸತ್ತುದ್ದರಿಂದ ಸದ್ಗತಿ ಹೊಂದಿ ದೇವಲೋಕದಲ್ಲಿ ಹುಟ್ಟಿದೆ. ಅಲ್ಲಿ ಸುಖ ಅನುಭವಿಸಿ ಯಕ್ಷಿಣಿಯ ಗಂಡನಾಗಿ ಕೊನೆಗೆ ಭೂಮಿಗಿಳಿದು ಬಂದು ಕುಣಿಕ-ಶ್ರೀಮತಿ ದಂಪತಿಗಳಿಗೆ ಶ್ರೇಣಿಕನಾಗಿ ಹುಟ್ಟಿರುವಿ. ನಿನ್ನಲ್ಲಿ ಈಗ ವಿಷಯಕಾಂಕ್ಷೆ ಅಧಿಕವಾಗಿದೆಯಾದ್ದರಿಂದ ಇನ್ನು ನೀನು ಸತ್ತು ನರಕಗತಿ ಹೊಂದುವೆ. ಕ್ಷಾಯಿಕ ಸಮ್ಯಕ್ತ್ವದ

ಸತ್ಪರಿಣಾಮದಿಂದ ಶ್ರೇಯಸ್ಸು ಉಂಟಾಗಿ ಉತ್ಸರ್ಪಿಣಿ ಕಾಲದಲ್ಲಿ ಮುಂದೆ ನೀನು ಭವಿಷತ್ ಕಾಲದ ತೀರ್ಥಂಕರರಲ್ಲಿ ಪ್ರಥಮನಾಗುವೆ.'

ಗೌತಮನ ಭವಿಷ್ಯವಾಣಿಯನ್ನು ಕೇಳಿ ನರಕಗತಿಯ ಬಗ್ಗೆ ಉಂಟಾದ ಭೀತಿಯನ್ನು ತೀರ್ಥಂಕರತ್ವ ಪ್ರಾಪ್ತಿಯ ಪ್ರೀತಿಯಿಂದ ಹೋಗಲಾಡಿಸಿ, ಜಿನಮುನಿಯನ್ನೂ-ಗೌತಮನನ್ನೂ ಬೀಳ್ಕೊಂಡು, ಸಮವಸರಣದಿಂದ ಭೂಮಿಗಿಳಿದು, ತನ್ನ ರಾಜಧಾನಿಗೆ ಶ್ರೇಣಿಕನು ಮರಳಿ ಬಂದನು.

ಇತ್ತ ಆ ದೇವ ದೇವೋತ್ತಮನಾದ ಮಹಾವೀರ ತೀರ್ಥಂಕರನು ಗೌತಮ ಮುಂತಾದ ಏಕಾದಶಗಣಧರರು, ಶತತ್ರಯ ಪೂರ್ವಧರರು, ತ್ರಿಶತಾಧಿಕ ಸಹಸ್ರಾವಧಿ ಜ್ಞಾನಿಗಳು, ಸಪ್ತಶತ ಕೇವಲಿಗಳು, ನವಶತ ವಿಕ್ರಿಯರ್ಧಿಪ್ರಾಪ್ತರು, ಚತುಶ್ಶತ ವಾದಿಗಳು, ನವಶತ ಶಿಕ್ಷಕರು, ಚಂದನಾರ್ಯಿಕಾ ಮುಂತಾದ ೩೬ ಸಾವಿರ ಗುಣವದ್ಗಣಿನಿಯರು, ಏಕಲಕ್ಷ ಶ್ರಾವಕರು, ತ್ರಿಲಕ್ಷ ಶ್ರಾವಿಕೆಯರು, ಅಸಂಖ್ಯಾತ ದೇವದೇವಿನಿಕಾಯ, ಸುರಸಮಿತಿ, ತಿರ್ಯಗ್ವರ್ಗ- ಮುಂತಾದವರನ್ನು ಕೂಡಿಕೊಂಡು ೩೦ ವರ್ಷ ವಿಹಾರ ಮಾಡಿದನು. ಚತುರ್ಥ ಕಾಲದಲ್ಲಿ ೩ ವರ್ಷ, ೮ ತಿಂಗಳು, ೧೫ ದಿನಗಳು ಉಳಿದಿರುವಾಗ-

ಪಾವಾಪುರವರದ ಬಹಿ|
ರ್ಭೂವಿಳಸಿತ ವಿತತ ವನಕೆ ಸುರುಚಿತ ಸರಸೀ||

ಪಾವನ ವನಕ್ಕೆ ಜಿನೇಂದ್ರಂ|
ಶ್ರೀ ವೀರಂ ಮಾರವಿಜಯಿ ಬಿಜಯಂಗೆಯ್ದಂ||

ಪಾವಾಪುರದ ಹೊರವೊಳಯದಲ್ಲಿ ಸಮವಸರಣ ವಿಸರ್ಜನೆಯಾಯಿತು. ಎರಡು ದಿನದ ಮೇಲೆ ಸಾವಿರ ಯತಿಗಳೊಳಗೆ ಶ್ರೇಷ್ಠನಾದ ವೃಷಭನೊಂದಿಗೆ ವಿಹರಿಸುತ್ತ ಬಂದು, ಹುಳುಹುಪ್ಪಡಿಗಳಿಲ್ಲದ ವಿಶಾಲಕಲ್ಲಿನ ಆಸನವೊಂದನ್ನು ಹುಡುಕಿ, ಅದರ ಮೇಲೆ ಅಪ್ರತಿಮವಾದ ಗುಣಾಂಬುಧಿ ಎನಿಸಿದ ಸುದೃಢ ಮಹಾವೀರಸ್ವಾಮಿ ಪ್ರತಿಮಾಯೋಗದಲ್ಲಿ ನಿಂತು ತಪಸ್ಸಿಗೆ ತೊಡಗಿದನು.

ಆ ಮೇಲೆ, ತ್ರೈಲೋಕ್ಯ ಪ್ರಭುವಾದ ಆ ಸನ್ಮತಿಸ್ವಾಮಿ ಸೂಕ್ಷ್ಮಕ್ರಿಯಾಪ್ರತೀಕನಾಗಿ ಮೂಲ ಶರೀರ ಪ್ರಮಾಣದ ಆತ್ಮ ಪ್ರದೇಶವನ್ನು ಅಂತರ್ಮುಹೂರ್ತದಿಂದ ಬಾದರ ಮನೋವಚನೋಚ್ಛ್ವಾಸಂ, ಬಾದರ ಕಾಯೋಗ ಸೂಕ್ಷ್ಮ ಮನೋವಚನೋಚ್ಛ್ವಾಸಂಗಳುಮಂ ನಿರೋಧಿಸಿ, ಸೂಕ್ಷ್ಮಕಾಯ ಯೋಗನಾಗಿ ಸಮನಂತರಂ ತನ್ನಿರೋಧಂಗೆಯ್ದು ಯೋಗಿ ಕೇವಳಿ ಗುಣಸ್ಥಾನ ಸ್ಥಿತನಾದಂ. ಸಮುಚ್ಛಿನ್ನ ಪ್ರಾಣೋಪಾನ ಪ್ರಚಾರನಾಗಿ, ಸಮುಚ್ಛಿನ್ನ ಕ್ರಿಯಾನಿವೃತ್ತಿಯೆಂಬ ಚತುರ್ಥ ಪರಮ ಶುಕ್ಲಧ್ಯಾನದೊಳ್ ನಿಂದಂ.

ನೀಚೈರ್ಗೋತ್ರಂಗಳೆಂಬ ದ್ವಾಸಪ್ತತಿ ಪ್ರಕೃತಿಗಳಂ ನಿರವಶೇಷಂ ಮಾಡಿ, ನಿಜ ಚರಮ ಸಮಯದೊಳ್ ಅನ್ಯತರ

ವೇದ್ಯ ಮನುಷ್ಯ ಆಯುರ್ಗತಿ ತತ್ಪ್ರಾಯೋಗ್ಯಾನುಪೂರ್ವ ಪಂಚೇಂದ್ರಿಯ ಜಾತಿ ತ್ರಸ ನಾಮ ಸುಭಗಾದೇಯ ಪರ್ಯಾಪ್ತ ಬಾದರ ಯಶಸ್ ಕೀರ್ತಿ ಉಚ್ಚೈರ್ಗೋತ್ರ ತೀರ್ಥವರ ನಾಮಂಗಳೆಂಬ ತ್ರಯೋದಶ ಪ್ರಕೃತಿಗಳುಮಂ ಉನ್ಮೀಲಿಸಿದಂ.

ಇಂತು–

ಧ್ಯಾನಮಣಿ ಪ್ರದೀಪದಿನಘಾತಿ ಮಳೌಘ
ಮಹಾಂಧಕಾರ ಸಂ|
ತಾನಮನೆಯ್ದೆ ತೂಳ್ದಿ ನೆಗಟ್ದಿಷ್ಟ ಗುಣಂಗಳ
ಪುಷ್ಟಿ ತನ್ನೊಳ||
ನ್ಯೂನಮದಾಗೆ ಬೇಗದೆ ಜಗತ್ತ್ರಿತಯಾಗ್ರಮನೆಯ್ದಿ
ಮೋಕ್ಷ ಲ|
ಕ್ಷ್ಮೀನಿಧಿಯಾದನಾ ಪರಮ ಪಾವನ ಸನ್ಮತಿ
ತೀರ್ಥನಾಯಕಂ||

ಎಷ್ಟೊಂದು ಗುಣಗಳುಂಟೊ ಅಷ್ಟೆಲ್ಲವೂ ಆತ್ಮನಲ್ಲಿ ಅಳವಟ್ಟಿವೆ–ಎಂಬ ವಿಳಸನ್ಮಹಾ ಮಹಿಮೆಯನ್ನು ಕೈಕೊಂಡು ಲೋಕತ್ರಯಾಗ್ರದಲ್ಲಿ ಸ್ಥಿರವಾಗಿ ಉಳಿದು, ವಿಶುದ್ಧ ಸಿದ್ಧಗಣದ ಮಧ್ಯದಲ್ಲಿ ಮಹಾವೀರಸ್ವಾಮಿ ನೆಲಸಿದನು. ನಿರಂಜನನಾಗಿ ಭವ ನಿರ್ಮೂಲ ಮಾಡಿ ನಿರುಪಮ ವರ್ಧಮಾನ ಜಿನನೆಂದು ಕೀರ್ತಿ ಹೊಂದಿದನು.

ವಿಳಸಿತ ಕಾರ್ತಿಕಮಾಸಾ|
ಕಳಿತಾಸಿತಪಕ್ಷವರ ಚತುರ್ದಶಿಯೊಳ್ ತಾಂ||
ಬೆಳಗಪ್ಪ ಜಾವದೊಳ್ ನಿ–|
ರ್ಮಳ ಮುಕ್ತಿಶ್ರೀಗೆ ವೀರಜಿನನಿನನಾದಂ||

ಕವಿ–ಕಾವ್ಯ–ವಿವೇಚನೆ

ಆಚಣ್ಣನು ಬರೆದ ಕೃತಿಗಳು ಎರಡು: (೧) ಶ್ರೀ ಪದಾಶೀತಿ, (೨) ವರ್ಧಮಾನ ಪುರಾಣ. ಅವನು ಮೊದಲು ಶ್ರೀ ಪದಾಶೀತಿಯನ್ನು ಬರೆದು, ತನ್ನ ಕಾವ್ಯರಚನಾ ಸಾಮರ್ಥ್ಯವನ್ನು ಬಲಗೊಳಿಸಿ, ಸಾಕಷ್ಟು ಅನುಭವ ಬಂದ ಮೇಲೆ ವರ್ಧಮಾನ ಪುರಾಣವನ್ನು ಬರೆದಿರಬೇಕು. ಭಾಷಾಪ್ರೌಢಿಮೆ, ಜೀವನಾನುಭವಗಳನ್ನು ಪರಿಣತಪ್ರಜ್ಞೆಯೊಂದಿಗೆ ವರ್ಧಮಾನ ಪುರಾಣದಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ.

ಶ್ರೀಪದಾಶೀತಿ ಒಂದು ಚಿಕ್ಕಕಾವ್ಯ. ಪಂಚಪರಮೇಷ್ಠಿಗಳ ಸ್ತುತಿರೂಪವಾದ 'ಣಮೋಕಾರ ಮಂತ್ರ'ದ ಮಹಿಮೆಯನ್ನು ಕುರಿತು ವರ್ಣನೆ ಮಾಡುವ ೯೪ ಕಂದ ಪದ್ಯಗಳು ಈ ಕಾವ್ಯದಲ್ಲಿವೆ.

ಶ್ರೀಮತ್ಪಂಚಪದಂ ಗುರು|
ನಾಮಾದಿ ತ್ರಿತಳಮತುಳ ರಮ್ಯಂ ಹರ್ಮ್ಯಂ||
ದಾಮಮಯಂ ಸುಖಕಲಶೋ|
ದ್ದಾಮಂ ವಿಶ್ರಾಮಧಾಮಮಕ್ಕೆ ಮಗನಿಶಂ||

'ಬಂಧವು ಪ್ರೌಢವಾಗಿದೆ' ಎನ್ನುವ ಕವಿಚರಿತೆಕಾರರ ಅಭಿಪ್ರಾಯ ಸರಿಯಾಗಿದೆ. ಪ್ರಾರಂಭದ ಕೃತಿಯಲ್ಲಿಯೂ ಪಾಂಡಿತ್ಯಪೂರ್ಣ ಶೈಲಿ ಕಂಡು ಬಂದಿದೆ.

ವರ್ಧಮಾನ ಪುರಾಣವು ೨೪ನೆಯ ತೀರ್ಥಂಕರನಾದ ವರ್ಧಮಾನ ಮಹಾವೀರನ ಚರಿತ್ರೆ. ಇದು ೧೬ ಆಶ್ವಾಸಗಳುಳ್ಳ ಚಂಪೂಶೈಲಿಯ ಪ್ರೌಢಗ್ರಂಥ. ಕನ್ನಡದಲ್ಲಿ ಮಹಾವೀರನ ಮೇಲೆ ಬರೆದ ಕಾವ್ಯಗಳಲ್ಲಿ ಇದೇ ಉಪಲಬ್ಧ ಪ್ರಥಮ ಕೃತಿ ಎನಿಸಿತ್ತು. ಈಚೆಗೆ ೨ನೆಯ ನಾಗವರ್ಮನ (೧೦೪೨) ವರ್ಧಮಾನ ಪುರಾಣವು ದೊರೆತು ಪ್ರಕಟವಾಗಿದೆ. ಅದು ಮಹಾವೀರನ ಮೇಲೆ ಬರೆದ ಪ್ರಥಮ ಕೃತಿಯಾಗುತ್ತದೆ. (೧)೨ನೆಯ ನಾಗವರ್ಮನ (೧೦೪೨) ವರ್ಧಮಾನ ಪುರಾಣ, (೨)ಆಚಣ್ಣನ (೧೧೯೨) ವರ್ಧಮಾನ ಪುರಾಣ, (೩) ಪದ್ಮಕವಿ (೧೫೨೮)ಯ ವರ್ಧಮಾನಚರಿತೆ–ಈ ಮೂರು ಗ್ರಂಥಗಳು ನೇರವಾಗಿ ಮಹಾವೀರನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ರಚಿಸಲ್ಪಟ್ಟಿವೆ. ಮೊದಲಿನವೆರಡೂ ಪ್ರೌಢಚಂಪೂಶೈಲಿಯ ಕೃತಿಗಳು. ಮೂರನೆಯದಾದ ಪದ್ಮಕವಿಯ ಕೃತಿ ಸಾಂಗತ್ಯ ಶೈಲಿಯಲ್ಲಿ ೧೨ ಸಂಧಿಗಳಲ್ಲಿ ಬರೆಯಲ್ಪಟ್ಟಿದೆ. ಕೆಲವೇ ವರುಷಗಳ ಹಿಂದೆ 'ಜೈನಮಹಿಳೆ' ಎಂಬ ಕಾವ್ಯನಾಮವುಳ್ಳ ಕವಯಿತ್ರಿ ವರ್ಧಮಾನ ಪುರಾಣವನ್ನು ಸಾಂಗತ್ಯದ ಧಾಟಿಯಲ್ಲಿ ಬರೆಯಲು ತೊಡಗಿ ಅರ್ಧಕ್ಕೇ ನಿಲ್ಲಿಸಿ ಆಸುನೀಗಿದಳು. ನಾಲ್ಕೂವರೆ ಸಾವಿರ ಪದ್ಯಗಳನ್ನು ಜೈನ ಮಹಿಳೆ ಆಗಲೆ ರಚಿಸಿ

ದ್ದಾಳೆ. ಮುಂದಿನದನ್ನು ಭುವನಹಳ್ಳಿಯ ಪದ್ಮನಾಭ ಶರ್ಮರು ಬರೆಯಲು ತೊಡಗಿ, ಕೃತಿ ಪೂರ್ತಿಮಾಡುವ ಯೋಗ ಒದಗಿಸಲಿದ್ದಾರೆ.

ಆಚಣ್ಣನಿಗೆ ನಾಗವರ್ಮನ ಕೃತಿ ಬಹಳ ನೆರವುನೀಡಿದೆ. ೧೨-೭೬ನೆಯ ಆಚಣ್ಣನ ಪದ್ಯ ನಾಗವರ್ಮನ ಕೃತಿಯಿಂದ ಇದ್ದುದಿದ್ದಂತೆ ಎತ್ತಿಕೊಳ್ಳಲ್ಪಟ್ಟಿದೆ. ಇನ್ನೂ ಇಂಥ ಪದ್ಯ ಭಾಗಗಳೂ, ಶಬ್ದಸಮುಚ್ಚಯಗಳೂ ನಾಗವರ್ಮನ ವರ್ಧಮಾನ ಪುರಾಣದಿಂದ ಆಚಣ್ಣನ ವರ್ಧಮಾನ ಪುರಾಣದಲ್ಲಿ ಬಂದಿರುವಂತೆ ತೋರುತ್ತದೆ. ಆಚಣ್ಣನ ವರ್ಧಮಾನ ಪುರಾಣದ ೧೧ನೆಯ ಆಶ್ವಾಸದಲ್ಲಿ ಸಮ್ಯಕ್ತ್ವ ಹುಟ್ಟುವ ಬಗೆಯನ್ನು ಕುರಿತು ಹೇಳಿದ ಹಲವಾರು ಪದ್ಯಗಳು ಮಾಘಣಂದಿಯ ಶಾಸ್ತ್ರಸಾರಸಮುಚ್ಚಯದಲ್ಲಿ ಬಂದಿವೆ. ಆಚಣ್ಣ ೧೧೯೦ರಲ್ಲಿ ಇದ್ದವನು. ಮಾಘಣಂದಿಯ ಕಾಲನಿರ್ಣಯವಾಗಿಲ್ಲ. ಸುಮಾರು ೧೨೫೩ರಲ್ಲಿ ಮಾಘಣಂದಿಕವಿ ಇದ್ದಿರಬಹುದೆಂದು ಕವಿಚರಿತೆಕಾರರು ಹೇಳುತ್ತಾರೆ. ಅದು ನಿಜವಾದರೆ ಮಾಘಣಂದಿಯೇ ಆಚಣ್ಣನಿಂದ ಆ ಪದ್ಯಗಳನ್ನು ತೆಗೆದುಕೊಂಡಿದ್ದಾನೆಂಬುವುದು ಸ್ಪಷ್ಟವಾಗುವುದು. ಮಾಘಣಂದಿಯ ಕೃತಿ ಶಾಸ್ತ್ರಸಾರವಾದ್ದರಿಂದ ಬೇರೆಯವರ ಕೃತಿಗಳಿಂದ ಪದ್ಯಗಳನ್ನು ಸಂಗ್ರಹಿಸಿರುವುದೂ ಸಾಧ್ಯವಿದೆ.

ಅಸಗನು (ಸುಮಾರು ೮೫೩) ಸಂಸ್ಕೃತದಲ್ಲಿ ವರ್ಧಮಾನ ಪುರಾಣವನ್ನೂ, ಶಾಂತಿ ಪುರಾಣವನ್ನೂ ಬರೆದಿದ್ದಾನೆ. ಅವನು

ಕನ್ನಡದಲ್ಲಿಯೂ ವರ್ಧಮಾನ ಪುರಾಣವನ್ನು ಬರೆದಿರಬಹುದೋ ಏನೋ; ೨ನೆಯ ನಾಗವರ್ಮನು ಅಸಗನನ್ನು ಕನ್ನಡಕವಿಗಳ ಪಟ್ಟಿಯಲ್ಲಿ ಸೇರಿಸಿ ಸ್ತುತಿಸಿದ್ದಾನೆ. ಆಚಣ್ಣನೂ ಪೂರ್ವಕವಿಗಳ ಸ್ತುತಿಯಲ್ಲಿ ಅಸಗನ ಹೆಸರನ್ನು ಸೇರಿಸಿದ್ದಾನೆ. ಅಸಗನ ವರ್ಧಮಾನ ಪುರಾಣವು ೨ನೆಯ ನಾಗವರ್ಮ ಮತ್ತು ಆಚಣ್ಣ ಇಬ್ಬರ ಮೇಲೆಯೂ ಪ್ರಭಾವ ಬೀರಿದೆ. ಅನೇಕ ವಿಷಯಗಳಲ್ಲಿ ಕವಿದ್ವಯರು ಅಸಗನಿಗೆ ಋಣಿಯಾಗಿದ್ದಾರೆ. ಕಥಾವಸ್ತುವು ಇಬ್ಬರಿಗೂ ಅಸಗನಿಂದಲೇ ಬಂದಂತೆ ತೋರುತ್ತದೆ. ಗುಣಭದ್ರನ (೮೯೮) ಉತ್ತರ ಪುರಾಣದೊಳಗೆ ಬರುವ ವರ್ಧಮಾನ ಚರಿತ್ರೆಯನ್ನೂ, ಚಾವುಂಡರಾಯನ (೯೭೮) ಚಾವುಂಡರಾಯ ಪುರಾಣದೊಳಗೆ ಬರುವ ವರ್ಧಮಾನ ಚರಿತ್ರೆಯನ್ನೂ, ಅಲ್ಲದೆ ಇನ್ನೂ ಹಲವು ಸಂಸ್ಕೃತ-ಪ್ರಾಕೃತ ವರ್ಧಮಾನಪುರಾಣಗಳನ್ನೂ ೨ನೆಯ ನಾಗವರ್ಮ ಮತ್ತು ಆಚಣ್ಣ ಕವಿಗಳು ನೋಡಿರಬಹುದು. ಆದರೆ, ಒಂದು ಮಾತು ಮಾತ್ರ ನಿಜ: ಇಬ್ಬರ (ನಾಗವರ್ಮ-ಆಚಣ್ಣ) ಕಥಾವಸ್ತು ಒಂದೇ ತೆರನಾಗಿದೆ; ಇಬ್ಬರಿಗೂ ಅಸಗನ ಕೃತಿಯೋ ಅಥವಾ ಮತ್ತಾವುದೋ ಒಂದೇ ಕೃತಿ ಆಕರವಾಗಿದ್ದಂತೆ ತೋರುತ್ತದೆ.

ಆಚಣ್ಣನು ತನ್ನ ತಂದೆಯಾದ ಕೇಶಿರಾಜನು ತಿಕ್ಕಣ-ಚಾವಣರೊಡನೆ ಸೇರಿಕೊಂಡು ವರ್ಧಮಾನ ಪುರಾಣವನ್ನು ರೇಚಣ ಚಮೂಪತಿಯ ಪ್ರೇರಣೆಯಿಂದ ಪ್ರಾರಂಭಿಸಿದ್ದನೆಂದೂ ದೈವನಿಯೋಗದಿಂದ ಅದು ಮುಂದುವರಿಯದೆ ನಿಂತುಹೋಯಿ

ತೆಂದೂ, ಮತ್ತೆ ರೇಚಣನ ಪ್ರೇರಣೆಯಿಂದಲೇ ತಾನು ಅದನ್ನು ಕೈಕೊಂಡು ಮುಗಿಸಿದುದಾಗಿಯೂ ಹೇಳುತ್ತಾನೆ. ಆದರೆ ಅವರು ಕೃತಿಯನ್ನು ಪ್ರಾರಂಭಿಸಿ ಎಲ್ಲಿಯವರೆಗೆ ತಂದು ಬಿಟ್ಟಿದ್ದರೋ ತಿಳಿಯುವುದಿಲ್ಲ. ಕಾವ್ಯಶೈಲಿಯ ಅಭ್ಯಾಸ ದಿಂದಲೂ ಅದನ್ನು ಕಂಡುಹಿಡಿಯುವುದು ಸಾಧ್ಯವಾಗುವು ದಿಲ್ಲ. ಬಹುಶಃ ಆಚಣ್ಣನೇ ಕೃತಿಯನ್ನು ಆದ್ಯಂತವಾಗಿ ಬರೆದು ಮುಗಿಸಿದಂತೆ ಕಾಣುತ್ತದೆ.

ಹದಿನಾರು ಆಶ್ವಾಸಗಳ ದೊಡ್ಡಕಾವ್ಯದಲ್ಲಿ ವರ್ಧ ಮಾನನ ಚರಿತ್ರೆ ಕೇವಲ ಕೊನೆಯ ನಾಲ್ಕು ಅಧ್ಯಾಯಗಳಲ್ಲಿ ಮಾತ್ರ ಬಂದಿದೆ. ಉಳಿದ ಕಾವ್ಯ ಭಾಗವೆಲ್ಲ ಭವಾವಳಿಯ ಕಥೆಗೆ ಮೀಸಲಾಗಿದೆ. ೧೩ನೆಯ ಆಶ್ವಾಸದ ೩೧ನೆಯ ಪದ್ಯ ದಿಂದ ಮಹಾವೀರನ ಚರಿತ್ರೆ ಪ್ರಾರಂಭವಾಗಿ ಅದೇ ಆಶ್ವಾಸದ ಕೊನೆಯಲ್ಲಿ ಮಹಾವೀರನ ಜನನವಾಗುತ್ತದೆ.೧೪ನೆಯ ಆಶ್ವಾಸ ದಲ್ಲಿ ಗರ್ಭಕಲ್ಯಾಣ, ಜನ್ಮಕಲ್ಯಾಣ, ಬಾಲಲೀಲೆಗಳು ನಡೆದು, ೩೦ವರ್ಷಗಳ ಕುಮಾರಕಾಲ ಮುಗಿದು, ಪರಿನಿಷ್ಕ್ರಮಣ ಕಲ್ಯಾಣ, ತಪಸ್ಸು, ಕೇವಲಜ್ಞಾನಾದಿಗಳು ದೊರಕಿಬಿಡುತ್ತವೆ. ೧೬ನೆಯ ಆಶ್ವಾಸದಲ್ಲಿ ಸಮವಸರಣ, ಗೌತಮ ಗಣಧರ ಶ್ರೇಣಿಕರಾಜರ ವರ್ಣನೆ–ಕಥೆಗಳೊಂದಿಗೆ ಪರಿನಿಷ್ಕ್ರಮಣ ಕಲ್ಯಾಣನಡೆದು ಕಾವ್ಯ ಮುಗಿದುಬಿಡುತ್ತದೆ.ತೀರಸಂಕ್ಷಿಪ್ತವಾಗಿ ವರ್ಧಮಾನನ ಚರಿತ್ರೆ ಹೇಳಲ್ಪಟ್ಟಿದ್ದರೂ ಕಥೆ ಕಣ್ಣಲ್ಲಿ ಕಟ್ಟಿ ನಿಲ್ಲುತ್ತದೆ. ಅದಕ್ಕೆ ಕಾರಣ ಆಚಣ್ಣನ ಸನ್ನಿವೇಶ ರಚನಾ

ಚಾತುರ್ಯ. ಜಿನಶಿಶುವಿನ ಜನ್ಮಾಭಿಷೇಕ ಪ್ರಸಂಗ, ವರ್ಧಮಾನನು ಓರಗೆಯವರೊಂದಿಗೆ ಮರಗೊಂಬಿನಾಟವಾಡುವ ಪ್ರಸಂಗ, ಕೂಲಭೂಪಾಲನ ಆಹಾರದಾನದ ಸನ್ನಿವೇಶ, ಚಂದನೆಯ ಕಥೆಯ ಸನ್ನಿವೇಶ, ಶ್ರೇಣಿಕ ಮಹಾರಾಜನ ಕಥೆಯ ಸನ್ನಿವೇಶ ಮನಸ್ಸನ್ನು ಸೆರೆಹಿಡಿಯುತ್ತವೆ; ಕಾವ್ಯವನ್ನು ಜೀವಂತಗೊಳಿಸುತ್ತವೆ.

ಭವಾವಳಿಯ ಕಥೆಗಳನ್ನು ಕ್ರಮವಾಗಿ ಹೇಳಿಲ್ಲ. ಆದರೂ, ಪುರೂರವನೆಂಬ ಬೇಡರದೊರೆ (೧ನೆಯ ಭವ)ಯ ಮುನಿ ಸಂದರ್ಶನದ ಸನ್ನಿವೇಶ, ಮರೀಚಿ (೩ನೇ ಭವ)ಯ ಮಿಥ್ಯಾವಾದ, ವಿಶ್ವನಂದಿ (೧೭ನೆಯ ಭವ)ಯ ಪರಾಕ್ರಮ ಮತ್ತು ಆಕಳು ಹಾಯ್ದು ಕರುಳು ಹೊರಬಿದ್ದು ಸಾಯುವ ಸನ್ನಿವೇಶ, ತ್ರಿಪೃಷ್ಟನ ರಸಿಕತೆ ಮತ್ತು ಪರಾಕ್ರಮಗಳು (೧೯ನೆಯ ಭವ). ಸಿಂಹರಾಜನಿಗೆ ಚಾರಣರ ಉಪದೇಶ, ಹರಿಷೇಣನ ಸಲ್ಲೇಖನ ಸಮಾಧಿ (೨೭ನೆಯ ಭವ), ನಂದನ (೩೦ನೆಯ ಭವ)ನ ವೈರಾಗ್ಯ ಮುಂತಾದವುಗಳನ್ನು ಒಮ್ಮೆ ಕೇಳಿದರೆ ಸಾಕು ಮನಸ್ಸಿನಿಂದ ಆ ಘಟನೆಗಳನ್ನು ಕಿತ್ತಿಹಾಕುವುದು ಸಾಧ್ಯವಾಗುವುದಿಲ್ಲ. ಅಂಥ ತೀಕ್ಷ್ಣತೆ ಕಥಾವಸ್ತುವಿನಲ್ಲಿಯೇ ಇದೆ. ಅದನ್ನು ಆಚಣ್ಣ ಇನ್ನೂ ಹರಿತಗೊಳಿಸಿದ್ದಾನೆ. ೩ರಿಂದ ೧೦ರ ವರೆಗೆ ಸುಮಾರು ಏಳು ಅಧ್ಯಾಯಗಳಲ್ಲಿ ತ್ರಿಪೃಷ್ಟನ ಕಥೆಯನ್ನು ಬೆಳೆಸಿದ್ದು ನಿಜವಾಗಿಯೂ ಬೇಸರ ತರುತ್ತದೆ. ಪ್ರಮಾಣ ಜ್ಞಾನವನ್ನು ಕವಿ ಹೊಂದಿಲ್ಲವೆನಿಸುತ್ತದೆ. ಎಲ್ಲ ಪುರಾಣಕಾರರೂ

ಹೀಗೆಯೇ. ಅಸಗನು ಕೊನೆಯ ಮೂರೇ ಅಧ್ಯಾಯಗಳಲ್ಲಿ ವರ್ಧಮಾನನ ಚರಿತ್ರೆಯನ್ನು ಆಚಣ್ಣನಿಗಿಂತಲೂ ಸಂಕ್ಷಿಪ್ತವಾಗಿ ಹೇಳಿಮುಗಿಸಿದ್ದಾನೆ. ಈ ವಿಷಯದಲ್ಲಿ ನಾಗವರ್ಮನು ಸ್ವಲ್ಪ ವಾಸಿಯಾಗಿದ್ದಾನೆ. ಅವನಿಗೆ ಪ್ರಮಾಣ ಪ್ರಜ್ಞೆ ಒಂದಿಷ್ಟು ಚನ್ನಾಗಿದೆ.

ಘರ್ಷಣೆಗಳು ಇಲ್ಲದ್ದರಿಂದ ಆಚಣ್ಣನ ಕೃತಿಯಲ್ಲಿ ಪಾತ್ರ ಚಿತ್ರಣ ಅಷ್ಟೊಂದು ಚನ್ನಾಗಿಲ್ಲವೆಂದೇ ಹೇಳಬಹುದು. ಆದರೂ, ಪ್ರರೂರವ, ಮರೀಚಿ ವಿಶ್ವನಂದಿ ತ್ರಿಪೃಷ್ಟನ ಪಾತ್ರಗಳನ್ನು ಭವಾವಳಿಯಲ್ಲಿಯೂ, ಮರಗೊಂಬಿನಾಟದ ಬಾಲಕ ವರ್ಧಮಾನ, ಕೂಲರಾಜ, ಚಂದನೆಯ ಕರುಣಾಜನಕ ಸ್ಥಿತಿ, ಗೌತಮನ ಗರ್ವಹರಣ. ಸನ್ಮತಿಯ ಸತ್ವಪರೀಕ್ಷೆ, ಶ್ರೇಣಿಕ ರಾಜನ ಪೂರ್ವಜನ್ಮದ ಖದಿರಸಾರನ ಕಥೆ ಮುಂತಾದ ಪ್ರಸಂಗಗಳಲ್ಲಿ ಬರುವ ವ್ಯಕ್ತಿಗಳ ಚಿತ್ರಣವನ್ನು ಪ್ರಶಂಸೆಮಾಡದೆ ಬಿಡುವುದು ಸಾಧ್ಯವಿಲ್ಲ.

ಆಚಣ್ಣನ ಕಾವ್ಯ ಶೈಲಿ ಸಂಸ್ಕೃತ ಭೂಯಿಷ್ಠವಾದುದು. ಗಂಭೀರವಾದುದು. ಪಾಂಡಿತ್ಯಪೂರ್ಣವಾದುದು. ಛಂದಸ್ಸಿನ ಬಿಗಿ, ಪದಜೋಡಣೆಯ ಪ್ರೌಢಿಮೆ, ವರ್ಣನೆಯ ಕಟ್ಟು ನಿಟ್ಟು, ತತ್ವಬೋಧೆಯ ಶಿಸ್ತು ಪ್ರೌಢವ್ಯಾಸಂಗಿಗಳಿಗೆ ಮೆಚ್ಚುಗೆಯಾಗುತ್ತವೆ. ಒಮ್ಮೊಮ್ಮೆ ಅತಿಸಂಸ್ಕೃತ ಬಳಕೆಯಿಂದ ಕಾವ್ಯ ಕ್ಲಿಷ್ಟವಾಗಿ ಪರಿಣಮಿಸುತ್ತದೆ. ಒಮ್ಮೊಮ್ಮೆ ತೀರ ಸರಳವಾಗಿಯೂ ಪದ್ಯಗಳನ್ನು ಹೆಣೆದಿರುವುದುಂಟು. ಶಬ್ದಾಡಂಬರಕ್ಕೂ

ಮನಸ್ಸನ್ನು ತೆತ್ತು ಯಮಕ, ದ್ವ್ಯಕ್ಷರಿ, ಗತಪ್ರತ್ಯಾಗತ ಮೊದಲಾದ ಶಬ್ದಾಲಂಕಾರಗಳನ್ನು ಬಳಸಿರುವುದುಂಟು. ಇದರಿಂದ ಚಮತ್ಕಾರ ಸಾಧಿಸಲು ಹೊರಟ ಕವಿಯು ಸಹೃದಯ ರಸಿಕರ ಸಹಾನುಭೂತಿಯನ್ನು ಕಳೆದುಕೊಳ್ಳುವ ಸಂಭವವೂ ಉಂಟು. ಆದರೆ ಕೆಲವು ಕಡೆಯಲ್ಲಿ ಕವಿಯು ಬಳಸಿದ ಉಪಮೆ, ರೂಪಕ, ಅರ್ಥಾಂತರನ್ಯಾಸ, ಪರಿಸಂಖ್ಯೆಗಳು ಹಿತಮಿತವಾಗಿ ಬಂದು ಆನಂದವನ್ನು ಉಂಟು ಮಾಡುತ್ತವೆ. ತ್ರಿಪೃಷ್ಟ-ಸ್ವಯಂ ಪ್ರಭೆಯರ ಪ್ರಣಯ ಜೀವನದಲ್ಲಿ ಶೃಂಗಾರರಸ ಒಂದಿಷ್ಟು ಹೆಚ್ಚಾಗಿಯೇ ಬಂದಿದೆ. ಜಿನಶಿಶುವಿನ ಬಗ್ಗೆ ಇಂದ್ರ-ಇಂದ್ರಾಣಿ ಯರು ತೋರಿಸುವ ವಾತ್ಸಲ್ಯ, ಚಂದನೆಯ ಕಥೆಯಲ್ಲಿ ಕರುಣೆ ಅದ್ಭುತಗಳು, ತಪಸ್ಸಿನಲ್ಲಿ ತೊಡಗಿದ ವರ್ಧಮಾನನ ಶಾಂತಿ, ಅದರಲ್ಲಿಯೂ ಕೇವಲ ಜ್ಞಾನ ಉಂಟಾದ ಪ್ರಸಂಗದಲ್ಲಿ ಮತ್ತು ಸಮವಸರಣ ಚಿತ್ರಣದಲ್ಲಿ ತೋರಿದ ಶಾಂತರಸ, ವಿಶ್ವನಂದಿಯ ವೀರವೃತ್ತಿ, ಬಾಲಕ ಮಹಾವೀರನ ಧೈರ್ಯ, ಸಿಂಹರಾಜನ ಪ್ರಾಯೋಪಗಮನ ವ್ರತ, ಹರಿಷೇಣನ ಸಲ್ಲೇಖನ ವ್ರತ-ಮುಂತಾದ ಪ್ರಸಂಗಗಳಲ್ಲಿ ಕಂಡು ಬರುವ ವೀರರಸ, ತ್ರಿಪಿಷ್ಟ ಅಶ್ವಗ್ರೀವರ ಯುದ್ಧ ವರ್ಣನೆಯಲ್ಲಿ ಬರುವ ವೀರಾದ್ಭುತಗಳ-ರಸನಿರೂಪಣೆಯಲ್ಲಿ ಕವಿಗಿರುವ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತವೆ.

'ರಸಭಾವಗಳನ್ನು ಮನಮುಟ್ಟುವಂತೆ ವರ್ಣಿಸುವುದಕ್ಕೆ ಅನುಕೂಲವಾದ ಶಬ್ದ ಭಂಡಾರವು ಆಚಣ್ಣನಲ್ಲಿತ್ತು. ಅವನು

ಉಚಿತ ಸಂದರ್ಭಗಳಲ್ಲಿ ಹಲವು ಸಂಸ್ಕೃತ ಪದಗಳನ್ನೂ, ಅಪೂರ್ವವಾದ ಕೆಲವು ಅಚ್ಚಗನ್ನಡ ಶಬ್ದಗಳನ್ನೂ ಉಪಯೋಗಿಸಿರುವನು. ಅನೇಕ ಸಂಸ್ಕೃತ ಶ್ಲೋಕಗಳೂ ಕನ್ನಡ ಗಾದೆಗಳೂ, ನುಡಿಗಳೂ ಅವನ ಗ್ರಂಥಗಳಲ್ಲಿ ದೊರಕುತ್ತವೆ'–ಎಂದು ಎಂ. ಮರಿಯಪ್ಪ ಭಟ್ಟರು ಹೇಳಿದುದು ನಿಜವಾಗಿದೆ. ಭಾಷಾಶಾಸ್ತ್ರದ ಅಧ್ಯಯನಕ್ಕೆ ವರ್ಧಮಾನ ಪುರಾಣದಲ್ಲಿ ಸಾಕಷ್ಟು ಸಾಮಗ್ರಿ ದೊರಕುತ್ತದೆ.

"ಪಾರ್ಶ್ವನು 'ಜೈನಾಗಮಗರ್ಭ' 'ಪ್ರಸನ್ನಗುಣ' ಎಂದು ಇವನನ್ನು ನುತಿಸಿ ನವರಸಗಳಲ್ಲಿ ಇತರ ರಸಕ್ಕೆ ಅವಕಾಶ ಕೊಡದೆ ಶಾಂತರಸಕ್ಕೆ ಪ್ರಾಶಸ್ತ್ಯ ಕೊಟ್ಟು 'ಪ್ರಥು ಹೃದಯನಾದನೆಂದಾಚಣ್ಣಂ' ಎಂದು ಹೇಳಿದ್ದಾನೆ"-ಎಂದಿದ್ದಾರೆ ಡಾ|| ರಂ.ಶ್ರೀ. ಮುಗಳಿಯವರು. ಶಾಂತ ರಸಕ್ಕೆ ವರ್ಧಮಾನ ಪುರಾಣದಲ್ಲಿ ಆಚಣ್ಣನು ಹೆಚ್ಚು ಸ್ಥಳ ಮಾಡಿಕೊಟ್ಟಿದ್ದಾನೆ, ಎಂಬುದೇನೋ ಸರಿಯೆ; ಆದರೆ ಉಳಿದ ರಸಗಳಿಗೆ ಅವಕಾಶ ಮಾಡಿಕೊಟ್ಟಿಲ್ಲವೆಂದೇನಲ್ಲ. ಶೃಂಗಾರ, ವೀರ, ಕರುಣೆಗಳೂ ಬಂದಿವೆ.

'ಕಾವ್ಯ ದೃಷ್ಟಿಯಿಂದ 'ಸೌಖ್ಯಾಮೃತಸಾರ'ವನ್ನು ಈ ಕೃತಿ ಹರಿಯುತ್ತದೆ ಎನ್ನುವಂತಿಲ್ಲ. ಸಹಜತೆ ಬಂದಿದ್ದರೂ, ಸಂಪ್ರದಾಯಾನುಸಾರಿಯಾಗಿ ಆಚಣ್ಣನು ಕಾವ್ಯವನ್ನು ಹೆಣೆದಿದ್ದಾನೆ,–ಎಂದು ಎಂ. ಮರಿಯಪ್ಪ ಭಟ್ಟರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕವಿ ಮಾತ್ರ ತನ್ನ ಕೃತಿಯ ಬಗ್ಗೆ ತುಂಬ

ಆತ್ಮವಿಶ್ವಾಸ ಹೊಂದಿದ್ದಾನೆ. ತನ್ನ ಕೃತಿ 'ಸದಳಂಕಾರದ ಆಗಾರಂ. ಉದ್ಘರಸದ ಭಾವಾನೀಕದೋಕಂ. ಸದರ್ಥದಸಾರ್ಥಂ. ವರಶಬ್ದವೃಂದದ ವಿರಾಜನ್ಮಂದಿರಂ. ನಾಡೆಯುಂ ಮೃದುಸಂದರ್ಭದಗರ್ಭಂ. ಇಂತಿದೆನಿಸಲ್ ಸಾಲ್ದಿರ್ದ ಕಾವ್ಯಂ ಸಭಾಸದರ ಅಂತಃಕರಣಕ್ಕೆ ಅದೇಂ ಕರೆಯದೇ ಸೌಖ್ಯಾಮೃತಸಾರಮಂ?' ಎಂದುಕೊಂಡು ಸಂತಸವನ್ನು ಪ್ರಕಟಿಸಿದ್ದಾನೆ. ವಿದ್ವಾಂಸರಿಂದ ಸಭಾಸದರಿಂದ, ರಾಜನಿಂದ ಮರ್ಯಾದೆಯನ್ನು ಹೊಂದಿದ್ದಾನೆ.

'ವರ್ಣನೆಗಳಲ್ಲಿಯೂ, ಪಾತ್ರರಚನೆಗಳಲ್ಲಿಯೂ ಕವಿ ಅಷ್ಟು ಯಶಸ್ವಿಯಾಗಿಲ್ಲ.' ಎಂದೂ ಎಂ. ಮರಿಯಪ್ಪಭಟ್ಟರು ಹೇಳಿದ್ದಾರೆ. ಆದರೆ ಕವಿ ವರ್ಣನೆಗಳಲ್ಲಿ ಯಶಸ್ವಿಯಾಗಿರುವಂತೆ ತೋರುತ್ತದೆ; ಅಷ್ಟಾದಶವರ್ಣನೆಗಳೆಲ್ಲವನ್ನೂ ತನ್ನ ಕಾವ್ಯದಲ್ಲಿ ತಂದಿದ್ದಾನೆ, ದೇಶವರ್ಣನೆ, ಪುರವರ್ಣನೆ, ಪರ್ವತ. ವರ್ಣನೆ, ಯುದ್ಧವರ್ಣನೆ. ತ್ರಿಪೃಷ್ಟ–ಸ್ವಯಂಪ್ರಭೆಯರ ವಿರಹವರ್ಣನೆ, ವಿಪ್ರಲಂಬ ಶೃಂಗಾರ ವರ್ಣನೆ, ಬೆಳುದಿಂಗಳ ವರ್ಣನೆ, ಸೂರ್ಯೋದಯದ ವರ್ಣನೆ, ವೈರಾಗ್ಯವರ್ಣನೆ, ನರಕವರ್ಣನೆ, ಪಂಚಕಲ್ಯಾಣಗಳ ವರ್ಣನೆ, ಸಮವಸರಣದ ವರ್ಣನೆ–ಮುಂತಾದವುಗಳಿಂದ ಕಾವ್ಯ ತುಂಬಿ ತುಳುಕುತ್ತಿದೆ. ಕೆಲವೊಂದು ವರ್ಣನೆಗಳು ಬಹಳ ಮನೋಹರವಾಗಿವೆ.

ಒಟ್ಟಿನ ಮೇಲೆ ಆಚಣ್ಣ ಕವಿ ಅಷ್ಟೊಂದು ಕೀರ್ತಿವಂತ ಕವಿಯಲ್ಲದಿದ್ದರೂ, ಅಲಕ್ಷಿಸುವಂತಹ ಕವಿಯೇನೂ ಅಲ್ಲ.

ಅವನ ಭಾಷಾಸಂಪತ್ತಿ, ಪಾಂಡಿತ್ಯಪೂರ್ಣವಾದ ಶೈಲಿ, ಜೈನ ತತ್ತ್ವಜ್ಞಾನದ ತಿಳುವಳಿಕೆ, ಮಹಾವೀರನಂತಹ ಒಬ್ಬ ಮಹತ್ವದ ಜೈನ ತೀರ್ಥಂಕರನ ಕಥಾನಕ, ಎಂದೆಂದಿಗೂ ಮರೆಯಲಾರದ ಕೆಲವು ಸುಂದರ ಸನ್ನಿವೇಶಗಳ ಚಿತ್ರಣ-ಮುಂತಾದವುಗಳನ್ನು ಅಭ್ಯಾಸಿಗಳು ಮೆಚ್ಚಿಕೊಳ್ಳದೆ ಇರಲಾರರು. ಜೈನ ಧರ್ಮದ ಅನುಯಾಯಿಗಳ ದೃಷ್ಟಿಯಲ್ಲಿ ಆಚಣ್ಣನು ಸಾಕಷ್ಟು ಎತ್ತರವಾದ ವ್ಯಕ್ತಿತ್ವವನ್ನು ಪಡೆದುಕೊಂಡೇ ನಿಲ್ಲುತ್ತಾನೆ. ಅದಕ್ಕೆ ಕಾರಣ ಅವನ ಧರ್ಮಾನುರಾಗ, ತತ್ವಪ್ರೀತಿ, ತೀರ್ಥಂಕರ ವರ್ಧಮಾನನಲ್ಲಿ ತೋರುವ ಭಕ್ತಿಭಾವ, ಆದರಗೌರವಾದಿಗಳು ಪ್ರಚಂಡ ಶಕ್ತಿಯನ್ನು ಪಡೆದು ನಿಲ್ಲುತ್ತವೆ. ಜೈನ ಅಭಿಮಾನ ಹುಟ್ಟಿಸುವಲ್ಲಿ ವರ್ಧಮಾನ ಪುರಾಣದ ಪಾತ್ರ ಮಹತ್ವಪೂರ್ಣವಾದುದಾಗಿದೆ. ಆ ಕೆಚ್ಚನ್ನು ಹುಟ್ಟಿಸಿದ ಕವಿಯ ಸೇವೆ ಎಂದೆಂದಿಗೂ ವ್ಯರ್ಥವಾಗದು. ಆಚಣ್ಣನ ಸಂಪ್ರದಾಯದ ತೀರ್ಥಂಕರ ಜೀವನದ ಪಡಿಯಚ್ಚಿನ ವಜ್ರದ ಪೆಟ್ಟಿಗೆಯಲ್ಲಿಯೇ ಜೈನ ತತ್ತ್ವಗಳ ಮುತ್ತುರತ್ನಗಳು ಸುರಕ್ಷಿತವಾಗಿವೆ.

ಗ್ರಂಥಋಣ

೧. ಅಸಗಕೃತ ವರ್ಧಮಾನ ಚರಿತ್ರ (ಸಂಸ್ಕೃತ)
ಟೀಕೆ (ಮರಾಠಿ) ಸಂ : ಜಿನದಾಸ ಫಡಕುಳೆ

೨. ೨ನೆಯ ನಾಗವರ್ಮನ ವರ್ಧಮಾನ ಪುರಾಣಂ–
ಸಂ : ಬಿ. ಎಸ್. ಸಣ್ಣಯ್ಯ

೩. ಆಚಣ್ಣನ ವರ್ಧಮಾನ ಪುರಾಣಂ
ಸಂ : ಎಂ. ಮರಿಯಪ್ಪ ಭಟ್ಟ

೪. ಗುಣಭದ್ರಕೃತ ಉತ್ತರ ಪುರಾಣ–
ಸಂ. : ಎ. ಶಾಂತಿರಾಜಶಾಸ್ತ್ರಿ

೫. ಜಿನಸೇನ–ಗುಣಭದ್ರ ಪ್ರಣಿತ ಮಹಾಪುರಾಣಸಾರ–
ಡಿ. ಎ. ಬೋಗಾರ ಮತ್ತು ಮಿರ್ಜಿ ಅಣ್ಣಾರಾಯ

೬. ಷಟ್ ಖಂಡಾಗಮ : ಸಂ. : ಸುಬ್ಬಯ್ಯಶಾಸ್ತ್ರೀ

೭. ಮಾಘಣಂದಿ : ಶಾಸ್ತ್ರಸಾರಸಮುಚ್ಚಯ
ಸಂ. : ಚಂದ್ರಸಾಗರಸ್ವಾಮಿ

೮. ಪಂಪಕವಿ : ಆದಿ ಪುರಾಣಂ–
ಸಂ. : ಕೆ.ಜಿ.ಕುಂದಣಗಾರ ಮತ್ತು ಎ.ಪಿ. ಚೌಗುಲೆ

೯. ಪಂಪಕವಿ : ಆದಿಪುರಾಣ ಸಂಗ್ರಹ–
ಸಂ. : ಎಲ್. ಗುಂಡಪ್ಪ

೧೦. ಜೈನ ದರ್ಶನ–ಮಿರ್ಜಿ ಅಣ್ಣಾರಾಯ

೧೧. ಜೈನ ತತ್ವಸಾರ ಸಂಗ್ರಹ– ಡಿ. ಪುಟ್ಟಸ್ವಾಮಿ

೧೨. ಕರ್ಣಾಟಕ ಕವಿಚರಿತೆ–೧, ೨, ೩,
– ಆರ್. ನರಸಿಂಹಾಚಾರ್ಯ

೧೩. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ–
ಎಂ. ಮರಿಯಪ್ಪ ಭಟ್ಟ

೧೪. ಕನ್ನಡ ಸಾಹಿತ್ಯ ಚರಿತ್ರೆ– ರಂ. ಶ್ರೀ. ಮುಗಳಿ

೧೫. ಸಂಸ್ಕೃತ ವಾಙ್ಮಯಕ್ಕೆ ಜೈನ ಕವಿಗಳ ಕಾಣಿಕೆ–
ಕೆ. ಭುಜಬಲಿಶಾಸ್ತ್ರಿ

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಶಿಕ್ಷಣ ಮತ್ತು ಸಂಸ್ಕೃತಿ —ಆರ್. ಎಸ್. ಬಿದರಿ

ಜೀವವಿಮೆ ಹಾಗೂ ಭಾರತದಲ್ಲಿ ಬಂಡವಾಳ ಸಂಚಯ —ಎಂ. ಎಂ. ಹೆಗಡೆ

ಸಾಮಾಜಿಕ ಬದಲಾವಣೆ ಮತ್ತು ಪ್ರಗತಿ —ಕೆ. ಜಿ. ಜೋಶಿ

ಜಗತ್ತು ಮಣ್ಣುಗೂಡೀತೇ? —ರಂಗನಾಥ ಕೌಲಗುಡ್

ಕವಿ ಬ್ರಹ್ಮಶಿವ —ಎಸ್. ಪಿ. ಪಾಟೀಲ

ಅರವಿಂದಾಶ್ರಮದ ಶ್ರೀಮಾತೆ —ಸ. ಸ. ಮಾಳವಾಡ

ಸಾಪೇಕ್ಷತಾ ವಾದ —ವ್ಹಿ. ಎಂ. ಕೋರವಾರ

ಸಂಕರಣ ಬೀಜೋತ್ಪಾದನೆ —ಎಂ. ಎಂ. ಹೊಸಮನಿ

ನರಗುಂದದ ಇತಿಹಾಸ —ಎಸ್.ಎಲ್. ಶಾಂತಕುಮಾರಿ

ವ್ಯಾಸಂಗವಿಸ್ತರಣ — ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩